ಸಂಪುಟ: 06 ಸಂಚಿಕೆ: 62 ಪುಟಗಳು: 08 ಶನಿವಾರ 16 ಮೇ 2026
www.udayavahini.in epaper.udayavahini.in Udaya vahini news Udaya vahini news Udayavahini news youtube udayavahininews@gmail.com
ಸಂಪಾದಕರು: ಟಿ. ಹೊಂಬೇಗೌಡ
RNI No. KARKAN/2021/80833
9448225696 +91 8035841833
₹5

**ಮುಂಜಾನೆ ಮಾತು**

ಶತಮೂರ್ಖ ಕೂಡ ತನ್ನ ಹೃದಯಕ್ಕೆ ಹತ್ತಿರವಾದ ಕೆಲಸವನ್ನು ಸಾಧಿಸಬಲ್ಲ. ಆದರೆ ಕೆಲಸವನ್ನು ತನ್ನ ಅಭಿರುಚಿಗೆ ತಕ್ಕಂತೆ ರೂಪಿಸುವವನು ಮಾತ್ರ ಬುದ್ಧಿವಂತ.

ಉದಯ ವಾಹಿನಿ
ಸರ್ವ ಸಮಾನತೆಯ ಕನ್ನಡ ದಿನಪತ್ರಿಕೆ

## ದರ್ಶನ್‌ಗೆ ಇನ್ನೂ ಒಂದು ವರ್ಷ ಜಾಮೀನು ಇಲ್ಲ: ಸುಪ್ರೀಂ

• ಉದಯವಾಹಿನಿ, ಬೆಂಗಳೂರು

ರೇಣುಕಾಸ್ವಾಮಿ ಕೊಲೆ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿರುವ ನಟ ದರ್ಶನ್, ಜಾಮೀನು ಅರ್ಜಿಯನ್ನು ಸುಪ್ರೀಂ ಕೋರ್ಟ್ ವಜಾಗೊಳಿಸಿದೆ. ಇನ್ನು ಒಂದು ವರ್ಷದವರೆಗೆ ನಟ ದರ್ಶನ್‌ಗೆ ಜಾಮೀನು ನೀಡಲು ನಿರಾಕರಿಸಿದೆ. ಮುಂದಿನ ಒಂದು ವರ್ಷದಲ್ಲಿ ವಿಚಾರಣೆಯಲ್ಲಿ ಯಾವುದೇ ಪ್ರಗತಿಯಾಗದಿದ್ದಲ್ಲಿ ಮತ್ತೊಮ್ಮೆ ಜಾಮೀನಿಗೆ ಅರ್ಜಿ ಸಲ್ಲಿಸಬಹುದು ಎಂದು ಆದೇಶಿಸಿದೆ. ಮುಂದಿನ ಒಂದು ವರ್ಷದಲ್ಲಿ ಬಾಕಿಯಿರುವ 60 ಪ್ರಮುಖ ಸಾಕ್ಷಿಗಳ ವಿಚಾರಣೆ ನಡೆಸಬೇಕು ಎಂದು ನ್ಯಾಯಮೂರ್ತಿ ಜೆ.ಬಿ. ಪಾರ್ದಿವಾಲಾ ನೇತೃತ್ವದ ಪೀಠ ನಿರ್ದೇಶನ ನೀಡಿದೆ.

ದರ್ಶನ್‌ಗೆ ರಾಜಾತಿಥ್ಯ ನೀಡಬೇಡಿ ಎಂದು ಹಿಂದೆ ನಿರ್ದೇಶನ ನೀಡಿದ್ದೆವು. ಅದರ ಅರ್ಥ ಅವರಿಗೆ ಜೈಲಿನಲ್ಲಿ ಯಾವುದೇ ಸೌಲಭ್ಯ ನೀಡಬೇಡಿ ಎಂದಲ್ಲ ನ್ಯಾಯಪೀಠ ಸ್ಪಷ್ಟೀಕರಿಸಿದೆ.

ವಿಚಾರಣೆ ತುಂಬಾ ನಿಧಾನವಾಗಿ ನಡೆಯುತ್ತಿದೆ. ಅದನ್ನು ದಿನನಿತ್ಯದ ಆಧಾರದ ಮೇಲೆ ವಿಚಾರಣೆ ಮಾಡಬೇಕು. ಅರ್ಜಿದಾರರಿಗೆ ಜೈಲಿನ ನಿಯಮದ ಅನುಸಾರ ಇತರ ವಿಚಾರಣಾಧೀನ ಕೈದಿಯಂತೆ ಸೌಕರ್ಯಗಳನ್ನು ಒದಗಿಸಬೇಕು. ಆರೋಪಿಯನ್ನು ಒಂಟಿಯಾಗಿರಿಸುವ ಅಗತ್ಯವಿಲ್ಲ ಎಂದು ಹೇಳಿದೆ.

## ಜೂನ್ 21ಕ್ಕೆ ನೀಟ್-ಯುಜಿ ಮರು ಪರೀಕ್ಷೆ ನಿಗದಿ

• ಉದಯವಾಹಿನಿ, ನವದೆಹಲಿ

ಎಕ್ಸ್‌ನಲ್ಲಿ ಪ್ರಕಟಿಸಿದ ಪೋಸ್ಟ್‌ನಲ್ಲಿ, ಕೇಂದ್ರ ಸರ್ಕಾರದ ಅನುಮೋದನೆಯೊಂದಿಗೆ ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಎನ್‌ಟಿಎ ತಿಳಿಸಿದ್ದು, ಪರೀಕ್ಷೆಗೆ ಸಂಬಂಧಿಸಿದ ಮಾಹಿತಿಗಾಗಿ ಅಭ್ಯರ್ಥಿಗಳು ಮತ್ತು ಪೋಷಕರು ಅಧಿಕೃತ ಸಂವಹನ ಮಾರ್ಗಗಳನ್ನೇ ಅವಲಂಬಿಸುವಂತೆ ಮನವಿ ಮಾಡಿದೆ. ಭಾರತ ಸರ್ಕಾರದ ಅನುಮೋದನೆಯೊಂದಿಗೆ ರಾಷ್ಟ್ರೀಯ ಪರೀಕ್ಷಾ ಸಂಸ್ಥೆ ನೀಟ್ 2026 ಮರುಪರೀಕ್ಷೆಯನ್ನು 2026ರ ಜೂನ್ 21, ಭಾನುವಾರಕ್ಕೆ ನಿಗದಿಪಡಿಸಿದೆ ಎಂದು ಸಂಸ್ಥೆ ತಿಳಿಸಿದೆ. ಪರೀಕ್ಷೆಗೆ ಸಂಬಂಧಿಸಿದ ಅಧಿಕೃತ ಮತ್ತು ನಿಖರ ಮಾಹಿತಿಗಾಗಿ ಅಭ್ಯರ್ಥಿಗಳು ಹಾಗೂ ಪೋಷಕರು ಎನ್‌ಟಿಎಯ ಅಧಿಕೃತ ಪ್ರಕಟಣೆಗಳನ್ನೇ ಅವಲಂಬಿಸಬೇಕು ಎಂದು ಸಂಸ್ಥೆ ಸಲಹೆ ನೀಡಿದೆ.

ವೈದ್ಯಕೀಯ ಕಾಲೇಜುಗಳ ಪದವಿ ಪೂರ್ವ ಕೋರ್ಸ್‌ಗಳ ಪ್ರವೇಶಕ್ಕಾಗಿ ಮೇ 3ರಂದು ನಡೆದಿದ್ದ ನೀಟ್ (ಯುಜಿ) 2026 ಪರೀಕ್ಷೆಯನ್ನು ಪ್ರಶ್ನೆಪತ್ರಿಕೆ ಸೋರಿಕೆ ಆರೋಪಗಳ ಹಿನ್ನೆಲೆಯಲ್ಲಿ ರದ್ದುಗೊಳಿಸಲಾಗಿತ್ತು.

## ಸಮಾಜ ಕೂಡಿಸಿದ ನಾರಾಯಣ ಗುರು: ಯು.ಟಿ.

• ಉದಯವಾಹಿನಿ, ನವದೆಹಲಿ

ಬ್ರಹ್ಮಶ್ರೀ ನಾರಾಯಣ ಗುರುಗಳ ತತ್ವ ಮತ್ತು ಆದರ್ಶಗಳು ಇಡೀ ಸಮಾಜವನ್ನು ಒಟ್ಟುಗೂಡಿಸುವಲ್ಲಿ ಪ್ರಮುಖ ಪಾತ್ರ ವಹಿಸಿವೆ. ಯಾವ ಜಾತಿ, ಧರ್ಮ, ಪಂಥ ದೊಡ್ಡದಲ್ಲ ಚಿಕ್ಕದೂ ಅಲ್ಲ ಎನ್ನುವ ಅವರ ಉದ್ಘೋಷ ಇಂದಿಗೂ ಪ್ರಸ್ತುತ ಎಂದು ವಿಧಾನಸಭಾ ಅಧ್ಯಕ್ಷ ಯು.ಟಿ. ಖಾದರ್ ಹೇಳಿದರು. ಕರ್ನಾಟಕ ಗೃಹ ಮಂಡಳಿಯ ಕಟ್ಟಡದಲ್ಲಿ ನಾರಾಯಣ ಗುರು ನಿಗಮದ ನೂತನ ಕಚೇರಿಯನ್ನು ಉದ್ಘಾಟಿಸಿ ಅವರು ಮಾತನಾಡಿದರು.

ನಿಗಮಕ್ಕೆ ನೀಡಿರುವ ಅನುದಾನವನ್ನು ಬಳಸಿಕೊಂಡು ಸಮಾಜದ ಕಟ್ಟ ಕಡೆಯ ವ್ಯಕ್ತಿಯನ್ನು ಮೇಲೆತ್ತುವ ಕಾರ್ಯಕ್ಕೆ ಮುನ್ನುಡಿ ಬರೆಯುವ ಕೆಲಸವನ್ನು ನಿಗಮದ ಅಧ್ಯಕ್ಷ ಮಂಜುನಾಥ್ ಪೂಜಾರಿ ಮಾಡಬೇಕು ಎಂದು ಸಲಹೆ ನೀಡಿದರು.

## ಜನಿವಾರ, ಹಿಜಾಬ್‌ಗೆ ಪ್ರತ್ಯೇಕ ನಿಲುವು ಏಕೆ : ಸಚಿವ

• ಉದಯವಾಹಿನಿ, ಬೆಂಗಳೂರು

ಪರೀಕ್ಷಾ ಕೇಂದ್ರದಲ್ಲಿ ವಿದ್ಯಾರ್ಥಿಗಳ ಜನಿವಾರ ತೆಗೆಸಿದಾಗ ಒಂದು ಸಮುದಾಯಕ್ಕೆ ನೋವಾಗುತ್ತದೆ. ಹಾಗೆಯೇ, ಹಿಜಾಬ್ ತೆಗೆಸಿದಾಗ ಮತ್ತೊಂದು ಸಮುದಾಯಕ್ಕೂ ನೋವಾಗುತ್ತದೆ ಎಂದು ಬಿಜೆಪಿ ನಾಯಕರು ಏಕೆ ಯೋಚಿಸುವುದಿಲ್ಲ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಪ್ರಶ್ನಿಸಿದರು.

'ರಾಷ್ಟ್ರೀಯ ಅರ್ಹತಾ ಪ್ರವೇಶ ಪರೀಕ್ಷೆ (ನೀಟ್) ರದ್ದು ಮಾಡಿದ್ದರಿಂದ ಶೇ 95ರಷ್ಟು ಹಿಂದೂ ವಿದ್ಯಾರ್ಥಿಗಳಿಗೆ ಅನ್ಯಾಯವಾಗಿದೆ. ಕರ್ನಾಟಕದ ಒಂದೂವರೆ ಲಕ್ಷ ಮಕ್ಕಳು ಸೇರಿದಂತೆ ವೈದ್ಯರಾಗುವ ಕನಸು ಕಂಡು, ಪರೀಕ್ಷೆ ಬರೆದಿದ್ದ ದೇಶದ ಸುಮಾರು 25 ಲಕ್ಷ ಮಕ್ಕಳು ಪರಿತಪಿಸುತ್ತಿದ್ದಾರೆ. ಕೇಂದ್ರ ಮಾಡಿದ ಅನ್ಯಾಯದ ವಿರುದ್ಧ ಬಿಜೆಪಿ ನಾಯಕರು ಧ್ವನಿ ಎತ್ತದೇ ಮೌನವಾಗಿದ್ದಾರೆ' ಎಂದು ದೂರಿದರು.

'ಎರಡು ವರ್ಷಗಳ ಕಠಿಣ ಅಭ್ಯಾಸ ಮಾಡಿ, ಪರೀಕ್ಷೆ ಬರೆದಿದ್ದ ವಿದ್ಯಾರ್ಥಿಗಳ ಕನಸುಗಳನ್ನೇ ಕೇಂದ್ರ ಸಚಿವ ಧರ್ಮೇಂದ್ರ ಪ್ರಧಾನ್ ಕೊಂದಿದ್ದಾರೆ. ಅದನ್ನು ಪ್ರಶ್ನಿಸಿ, ವಿದ್ಯಾರ್ಥಿಗಳಿಗೆ ನ್ಯಾಯ ಕೊಡಿಸುವ ಬದಲು ರಾಜ್ಯ ಬಿಜೆಪಿ ನಾಯಕರು ಹಿಜಾಬ್‌ನಂತಹ ಧಾರ್ಮಿಕ ವಿಷಯಗಳನ್ನು ಕೆದಕುವುದರಲ್ಲೇ ಕಾಲ ಕಳೆಯುತ್ತಿದ್ದಾರೆ. ನೀಟ್ ಪ್ರಶ್ನೆಪತ್ರಿಕೆ ಸೋರಿಕೆ ಆರೋಪದ ಮೇಲೆ ರಾಜಸ್ಥಾನ, ಗುಜರಾತ್‌ನಲ್ಲಿ ಬಿಜೆಪಿ ಮುಖಂಡರನ್ನು ಬಂಧಿಸಲಾಗಿದೆ. ಪರಿಶಿಷ್ಟ ಜಾತಿ, ಪಂಗಡ, ಹಿಂದುಳಿದವರು ಹಾಗೂ ಅಲ್ಪ ಸಂಖ್ಯಾತರು ಓದಿನಲ್ಲಿ ಸಾಧನೆ ಮಾಡುತ್ತಿರುವುದನ್ನು ಅವರಿಗೆ ಈಗಾಗಲೇ ಸಹಿಸಲು ಆಗುತ್ತಿಲ್ಲ' ಎಂದು ಟೀಕಿಸಿದರು.

**ಹಾರ್ಮುಜ್ ಜಲಸಂಧಿ ದಿಗ್ಬಂಧನದ ಹಿನ್ನೆಲೆಯಲ್ಲಿ ಜಾಗತಿಕ ತೈಲ ಪೂರೈಕೆ ಸರಪಳಿ ಮೇಲೆ ಭಾರೀ ಪರಿಣಾಮ ಬೀರಿದೆ. ಈ ಹಿನ್ನೆಲೆಯಲ್ಲಿ ಭಾರತದಲ್ಲಿ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಹೆಚ್ಚಳವಾಗಿದ್ದು, ಇದರ ಪರಿಣಾಮ ಸಾಮಾನ್ಯ ಜನರ ದೈನಂದಿನ ಬದುಕಿನ ಮೇಲೂ ಆಗುತ್ತಿದೆ. ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ 3 ರೂ. ಏರಿಕೆಯಾಗಿದ್ದು, ಇದರಿಂದ ಕರ್ನಾಟಕದ ಖಾಸಗಿ ಬಸ್ ಮಾಲೀಕರು ತಮ್ಮ ಟಿಕೆಟ್ ದರವನ್ನು ಶೇ.20ರಷ್ಟು ಏರಿಕೆ ಮಾಡಿದ್ದಾರೆ.**




### ಪ್ರತಿ ಲೀಟರ್ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ 3 ರೂ. ಹೆಚ್ಚಳ

# ಪೆಟ್ರೋಲ್, ಡೀಸೆಲ್ ಭಾರೀ ದುಬಾರಿ



**ದೇಶಾದ್ಯಂತ ಪೆಟ್ರೋಲ್ ಮತ್ತು ಡೀಸೆಲ್ ಬೆಲೆಯಲ್ಲಿ ಹೆಚ್ಚಳ**

**ಶೇ. 20ರಷ್ಟು ಟಿಕೆಟ್ ದರ ಹೆಚ್ಚಳ ಮಾಡಿದ ಖಾಸಗಿ ಬಸ್ ಮಾಲೀಕರು!**

| ಮಹಾ ನಗರಗಳಲ್ಲಿ ಪೆಟ್ರೋಲ್ ಬೆಲೆ | |
|---|---|
| ದೆಹಲಿ | 97.77 (+3.00) |
| ಕೋಲ್ಕತಾ | 108.74 (+3.29) |
| ಮುಂಬೈ | 106.68 (+3.14) |
| ಚೆನ್ನೈ | 103.67 (+2.83) |

| ಡೀಸೆಲ್ ದರದಲ್ಲೂ ಹೆಚ್ಚಳ | |
|---|---|
| ದೆಹಲಿ | 90.67 (+3.00) |
| ಕೋಲ್ಕತಾ | 95.13 (+3.11) |
| ಮುಂಬೈ | 93.14 (+3.11) |
| ಚೆನ್ನೈ | 95.25 (+2.86) |

• ಬೆಂಗಳೂರು

ತೈಲ ಬೆಲೆಗಳಲ್ಲಿ ಹೆಚ್ಚಳ ಎಲ್ಲಾ ಕ್ಷೇತ್ರಗಳ ಮೇಲೂ ಪರಿಣಾಮ ಬೀರಿದೆ. ಇದಕ್ಕೆ ಸಾಕ್ಷಿಯಾಗಿ ಕರ್ನಾಟಕದ ಖಾಸಗಿ ಬಸ್ ಮಾಲೀಕರು ತಮ್ಮ ಟಿಕೆಟ್ ದರದಲ್ಲಿ ಶೇ. 20ರಷ್ಟು ಹೆಚ್ಚಳ ಮಾಡಿದ್ದಾರೆ. ಇಂದು ಮಧ್ಯರಾತ್ರಿಯಿಂದಲೇ ಹೊಸ ದರಗಳು ಜಾರಿಗೆ ಬರಲಿವೆ ಎಂದು ಕರ್ನಾಟಕ ಖಾಸಗಿ ಬಸ್ ಮಾಲೀಕರ ಸಂಘ ಸ್ಪಷ್ಟಪಡಿಸಿದೆ.

1. **ಪೆಟ್ರೋಲ್ ಹಾಗೂ ಡೀಸೆಲ್ ದರ ಏರಿಕೆ ಮಾಡಿದ ಕೇಂದ್ರ ಸರ್ಕಾರ**
2. **ಪೆಟ್ರೋಲ್ - ಡೀಸೆಲ್ ದರ ಏರಿಕೆಗೆ ಕ್ರಮಕ್ಕೆ ಕಾಂಗ್ರೆಸ್ ಆಕ್ರೋಶ**
3. **ಕೂಡಲೇ ದರ ಏರಿಕೆ ನಿರ್ಧಾರ ಕೈಬಿಡಲು ಸಿದ್ದರಾಮಯ್ಯ ಆಗ್ರಹ**

ರಾಜ್ಯದಲ್ಲಿ ಖಾಸಗಿ ಬಸ್ ಟಿಕೆಟ್ ದರ ಶೇ. 20-30ರಷ್ಟು ಏರಿಕೆಯಾಗುವ ನಿರೀಕ್ಷೆ ಇದ್ದು, ಇದು ಹಳ್ಳಿಗಾಡಿನ ಸಾರಿಗೆ ವ್ಯವಸ್ಥೆಯ ಮೇಲೆ ಗಂಭೀರ ಪರಿಣಾಮ ಬೀರುವ ಸಾಧ್ಯತೆ ಇದೆ.

ಏಕೆಂದರೆ ಸರ್ಕಾರಿ ಸಾರಿಗೆ ತಲುಪದ ಪ್ರದೇಶಗಳಲ್ಲಿ ಜನರಿಗೆ ಖಾಸಗಿ ಬಸ್ ಪ್ರಯಾಣವೇ ಆಧಾರವಾಗಿದ್ದು, ತಮ್ಮ ದೈನಂದಿನ ಓಡಾಡಕ್ಕೆ ಖಾಸಗಿ ಬಸ್‌ಗಳನ್ನು ಅವಲಂಬಿಸಿರುವ ಜನರಿಗೆ ಇದೀಗ ತುಂಬಾ ಹೊರೆಯಾಗಲಿದೆ.

ಇಂದಿನ ಮತ್ತು ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದ ಕಂಗಾಲಾಗಿರುವ ಜನರಿಗೆ, ಖಾಸಗಿ ಬಸ್ ಮಾಲೀಕರು ಕೂಡ ಶಾಕ್ ನೀಡಿದ್ದಾರೆ.

ಆದರೆ ಇಂಧನ ಬೆಲೆಗಳು ಏರಿಕೆಯಾಗಿದ್ದರಿಂದ ಟಿಕೆಟ್ ದರ ಹೆಚ್ಚಳ ಮಾಡುವುದು ಅನಿವಾರ್ಯ ಎಂದು ಖಾಸಗಿ ಬಸ್ ಮಾಲೀಕರು ಪ್ರತಿಪಾದಿಸಿದ್ದಾರೆ.

ಪ್ರತ್ಯೇಕ ಖಾಸಗಿ ಬಸ್‌ಗಳಿಗೆ ದಿನವೊಂದಕ್ಕೆ ಸುಮಾರು 150 ಲೀಟರ್ ಡೀಸೆಲ್ ಖರ್ಚಾಗುತ್ತದೆ ಎಂದು ಅಂದಾಜಿಸಲಾಗಿದೆ. ಈಗ ಡೀಸೆಲ್ ಬೆಲೆಯಲ್ಲಿ 3 ರೂ. ಹೆಚ್ಚಳವಾಗಿರುವುದರಿಂದ ದಿನಕ್ಕೆ ಸುಮಾರು 450 ರೂ. ಹೆಚ್ಚುವರಿ ಖರ್ಚು ಖಾಸಗಿ ಬಸ್ ಮಾಲೀಕರ ಮೇಲೆ ಬೀಳಲಿದೆ. ಇದನ್ನು ಸರಿದೂಗಿಸಲು ಟಿಕೆಟ್ ದರ ಏರಿಕೆ ಮಾಡುವುದು ಅನಿವಾರ್ಯ ಎಂಬುದು ಇವರ ವಾದವಾಗಿದೆ.

ಈ ಕುರಿತು ಮಾತನಾಡಿರುವ ಕರ್ನಾಟಕ ರಾಜ್ಯ ಖಾಸಗಿ ಬಸ್ ಮಾಲೀಕರ ಸಂಘದ ಅಧ್ಯಕ್ಷ ನಟರಾಜ್ ಶರ್ಮಾ, ತೈಲ ಬೆಲೆಗಳ ಹೆಚ್ಚಳದ ಪರಿಣಾಮವಾಗಿ ಎದುರಾಗುವ ಹೆಚ್ಚುವರಿ ಹೊರೆಯನ್ನು ಸರಿದೂಗಿಸಲು ಟಿಕೆಟ್ ದರ ಹೆಚ್ಚಿಸುವುದು ಅನಿವಾರ್ಯ. ಇದರ ಪರಿಣಾಮ ಪ್ರಯಾಣಿಕರ ಮೇಲಾಗಲಿದೆ ಎಂಬುದು ಗೊತ್ತಿದೆ. ಆದರೆ ನಮಗೂ ಅನ್ಯ ಮಾರ್ಗವಿಲ್ಲ ಎಂದು ಹೇಳಿದ್ದಾರೆ.

ಮಧ್ಯಪ್ರಾಚ್ಯದಲ್ಲಿ ಅಮೆರಿಕ-ಇರಾನ್ ರಾಷ್ಟ್ರಗಳು ಸುದೀರ್ಘ ಸಂಘರ್ಷದಲ್ಲಿ ನಿರತವಾಗಿವೆ. ಎರಡೂ ರಾಷ್ಟ್ರಗಳು ಪ್ರತ್ಯೇಕವಾಗಿ ಹಾರ್ಮುಜ್ ಜಲಸಂಧಿ ಮೇಲೆ ದಿಗ್ಬಂಧನ ಹೇರಿವೆ. ಇದರ ಪರಿಣಾಮವಾಗಿ ಜಾಗತಿಕ ತೈಲ ಪೂರೈಕೆ ಸರಪಳಿ ಕಳಚಿದೆ.

ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾತೈಲ ಬೆಲೆ ಏರಿಕೆಯಾಗಿದ್ದು, ಕೇಂದ್ರ ಸರ್ಕಾರ ಭಾರತದಲ್ಲಿ ತೈಲ ಬೆಲೆ ಹೆಚ್ಚಳ ಮಾಡುವ ಅನಿವಾರ್ಯತೆಗೆ ಸಿಲುಕಿದೆ.

### ಬೆಲೆ ಏರಿಕೆಯಿಂದ ದಿನನಿತ್ಯದ ವಸ್ತುಗಳೂ ತುಟ್ಟಿ



ಪ್ರಧಾನಿ ಮೋದಿಯವರ ಆಡಳಿತ ಪ್ರಾರಂಭವಾಗುವ ಮುಂಚೆ 413 ರೂ. ಗಳಿಂದ ಗೃಹಬಳಕೆಯ ಎಲ್‌ಪಿಜಿ ದರ ಈಗ 1000 ರೂಗಳನ್ನು ದಾಟಿದೆ. ಈ ಬೆಲೆಏರಿಕೆ ದಿನನಿತ್ಯದ ಬೆಲೆ ಹೆಚ್ಚಳಕ್ಕೂ ಕಾರಣವಾಗಲಿದೆ.

ಎಲ್‌ಪಿಜಿ ಪೂರೈಕೆ ವ್ಯತ್ಯಯವಾಗಿರುವ ನಡುವೆಯೇ ಬೆಲೆ ಏರಿಕೆಯು ಜನಜೀವನವನ್ನು ಅಸ್ತವ್ಯಸ್ತಗೊಳಿಸಲಿದೆ ಎಂದರು.

### ಈ ನಿರ್ಣಯವನ್ನು ಹಿಂದಕ್ಕೆ ಪಡೆಯಬೇಕು

ಕೇಂದ್ರ ಸರ್ಕಾರ ಪೆಟ್ರೋಲ್ ಡೀಸೆಲ್ ಬೆಲೆ ಏರಿಸಿರುವುದನ್ನು ರಾಜ್ಯ ಸರ್ಕಾರ ಖಂಡಿಸಿ, ಬೆಲೆ ಏರಿಕೆಯನ್ನು ಹಿಂಪಡೆಯಲು ಒತ್ತಾಯಿಸುತ್ತದೆ ಎಂದು ಸಿದ್ದರಾಮಯ್ಯ ಹೇಳಿದರು. ವಿವಿಧ ರಾಜ್ಯಗಳ ವಿಧಾನಸಭಾ ಚುನಾವಣೆಗಳ ನಂತರ ಕೇಂದ್ರ ಸರ್ಕಾರ ಪೆಟ್ರೋಲ್ ಡೀಸೆಲ್ ದರ ಏರಿಸುವ ನಿರೀಕ್ಷೆ ಇತ್ತು. ನಿರೀಕ್ಷೆಯಂತೆಯೇ ಹೆಚ್ಚಿಸಿದ್ದಾರೆ. ಆದರೆ ಕರ್ನಾಟಕದಲ್ಲಿ ಇತರೆ ರಾಜ್ಯಗಳಿಗಿಂತ ಗಣನೀಯವಾಗಿ ಕಡಿಮೆಯಿರುವ ಪೆಟ್ರೋಲ್ ಬೆಲೆಯನ್ನು ಹೆಚ್ಚಿಸಿದ್ದರ ಬಗ್ಗೆ ಬಿಜೆಪಿಯವರು ಟೀಕೆ ಮಾಡಿದ್ದರು ಎಂದರು. ನರೇಂದ್ರ ಮೋದಿಯವರು ದೇಶದ ಪ್ರಧಾನಿಯಾದ ನಂತರ ಹಲವು ಬಾರಿ ಪೆಟ್ರೋಲ್ ಡೀಸೆಲ್ ದರಗಳನ್ನು ಹೆಚ್ಚಿಸಿದ್ದಾರೆ. ಈ ಬೆಲೆಏರಿಕೆ ಜನಸಾಮಾನ್ಯರ ಮೇಲೆ ವ್ಯತಿರಿಕ್ತ ಪರಿಣಾಮ ಬೀರಲಿದ್ದು, ವಿಶೇಷವಾಗಿ ಕಾರ್ಮಿಕರು, ರೈತರು, ಬಡವರ ಮೇಲೆ ಹೆಚ್ಚಿನ ಪರಿಣಾಮ ಬೀರಲಿದೆ. ಕೇಂದ್ರ ಸರ್ಕಾರದ ಈ ಬೆಲೆಏರಿಕೆಯ ಕ್ರಮವನ್ನು ರಾಜ್ಯ ಸರ್ಕಾರ ಖಂಡಿಸುವುದಲ್ಲದೇ, ಈ ನಿರ್ಣಯವನ್ನು ಹಿಂದಕ್ಕೆ ಪಡೆಯಬೇಕೆಂದು ಒತ್ತಾಯಿಸುತ್ತೇವೆ ಎಂದರು.

### ನೋ ಸ್ಟಾಕ್ ಬೋರ್ಡ್

ಈ ಎಲ್ಲಾ ಸುಳಿವುಗಳಿಂದ ಭಾರತದ ಹಲವಾರು ನಗರಗಳಲ್ಲಿ ನಿನ್ನೆಯಿಂದಲೇ ಪೆಟ್ರೋಲ್ ಪಂಪ್‌ಗಳಲ್ಲಿ ಪ್ಯಾನಿಕ್ ಖರೀದಿ ಮತ್ತು ದೀರ್ಘ ಸರತಿ ಸಾಲುಗಳು ಕಂಡುಬಂದವು. ಮಾಧ್ಯಮ ವರದಿಯ ಪ್ರಕಾರ, ಗ್ರಾಹಕರು ಪೂರ್ಣ ಟ್ಯಾಂಕ್ ಮರುಪೂರಣಕ್ಕಾಗಿ ನಿನ್ನೆಯಿಂದಲೇ ಪೆಟ್ರೋಲ್ ಪಂಪ್‌ಗಳತ್ತ ಧಾವಿಸುತ್ತಿದ್ದರು. ಕರ್ನಾಟಕ, ತೆಲಂಗಾಣ, ರಾಜಸ್ಥಾನ ಮತ್ತು ಗುಜರಾತ್‌ನಂತಹ ರಾಜ್ಯಗಳಲ್ಲಿನ ಕೆಲವು ಪಂಪ್‌ಗಳಲ್ಲಿ ನೋ ಸ್ಟಾಕ್ ಬೋರ್ಡ್‌ಗಳು ಕಂಡು ಬಂದಿದ್ದವು.

### ಇದನ್ನು ಕೇಂದ್ರ ಮಾಡಬಾರದಿತ್ತು



ಪೆಟ್ರೋಲ್, ಡೀಸೆಲ್ ಬೆಲೆ ಹೆಚ್ಚಳ ಮಾಡಿರುವುದು ಕೇಂದ್ರ ಸರ್ಕಾರದ ನೀತಿಯನ್ನು ಎಕ್ಸ್‌ಪೋಸ್ ಮಾಡಿದೆ ಎಂದು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಟೀಕಿಸಿದ್ದಾರೆ. ಕೇಂದ್ರ ಸರ್ಕಾರ ಜನಪರವಾಗಿಲ್ಲ ಎಂಬುದನ್ನು ಈ ಬೆಳವಣಿಗೆ ಹೇಳುತ್ತದೆ. ವಿಪರೀತ ಬೆಲೆ ಏರಿಕೆ ಆಗ್ತಿದೆ. ಪೆಟ್ರೋಲ್, ಡೀಸೆಲ್ ಬೆಲೆ ಏರಿಸಲಾಗಿದೆ. ಇದನ್ನು ಕೇಂದ್ರ ಮಾಡಬಾರದಿತ್ತು. ಮೊದಲಿನಿಂದಲೂ ಈ ಸಮಸ್ಯೆ ಬರುತ್ತದೆ ಎಂದು ಅವರಿಗೆ ಗೊತ್ತಿತ್ತು ಎಂದರು.

## ಇಸ್ರೇಲ್-ಕರ್ನಾಟಕದ ನಡುವೆ ಶೀಘ್ರದಲ್ಲೇ ಶ್ರಮಶಕ್ತಿ ಒಪ್ಪಂದ

**● ಶೀಘ್ರದಲ್ಲೇ ನಡೆಯಲಿದೆ ಇಸ್ರೇಲ್ – ಕರ್ನಾಟಕದ ನಡುವೆ ಶೀಘ್ರದಲ್ಲೇ ಶ್ರಮಶಕ್ತಿ ಒಪ್ಪಂದ**

• ಉದಯವಾಹಿನಿ, ಬೆಂಗಳೂರು

ಇಸ್ರೇಲ್ – ಕರ್ನಾಟಕದ ನಡುವೆ ಶೀಘ್ರದಲ್ಲೇ ಶ್ರಮಶಕ್ತಿ ಒಪ್ಪಂದ ನಡೆಯಲಿದೆ. ಪರಿಣತ ಕಾರ್ಮಿಕರ ಕೊರತೆ ಎದುರಿಸುತ್ತಿರುವ ಮಧ್ಯಪ್ರಾಚ್ಯದ ಕೆಲವು ದೇಶಗಳಲ್ಲಿ ಕೆಲಸ ಮಾಡುವ ಕ್ಷಮತೆಯಿರುವ ರಾಜ್ಯದ ಕಾರ್ಮಿಕರಿಗೆ ಅವಕಾಶ ಕಲ್ಪಿಸುವ ಸಂಬಂಧ ಕಾರ್ಮಿಕ ಸಚಿವ ಸಂತೋಷ್ ಲಾಡ್ ಶುಕ್ರವಾರ ವಿಧಾನಸೌಧದಲ್ಲಿ ಸಭೆ ನಡೆಸಿದರು.

ರಾಜ್ಯದ ಕಟ್ಟಡ ಕಾರ್ಮಿಕರು ಸೇರಿದಂತೆ ವಿವಿಧ ವಲಯಗಳ ಕಾರ್ಮಿಕರಿಗೆ ಇಸ್ರೇಲ್ ಸೇರಿದಂತೆ ವಿವಿಧ ಮಧ್ಯಪ್ರಾಚ್ಯ ದೇಶಗಳಲ್ಲಿ ಲಭ್ಯವಿರುವ ಗುತ್ತಿಗೆ ಕೆಲಸಗಳ ಅವಕಾಶಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಸಲಾಯಿತು. ಈ ಬಗ್ಗೆ ನಡೆದ ಆರಂಭಿಕ ಹಂತದ ಸಭೆ ಇದಾಗಿದ್ದು, ಇದರ ಕಾರ್ಯಸಾಧ್ಯತೆ ಬಗ್ಗೆ ವಿವರವಾದ ವರದಿ ನೀಡುವಂತೆ ಅಧಿಕಾರಿಗಳಿಗೆ ಸಚಿವರು ಸೂಚಿಸಿದರು.

ಕಾರ್ಮಿಕ ಕಲ್ಯಾಣಕ್ಕಾಗಿ ಸದಾ ಹೊಸದನ್ನೇನಾದರೂ ಯೋಚಿಸುವ ಕಾರ್ಮಿಕ ಸಚಿವ ಸಂತೋಷ್ ಲಾಡ್ ಅವರು, ಸದ್ಯ ಇಸ್ರೇಲ್ ಸೇರಿದಂತೆ ಇತರ ಮುಂದುವರಿದ ಮಧ್ಯಪ್ರಾಚ್ಯ ದೇಶಗಳಲ್ಲಿ ಕೌಶಲ್ಯಯುತ ಕಾರ್ಮಿಕರಿಗೆ ಭಾರೀ ಬೇಡಿಕೆ ಇದ್ದು, ಅದರಲ್ಲೂ ಕನ್ಸ್ಟ್ರಕ್ಷನ್ ವಲಯದಲ್ಲಂತೂ ನುರಿತ ಕಾರ್ಮಿಕರಿಗೆ



ತುಸು ಹೆಚ್ಚೇ ಬೇಡಿಕೆ ಇರುವುದನ್ನು ಮನಗಂಡು ಇಲ್ಲಿನ ನುರಿತ ಕಟ್ಟಡ ಕಾರ್ಮಿಕರನ್ನು ಇಸ್ರೇಲ್ ಗೆ ಗುತ್ತಿಗೆ ಆಧಾರದಲ್ಲಿ ಕಳುಹಿಸುವ ಮಹತ್ವದ ಪರಿಕಲ್ಪನೆಯೊಂದಿಗೆ ಮುಂದಡಿಯಿಟ್ಟಿದ್ದಾರೆ.

ಕೌಶಲ್ಯಪೂರ್ಣತೆ, ಅತ್ಯಂತ ಕಡಿಮೆ ಕ್ರೈಮ್ ರೇಟ್, ಬೇರೆ ಪ್ರದೇಶಗಳಲ್ಲಿ ಹೊಂದಿಕೊಂಡು ಕೆಲಸ ಮಾಡುವ ಸ್ವಭಾವ ಸೇರಿದಂತೆ ಹಲವು ವಿಷಯಗಳಲ್ಲಿ ರಾಜ್ಯದ ಕಾರ್ಮಿಕ ವರ್ಗಕ್ಕೆ ತನ್ನದೇ ಆದ ಹೆಸರಿದೆ. ಹೀಗಾಗಿ ಬೇಡಿಕೆಯೂ ಸಹಜವಾಗಿದೆ. ಆದರೆ ಮಾಹಿತಿ ಕೊರತೆ, ಏಜನ್ಸಿಗಳ ಹಾವಳಿಯಿಂದ ವಿದೇಶಕ್ಕೆ ತೆರಳಿ ಕೆಲಸ ಮಾಡಲು ಕಾರ್ಮಿಕರಿಗೆ ಸಾಧ್ಯವಾಗುತ್ತಿಲ್ಲ.

ಈ ಹಿನ್ನೆಲೆಯಲ್ಲಿ, ಸಂತೋಷ್ ಲಾಡ್ ಅವರು ಇಸ್ರೇಲ್ ಕಾನ್ಸುಲೇಟ್ ಅಧಿಕಾರಿಗಳೊಂದಿಗೆ ಇಂದು ನಡೆಸಿದ ಆರಂಭಿಕ ಹಂತದ ಸಭೆ ಮಹತ್ವ ಪಡೆದುಕೊಂಡಿದೆ.

ಶ್ರಮಿಕರ ಹಿತಕ್ಕಾಗಿ ಹಲವು ದಿಟ್ಟ ಹೆಜ್ಜೆಗಳನ್ನಿಡುತ್ತಿರುವ ಸಚಿವ ಸಂತೋಷ್ ಲಾಡ್ ಅವರು ಈ ಹೊಸ ಪರಿಕಲ್ಪನೆಯನ್ನು ಹೇಗೆ ಕಾರ್ಯರೂಪಕ್ಕೆ ತರಲಿದ್ದಾರೆ ಎಂಬುದನ್ನು ಕಾದುನೋಡಬೇಕಿದೆ.

ಈ ಸಭೆಯಲ್ಲಿ ಕಾರ್ಮಿಕ ಇಲಾಖೆಯ ಕಾರ್ಯದರ್ಶಿಗಳಾದ ಸಲ್ಮಾ ಫಹೀಮ್, ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಅಭಿವೃದ್ಧಿ ಮಂಡಳಿಯ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ರವಿ ಡಿ ಚನ್ನಣ್ಣವರ್, ಜಂಟಿ ಕಾರ್ಮಿಕ ಆಯುಕ್ತರಾದ ರವಿಕುಮಾರ್, ಜಂಟಿ ಕಾರ್ಮಿಕ ಆಯುಕ್ತರಾದ ಉಮೇಶ್, ಉಪ ಕಾರ್ಮಿಕ ಆಯುಕ್ತರಾದ ಜಾನ್ಸನ್ ಮತ್ತಿತರರು ಭಾಗವಹಿಸಿದ್ದರು.

### ಕಾರ್ಮಿಕರಿಗೆ ಕನಿಷ್ಠ ವೇತನ

ಕಾರ್ಮಿಕರಿಗೆ ಕನಿಷ್ಠ ವೇತನ ನೀಡುವ ಸಂಬಂಧ ಕಾರ್ಮಿಕ ಹಾಗೂ ಧಾರವಾಡ ಜಿಲ್ಲಾ ಉಸ್ತುವಾರಿ ಸಚಿವರಾದ ಸಂತೋಷ್ ಎಸ್ ಲಾಡ್ ಅವರು, ವಿಧಾನಸೌಧದ ತಮ್ಮ ಕಚೇರಿಯಲ್ಲಿ ಪ್ರೊ. ಮ್ಯಾಥ್ಯೂ ಮತ್ತು ಕಾರ್ಮಿಕ ಸಂಘಟನೆಗಳ ಪ್ರಮುಖರ ಜೊತೆ ಚರ್ಚೆ ನಡೆಸಿದರು.

## ರಾಜ್ಯದ ಕಂದಾಯ ಇಲಾಖೆಯ ಗಮನ ಸೆಳೆಯೋ ಕೆಲಸ: ಸಚಿವ

**■ ಎಸಿ ನ್ಯಾಯಾಲಯ ಬಾಕಿ ತಕರಾರು ಪ್ರಕರಣಗಳ ಪೈಕಿ ಶೇ.90ಕ್ಕೂ ಹೆಚ್ಚು ಪ್ರಕರಣ ವಿಲೇವಾರಿ**

• ಉದಯವಾಹಿನಿ, ಬೆಂಗಳೂರು



ಹತ್ತಾರು ವರ್ಷಗಳ ದುರಾಡಳಿತದ ಬಳುವಳಿಯಾಗಿದ್ದ ಉಪ ವಿಭಾಗಾಧಿಕಾರಿಗಳ (ಎಸಿ) ನ್ಯಾಯಾಲಯ ಬಾಕಿ ತಕರಾರು ಪ್ರಕರಣಗಳ ಪೈಕಿ ಶೇ.90ಕ್ಕೂ ಹೆಚ್ಚು ಪ್ರಕರಣಗಳನ್ನು ಕಳೆದ ಮೂರು ವರ್ಷಗಳಲ್ಲಿ ಇತ್ಯರ್ಥಪಡಿಸಲಾಗಿದೆ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ಮೆಚ್ಚುಗೆ ವ್ಯಕ್ತಪಡಿಸಿದರು.

ವಿಕಾಸಸೌಧದಿಂದ ವಿಡಿಯೋ ಕಾನ್ಫರೆನ್ಸ್ ಮೂಲಕ ರಾಜ್ಯದ ಎಲ್ಲಾ ಉಪ ವಿಭಾಗಾಧಿಕಾರಿಗಳ ಜೊತೆ ಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಸಿ ಮಾತನಾಡಿದ ಅವರು, ''ಮೂರು ವರ್ಷದ ಹಿಂದೆ ನಾವು ಕಂದಾಯ ಇಲಾಖೆ ಜವಾಬ್ದಾರಿ ಸ್ವೀಕರಿಸಿದ್ದಾಗ ರಾಜ್ಯಾದ್ಯಂತ ಸುಮಾರು 73,624 ಅವಧಿ ಮೀರಿದ ತಕರಾರು ಪ್ರಕರಣಗಳು ಬಾಕಿ ಇದ್ದವು. ಪರಿಣಾಮ ಜನ ಸಾಮಾನ್ಯರು ಅನಗತ್ಯವಾಗಿ ಸರ್ಕಾರಿ ಕಚೇರಿ ಅಲೆಯುವಂತಾಗಿತ್ತು. ಆದರೆ, ಆ ಸಂಖ್ಯೆಯನ್ನು ಇದೀಗ ಕೇವಲ 7,490ಕ್ಕೆ ಇಳಿಸಿದಂತಾಗಿದೆ. ಆ ಮೂಲಕ ಶೇ.90ಕ್ಕೂ ಹೆಚ್ಚು ಪ್ರಕರಣಗಳಿಗೆ ಮುಕ್ತಿ ನೀಡಿದಂತಾಗಿದೆ. ಮುಂದಿನ ದಿನಗಳಲ್ಲಿ ಈ ಪ್ರಕರಣಗಳನ್ನೂ ಶೀಘ್ರ ಇತ್ಯರ್ಥಪಡಿಸಬೇಕು'' ಎಂದು ಸೂಚಿಸಿದರು. ''ನಾವು ಇಲಾಖೆಯ ಜವಾಬ್ದಾರಿ ಸ್ವೀಕರಿಸಿದ ಸಂದರ್ಭದಲ್ಲಿ, ಸರ್ಕಾರಿ ಕಚೇರಿಗಳಿಗೆ ಜನರ ಅನಗತ್ಯ ಓಡಾಟಕ್ಕೆ ಬ್ರೇಕ್ ನೀಡುವ ಸಲುವಾಗಿಯೇ ಮೊದಲು ಈ ಎಲ್ಲಾ ಬಾಕಿ ಪ್ರಕರಣಗಳ ಇತ್ಯರ್ಥಕ್ಕೆ ಮೊದಲ ಆದ್ಯತೆ ನೀಡಲಾಗಿತ್ತು. ಅಧಿಕಾರಿಗಳ ಸಹಕಾರ ಇಲ್ಲದಿದ್ದರೆ ಈ ಕೆಲಸ ಸಾಧ್ಯವಾಗುತ್ತಿರಲಿಲ್ಲ. ಹೀಗಾಗಿ ಅತ್ಯುತ್ತಮವಾಗಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಅಧಿಕಾರಿಗಳಿಗೂ ಧನ್ಯವಾದಗಳು'' ಎಂದು ಅಭಿನಂದಿಸಿದರು. ''ಅಧಿಕಾರಿಗಳ ಸಹಕಾರದಿಂದಾಗಿ ಕಳೆದ ಮೂರು ವರ್ಷದಲ್ಲಿ ಕೋರ್ಟ್ ಕೇಸ್, ಪೌತಿಖಾತೆ, ಪೋಡಿ ದುರಸ್ಥಿ, ಆರ್‌ಆರ್ಟಿ ಕರೆಕ್ಷನ್, ಆಧಾರ್ ಸೀಡಿಂಗ್, ಇ-ಆಫೀಸ್ ಸೇರಿದಂತೆ ಕಂದಾಯ ಇಲಾಖೆಯಲ್ಲಿ ಸಾಕಷ್ಟು ಪ್ರಗತಿಯಾಗಿದೆ. ಆದರೆ, ಆಗಬೇಕಾದ ಕೆಲಸ ಇನ್ನಷ್ಟು ಬಾಕಿ ಇದೆ. ಹೀಗಾಗಿ ಅಧಿಕಾರಿಗಳು ಮತ್ತಷ್ಟು ಜನಪರವಾಗಿ ಕೆಲಸ ನಿರ್ವಹಿಸಬೇಕು ಎಂದು ಕರೆ ನೀಡಿದ ಸಚಿವರು, ಮೇ.19 ರಂದು ತುಮಕೂರಿನಲ್ಲಿ ನಡೆಯಲಿರುವ ''3ನೇ ವರ್ಷದ ಸಾಧನೆಯ ಸಂಭ್ರಮ'' ಕಾರ್ಯಕ್ರಮದಲ್ಲಿ 1,41,908 ಫಲಾನುಭವಿಗಳಿಗೆ ಏಕ ಕಾಲದಲ್ಲಿ ಹಕ್ಕುಪತ್ರ ನೀಡಲಿದ್ದು, ಸಾಧ್ಯವಾದರೆ ಎಲ್ಲಾ ಉಪ ವಿಭಾಗಾಧಿಕಾರಿಗಳು ಈ ಕಾರ್ಯಕ್ರಮದಲ್ಲಿ ಪಾಲ್ಗೊಳ್ಳಬೇಕು'' ಎಂದು ಆಹ್ವಾನಿಸಿದರು.

ಸಭೆಯಲ್ಲಿ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ (ಕಂದಾಯ ಇಲಾಖೆ) ರಾಜೇಂದ್ರ ಕುಮಾರ್ ಕಟಾರಿಯಾ, ಬೆಂಗಳೂರು ವಿಭಾಗದ ಪ್ರಾದೇಶಿಕ ಆಯುಕ್ತರಾದ ಅಮ್ಲನ್ ಆದಿತ್ಯ ಬಿಸ್ವಾಸ್, ಕಂದಾಯ ಆಯುಕ್ತರು (ಪ್ರಭಾರ) ಮುಲ್ಲೈ ಮುಗಿಲನ್ ಹಾಗೂ ಸಂಬಂಧಿತ ಅಧಿಕಾರಿಗಳು ಉಪಸ್ಥಿತರಿದ್ದರು.



### ಬೆಂಗಳೂರು ಉತ್ತರ ಜಿಲ್ಲೆ ಎಸಿ ವಿರುದ್ಧ ಗರಂ

ಅತಿಹೆಚ್ಚು ಪ್ರಕರಣಗಳು ಬಾಕಿ ಇದ್ದ ತುಮಕೂರು, ದೊಡ್ಡಬಳ್ಳಾಪುರ, ತರೀಕೆರೆ, ಕೋಲಾರ ಸೇರಿದಂತೆ ಹಲವು ಎಸಿ ವಲಯಗಳು ಪ್ರಸ್ತುತ ಸುಧಾರಣೆ ಕಂಡಿವೆ. ಆದರೆ, ಸ್ವತಃ ನಾನು ಪ್ರತಿನಿಧಿಸುವ ಬೆಂಗಳೂರು ಉತ್ತರ ಜಿಲ್ಲೆಯಲ್ಲಿ ಸಾಕಷ್ಟು ಪ್ರಕರಣಗಳು ಬಾಕಿ ಇವೆ ಎಂದು ಸಚಿವ ಕೃಷ್ಣ ಬೈರೇಗೌಡ ಅವರು ಸಭೆಯಲ್ಲಿ ಅಸಮಾಧಾನ ಹೊರಹಾಕಿದರು.

**ಅಧಿಕಾರಿಗಳ ಕೆಲಸ ಕಾರ್ಯಕ್ಕೆ ಮೆಚ್ಚುಗೆ**

| ಈ ದಿನದ ದರ | ಪೆಟ್ರೋಲ್: 106.68 ₹/L | ಡೀಸೆಲ್ : 93.14 ₹/L | ಬಂಗಾರ: ₹15,791/Gram24ct | ₹14,475/Gram22ct | ಬೆಳ್ಳಿ: ₹290.00/Gram |
|---|---|---|---|---|---|

## ಶ್ರೀ ಸುಬ್ರಮಣ್ಣೇಶ್ವರ ಕೋ-ಆಪರೇಟಿವ್ ಬ್ಯಾಂಕ್‌ನಲ್ಲಿ ''ಮೊಬೈಲ್ ಬ್ಯಾಂಕಿಂಗ್ ನಲ್ಲಿ ಮತ್ತೊಂದು ಮಹತ್ವದ ಹೆಜ್ಜೆ



ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಶ್ರೀ ಸುಬ್ರಮಣ್ಣೇಶ್ವರ ಕೋ-ಆಪರೇಟಿವ್ ಬ್ಯಾಂಕ್ ಲಿಮಿಟೆಡ್ ನಿಂದ ಗ್ರಾಹಕರಿಗೆ ಮೊಬೈಲ್ ಬ್ಯಾಂಕಿಂಗ್ ಸೇವೆಗಳನ್ನು ಇನ್ನಷ್ಟು ಸುಲಭ, ಸುಲಲಿತ ಹಾಗೂ ವೇಗವಾಗಿ ಒದಗಿಸುವ ಉದ್ದೇಶದಿಂದ ''SSCBL Mpassbook App'' ಗೆ ಬ್ಯಾಂಕ್ ಅಧ್ಯಕ್ಷ ಡಿ.ಆರ್. ವಿಜಯಸಾರಥಿ ವಿದ್ಯುಕ್ತವಾಗಿ ಚಾಲನೆ ನೀಡಿದರು. ಬ್ಯಾಂಕ್ ಪ್ರಧಾನ ಕಚೇರಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅಧ್ಯಕ್ಷ ಡಿ.ಆರ್. ವಿಜಯಸಾರಥಿ ಅವರು, ಆಧುನಿಕ ತಂತ್ರಜ್ಞಾನ ಅಳವಡಿಸಿಕೊಂಡು ಗ್ರಾಹಕರಿಗೆ ಸುರಕ್ಷಿತ ಹಾಗೂ ಸುಲಭ ಸೇವೆ ಒದಗಿಸುವುದು ಬ್ಯಾಂಕಿನ ಪ್ರಮುಖ ಆದ್ಯತೆಯಾಗಿದೆ.

ಗ್ರಾಹಕರಿಗೆ ಸೂಕ್ತ ಮಾರ್ಗದರ್ಶಕ ಹಾಗೂ ಪ್ರೇರಣಾದಾಯಕ ರೀತಿಯಲ್ಲಿ ಬ್ಯಾಂಕ್ ಸಿಬ್ಬಂದಿ ಕಾರ್ಯನಿರ್ವಹಿಸುತ್ತಿದ್ದಾರೆ. ಡಿಜಿಟಲ್ ಸೇವೆಗಳ ಮೂಲಕ ಗ್ರಾಹಕರ ವಿಶ್ವಾಸವನ್ನು ಇನ್ನಷ್ಟು ಬಲಪಡಿಸುವ ಅಗತ್ಯವಿದೆ ಎಂದು ಹೇಳಿದರು. ಹೊಸದಾಗಿ ಪರಿಚಯಿಸಲಾದ ''SSCBL Mpassbook App'' ಮೂಲಕ ಗ್ರಾಹಕರು ತಮ್ಮ ಖಾತೆಯ ಬ್ಯಾಲೆನ್ಸ್ ಪರಿಶೀಲನೆ, ಮಿನಿ ಸ್ಟೇಟ್ಮೆಂಟ್ ವೀಕ್ಷಣೆ, ಪೂರ್ಣ ಸ್ಟೇಟ್ಮೆಂಟ್ ಡೌನ್‌ಲೋಡ್ ಸೇರಿದಂತೆ ವಿವಿಧ ಸೇವೆಗಳನ್ನು ದಿನದ 24 ಗಂಟೆಗಳ ಕಾಲ ಸುಲಭವಾಗಿ ಪಡೆಯಬಹುದು. ಆಂಡ್ರಾಯ್ಡ್ ಸ್ಮಾರ್ಟ್‌ಫೋನ್ ಬಳಕೆದಾರರಿಗೆ ಈ ಆಪ್ ಲಭ್ಯವಿದ್ದು, ಪ್ರಾರಂಭಿಕ ಹಂತದಲ್ಲಿ View Only Mode ನಲ್ಲಿ ಸೇವೆ ನೀಡಲಾಗುತ್ತಿದೆ. ಈ ಸಂದರ್ಭದಲ್ಲಿ ಬ್ಯಾಂಕ್ ಉಪಾಧ್ಯಕ್ಷರಾದ ಡಾ. ಎಂ. ರಂಗಧಾಮಶೆಟ್ಟಿ, ನಿರ್ದೇಶಕರಾದ ವೆಂಕಟಾಚಲಪತಿ ಬಿ.ಎಲ್., ಪಿ. ರುದ್ರಮೂರ್ತಿ, ಎಸ್. ಸತ್ಯಮೂರ್ತಿ, ಎಂ.ಸಿ. ಫಾಲನೇತ್ರ, ಲೋಹಿತ್ ಜಿ., ನಂಜೇಗೌಡ, ಪಿ.ಕೆ. ರವೀಂದ್ರ, ಎನ್. ಮಹಾಲಕ್ಷ್ಮಿ, ಎಚ್.ಮಾರುತಿ, ಅನ್ನಪೂರ್ಣಮ್ಮ, ಜಯಲಕ್ಷ್ಮಿ ಜಿ. ತೋಟಗೇರ, ಪ್ರಭಾರ ಪ್ರಧಾನ ವ್ಯವಸ್ಥಾಪಕರಾದ ಕೆ.ಎನ್. ಕೃಷ್ಣಯ್ಯ ಶೆಟ್ಟಿ ಹಾಗೂ ಪೂರ್ಣಾವ ಸಲಹೆಗಾರರಾದ ಬಿ.ಆರ್. ನಾಗರಾಜ್ ಉಪಸ್ಥಿತರಿದ್ದರು.

## ಕಾರ್ಪೊರೇಟ್ ಜಿಹಾದ್ : ಮಿಥ್ಯ, ವಾಸ್ತವ ಕುರಿತು ವಿಶೇಷ ಸಂವಾದ

• ಉದಯವಾಹಿನಿ, ಬೆಂಗಳೂರು

ಇಂದಿನ ಕಾಲಘಟ್ಟದಲ್ಲಿ ಹಿಂದೂ ಸಮಾಜ ಮತ್ತು ಧಾರ್ಮಿಕ ಅಸ್ಮಿತೆಯ ವಿರುದ್ಧ ವಿವಿಧ ರೂಪಗಳಲ್ಲಿ ಸಂಘಟಿತ ಸವಾಲುಗಳು ಎದುರಾಗುತ್ತಿವೆ. 'ಲವ್ ಜಿಹಾದ್', 'ಲ್ಯಾಂಡ್ ಜಿಹಾದ್' ಬಳಿಕ ಇದೀಗ 'ಕಾರ್ಪೊರೇಟ್ ಜಿಹಾದ್' ಕುರಿತು ಸಮಾಜದಲ್ಲಿ ವ್ಯಾಪಕ ಚರ್ಚೆ ನಡೆಯುತ್ತಿದೆ. ಪ್ರತಿಷ್ಠಿತ ಕಾರ್ಪೊರೇಟ್ ಕಂಪನಿಗಳಲ್ಲಿ ಹಿಂದೂ ಮಹಿಳೆಯರನ್ನು ಗುರಿ ಮಾಡಿ, ಅವರಿಗೆ ಲೈಂಗಿಕ ಕಿರುಕುಳ ನೀಡಿ, ಅವರ ನಗ್ನ ವಿಡಿಯೋ ಇಟ್ಟುಕೊಂಡು, ಕಿರುಕುಳ ನೀಡುವ ಮತ್ತು ಅವರನ್ನು ಮತಾಂತರ ಮಾಡುವ ಆಘಾತಕಾರಿ ಘಟನೆಗಳು ಸಮಾಜದಲ್ಲಿ ಆತಂಕ ಉಂಟುಮಾಡಿವೆ.

ಈ ಹಿನ್ನೆಲೆಯಲ್ಲಿ ಹಿಂದೂ ಜನಜಾಗೃತಿ ಸಮಿತಿಯ ವತಿಯಿಂದ 'ಕಾರ್ಪೊರೇಟ್ ಜಿಹಾದ್ ಮಿಥ್ಯ ಮತ್ತು ವಾಸ್ತವ' ಎಂಬ ವಿಷಯದ ಮೇಲೆ ವಿಶೇಷ ಸಾರ್ವಜನಿಕ ಸಂವಾದ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. **ದಿನಾಂಕ:** 16 ಮೇ 2026, ಶನಿವಾರ **ಸಮಯ:** ಸಂಜೆ 5.30 **ಸ್ಥಳ:** ಶ್ರೀ ಸತ್ಯಪ್ರಮೋದ ಕಲ್ಯಾಣ ಮಂಟಪ, ನ್ಯಾಷನಲ್ ಕಾಲೇಜ್ ಹತ್ತಿರ, ಬಸವನಗುಡಿ, ಬೆಂಗಳೂರು. ಈ ಕಾರ್ಯಕ್ರಮದಲ್ಲಿ ಸಮಾಜ ಜಾಗೃತಿ, ಧಾರ್ಮಿಕ ಅಸ್ಮಿತೆ ಮತ್ತು ಯುವ ಪೀಳಿಗೆಯ ರಕ್ಷಣೆಯ ಕುರಿತು ಚರ್ಚೆ ನಡೆಯಲಿದೆ. ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸುವಂತೆ ಹಿಂದೂ ಜನಜಾಗೃತಿ ಸಮಿತಿ ಮನವಿ ಮಾಡಿದೆ.

## ರಾಯರ ಮಠದಲ್ಲಿ ಹರಿ ಭಜನೆ

• ಉದಯವಾಹಿನಿ, ಬೆಂಗಳೂರು

ಪರಮಪೂಜ್ಯ ಶ್ರೀ ಶ್ರೀ ಸುಬುಧೇಂದ್ರತೀರ್ಥ ಶ್ರೀಪಾದಂಗಳವರ ಆದೇಶಾನುಸಾರ ನಗರದ ಶೇಷಾದ್ರಿಪುರದ ಪ್ಲಾಟ್ ಫಾರ್ಮ್ ರಸ್ತೆಯಲ್ಲಿರುವ ನಂಜನಗೂಡು ಶ್ರೀ ರಾಘವೇಂದ್ರ ಸ್ವಾಮಿಗಳ ಮಠದಲ್ಲಿ ಅಧಿಕ ಮಾಸದ ಪ್ರಯುಕ್ತ ಮೇ 17 ರಿಂದ ಜೂನ್ 14ರ ವರೆಗೆ ಪ್ರತಿದಿನ ಸಂಜೆ 6-00ಕ್ಕೆ ವಿವಿಧ ಭಜನಾ ಮಂಡಳಿಗಳ ಸದಸ್ಯರುಗಳಿಂದ ಹರಿ ಭಜನೆ ಕಾರ್ಯಕ್ರಮ ಏರ್ಪಡಿಸಲಾಗಿದೆ ಎಂದು ಶ್ರೀಮಠದ ವ್ಯವಸ್ಥಾಪಕರು ತಿಳಿಸಿದ್ದಾರೆ.

## ತಂದೆ-ತಾಯಿಯಿಲ್ಲದ ಹೆಣ್ಣುಮಕ್ಕಳನ್ನು ಮಾವನಿಂದಲೇ ದುಡ್ಡಿಗಾಗಿ ಮಾರಾಟ

• ಉದಯವಾಹಿನಿ, ಬೆಂಗಳೂರು

ದೆಹಲಿ ಖಾಸಗಿ ಬಸ್‌ನಲ್ಲಿ ಅತ್ಯಾಚಾರ ನಡೆದ ದುರ್ಘಟನೆ ಬೆನ್ನಲ್ಲೇ, ಬೆಂಗಳೂರಲ್ಲೂ ಮನಕಲಕುವ ಘಟನೆ ನಡೆದಿದೆ. ಕಗ್ಗಲೀಪುರದ ಕೈದಳ್ಳಿಪಾಳ್ಯದಲ್ಲಿ ದನ ಮೇಯಿಸುವ 29 ವರ್ಷದ ಕಿರಣ್‌ಕುಮಾರ್ ನಾಯಕ್ ಎಂಬ ವ್ಯಕ್ತಿ, ಚನ್ನಪಟ್ಟಣದಲ್ಲಿ ಸ್ವಿಮ್ಮಿಂಗ್ ಪೂಲ್ ನಿರ್ವಹಣೆ ಕೆಲಸ ಮಾಡುತ್ತಿದ್ದ, 20 ವರ್ಷದ ಆದಿತ್ಯ ಎಮ್‌ಕೆ ಎಂಬಾತ ಈ ಕೃತ್ಯ ಎಸಗಿದವರು. ಇಬ್ಬರನ್ನು ಸೈಬರ್ ಕಮಾಂಡ್ ಸೆಂಟರ್ ಪೊಲೀಸರು ಬಂಧಿಸಿದ್ದಾರೆ. ಈ ಪ್ರಕರಣ ಕಗ್ಗಲೀಪುರ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಬಾಲಕಿಯರು ರಾಮನಗರದವರಾಗಿದ್ದು, ಅವರ ತಾಯಿ ಹಲವು ವರ್ಷಗಳ ಹಿಂದೆ ಮೃತಪಟ್ಟಿದ್ದರು. ತಂದೆ ಕುಡುಕನಾಗಿದ್ದ, 2 ವರ್ಷಗಳ ಹಿಂದೆ ಆತನೂ ಮೃತಪಟ್ಟಿದ್ದನು. ಬಳಿಕ ಇಬ್ಬರು ಹೆಣ್ಣುಮಕ್ಕಳು ಅವರ ಮಾವನ ಜೊತೆ ಇದ್ದರು. ಆ ಆರೋಪಿಗಳ ಪೈಕಿ ಒಬ್ಬ ಈತನಿಗೆ ಅತ್ಯಂತ ಪರಿಚಿತನಾಗಿದ್ದನು. ಹೀಗಾಗಿ ದನ ಮೇಯಿಸುವಾತನಿಂದ ಹಣ ಪಡೆದು, ಅವರಿಗೆ ಹೆಣ್ಣುಮಕ್ಕಳನ್ನು ಕರೆದುಕೊಂಡು ಹೋಗುವಂತೆ ತಿಳಿಸಿದ್ದನು.

# ಡಿಕೆಶಿ ಅವರ ಹುಟ್ಟುಹಬ್ಬದ ಪ್ರಯುಕ್ತ ಅಂಧ ಮಕ್ಕಳಿಗೆ, ವಿಕಲಚೇತನರಿಗೆ ಆರ್ಥಿಕ ಸಹಾಯ ಹಸ್ತ

• ಉದಯವಾಹಿನಿ, ಬೆಂಗಳೂರು

ಮೌರ್ಯ ಹೋಟೆಲ್ ಸಭಾಂಗಣದಲ್ಲಿ ಕೆಪಿಸಿಸಿ ಅಧ್ಯಕ್ಷರು, ಉಪಮುಖ್ಯಮಂತ್ರಿಗಳಾದ ಡಿ.ಕೆ.ಶಿವಕುಮಾರ್ ರವರ ಹುಟ್ಟುಹಬ್ಬದ ಶುಭದಿನದಂದು ಸಾಮಾಜಿಕ ಸೇವಾ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು. ಮಾನ್ಯ ಸಾರಿಗೆ ಮತ್ತು ಮುಜರಾಯಿ ಸಚಿವರಾದ ರಾಮಲಿಂಗಾರೆಡ್ಡಿರವರು, ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಹಾಗೂ ಎಂಇಐ ಅಧ್ಯಕ್ಷರಾದ ಎಸ್.ಮನೋಹರ್ ರವರು, ಅಂಧ ಮಕ್ಕಳ ಜೊತೆಯಲ್ಲಿ ಕೇಕ್ ಕತ್ತರಿಸಿ , ಅಂಧರ ಸಂಸ್ಥೆಗೆ ಮತ್ತು ವಿಕಲಚೇತನರಿಗೆ, ಹಾಗೂ ವಿದ್ಯಾರ್ಥಿಗಳಿಗೆ ಸಹಾಯಧನ ವಿತರಿಸಿದರು.


ಉದಯವಾಹಿನಿ ಚಿತ್ರ

ಇದೇ ಸಂದರ್ಭದಲ್ಲಿ ಮಾತನಾಡಿದ ಸಚಿವರಾದ ಶ್ರೀ ರಾಮಲಿಂಗಾ ರೆಡ್ಡಿ ರವರು ಡಿ.ಕೆ.ಶಿವಕುಮಾರ್ ರವರು ಸಂಘಟನೆಯಲ್ಲಿ ಅತ್ಯಂತ ಮುಂಚೂಣಿ ನಾಯಕ, ಕಾಂಗ್ರೆಸ್ ಪಕ್ಷ ರಾಜ್ಯದಲ್ಲಿ ಅಧಿಕಾರಕ್ಕೆ ಬರಲು ಪ್ರಮುಖ ಕಾರಣಕರ್ತರು ಎಂದು ತಿಳಿಸಿದರು,

2028 ಮತ್ತು 2033ರ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷವು ಅಧಿಕಾರಕ್ಕೆ ಬರಲಿದೆ. ಎಸ್.ಐ.ಆರ್. ಮಾಡುವ ಬದಲು ಹೊಸದಾಗಿ ಮತದಾರರ ಪಟ್ಟಿಯನ್ನು ಸಿದ್ದಪಡಿಸಿ ಚುನಾವಣೆ ನಡೆಸಬೇಕು, ಬಿಜೆಪಿ ನಾಯಕರು ಹಾಗೂ ಕೇಂದ್ರದ ಮಂತ್ರಿಗಳು ಗಿಲಿಟ್ ಮಾತನಾಡಿ ಚುನಾವಣೆ ನಂತರ ಪೆಟ್ರೋಲ್, ಡೀಸಲ್ ದರ ಹೆಚ್ಚು ಮಾಡಿದ್ದಾರೆ ಎಂದು ಹೇಳಿದರು.

ರಾಜ್ಯದ ಜನತೆಗೆ ಮೋಸ ಮಾಡುವುದರಲ್ಲಿ ಕೇಂದ್ರ ಬಿಜೆಪಿ ಸರ್ಕಾರ ಮುಂದೆ ಇದೆ ಪ್ರತಿನಿತ್ಯ ಬೆಲೆ ಏರಿಕೆ ಮಾಡುತ್ತಿದ್ದಾರೆ ಚುನಾವಣೆ ನಡೆಯುವ ಸಂದರ್ಭದಲ್ಲಿ ಬೆಲೆ ಏರಿಸದೆ ಚುನಾವಣೆ ಮುಗಿದ ನಂತರ ಬೆಲೆ ಏರಿಸಿ ಜನರಿಗೆ ವಂಚನೆ ಮಾಡುತ್ತಿದ್ದಾರೆ, ದೇಶದ ಜನ ಬಿಜೆಪಿಯ ದುರಾಡಳಿತವನ್ನು ಗಮನಿಸುತ್ತಿದ್ದಾರೆ ಮುಂದಿನ ದಿನಗಳಲ್ಲಿ ಕಾಂಗ್ರೆಸ್ ಪಕ್ಷ ನುಡಿದಂತೆ ನಡೆದಿರುವ ಪಕ್ಷವೆಂಬುದು ಜನರಿಗೆ ಮನವರಿಕೆಯಾಗಿದ್ದು

ಮುಂದಿನ ಎಲ್ಲಾ ಚುನಾವಣೆಯಲ್ಲೂ ಕಾಂಗ್ರೆಸ್ ಪಕ್ಷ ಜನರ ಆಶೀರ್ವಾದ ಪಡೆದು ಅಧಿಕಾರದಲ್ಲಿ ಮುಂದುವರಿಯುತ್ತದೆ ಜನರ ಸೇವೆಯನ್ನು ಎಂದಿನಂತೆ ಮಾಡುವುದರ ಮೂಲಕ ಜನರ ವಿಶ್ವಾಸವನ್ನು ಕಾಂಗ್ರೆಸ್ ಪಕ್ಷ ಸರ್ಕಾರ ಮತ್ತೆ ಗಳಿಸುತ್ತದೆ ಎಂದು ಈ ಸಂದರ್ಭದಲ್ಲಿ ಮಾತನಾಡುವ ಮೂಲಕ ಡಿ.ಕೆ.ಶಿವಕುಮಾರ್ ರವರಿಗೆ ಶುಭಾಶಯ ಕೋರಿದರು, ಈ ಕಾರ್ಯಕ್ರಮದಲ್ಲಿ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿಗಳಾದ, ಎಂಇಐ ಸಂಸ್ಥೆಯ ಅಧ್ಯಕ್ಷರಾದ ಎಸ್.ಮನೋಹರ್, ಕಾಂಗ್ರೆಸ್ ಪಕ್ಷದ ಮುಖಂಡರಾದ ಎ.ಆನಂದ್ ಜಿ.ಜನಾರ್ದನ್, ಪ್ರಕಾಶ್, ಚಂದ್ರಶೇಖರ್, ಕುಶಾಲ್ ಅರುವೆಗೌಡ, ಪುಟ್ಟರಾಜು, ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು

### ಕಂದಾಯ ಗುಪ್ತಚರ ನಿರ್ದೇಶನಾಲಯ ಹಾಗೂ ಕಸ್ಟಮ್ಸ್ ಅಧಿಕಾರಿಗಳು ಹೆಚ್ಚಿನ ನಿಗಾ ವಹಿಸಿದ್ದಾರೆ

# ಡ್ರಗ್ಸ್ ಬಳಕೆದಾರರ ಮೇಲೂ ಬೀಳುತ್ತೆ 'ಕೇಸ್'

• ಉದಯವಾಹಿನಿ, ಬೆಂಗಳೂರು

ಮಾದಕ ವಸ್ತುಗಳ ಮಾರಾಟಕ್ಕೆ ಕಡಿವಾಣ ಹಾಕಲು ಪಣ ತೊಟ್ಟಿರುವ ನಗರ ಪೊಲೀಸರು, ಬರೀ ಡ್ರಗ್ ಪೆಡ್ಲರ್‌ಗಳು ಹಾಗೂ ಖರೀದಿದಾರರ ಮೇಲಷ್ಟೇ ಪ್ರಕರಣ ದಾಖಲಿಸುತ್ತಿಲ್ಲ ಅವರೊಂದಿಗೆ 'ಡ್ರಗ್ಸ್ ಬಳಕೆದಾರರ' ಮೇಲೂ ಹದ್ದಿನ ಕಣ್ಣಿಟ್ಟು, ಪ್ರಕರಣ ದಾಖಲಿಸುತ್ತಿದ್ದಾರೆ. ಕಳೆದ ನಾಲ್ಕೂವರೆ ತಿಂಗಳಲ್ಲಿ ಪೆಡ್ಲರ್‌ಗಳ ವಿರುದ್ಧ ದಾಖಲಾದ ಪ್ರಕರಣಗಳಿಗಿಂತಲೂ 'ಬಳಕೆದಾರರ' ವಿರುದ್ಧವೇ ಹೆಚ್ಚಿನ ಪ್ರಕರಣಗಳನ್ನು ದಾಖಲು ಮಾಡಿಕೊಂಡು ಬಿಸಿ ಮುಟ್ಟಿಸಿದ್ದಾರೆ.

**190 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ**

ಡ್ರಗ್ಸ್ ತೆಗೆದುಕೊಂಡು ಮೊದಲ ಬಾರಿಗೆ ಪೊಲೀಸರಿಗೆ ಸಿಕ್ಕಿಬಿದ್ದರೆ ಎಚ್ಚರಿಕೆ ನೀಡಿ ಮನೆಗೆ ಕಳುಹಿಸುತ್ತಾರೆ. ಎರಡು ಅಥವಾ ಮೂರನೇ ಬಾರಿ ಸಿಕ್ಕಿಬಿದ್ದರೆ ಜೈಲಿಗೆ ಹೋಗಬೇಕಾದ ಪರಿಸ್ಥಿತಿಯೂ ಬರಲಿದೆ. ಡ್ರಗ್ಸ್ ದಂಧೆಗೆ ಕಡಿವಾಣ ಹಾಕಲು, ಬಳಕೆದಾರರ ಮೇಲೂ ನಿಗಾ ಇಡಲಾಗುತ್ತಿದೆ ಎಂದು ಸಿಸಿಬಿ ಮೂಲಗಳು ಹೇಳಿವೆ. 2023ರಲ್ಲಿ ಡ್ರಗ್ಸ್ ಬಳಕೆದಾರರ ವಿರುದ್ಧ ಯಾವುದೇ ಕ್ರಮ ತೆಗೆದುಕೊಳ್ಳುತ್ತಿರಲಿಲ್ಲ. 2024ರಲ್ಲಿ ಬಳಕೆದಾರರ ಮೇಲೂ ಪ್ರಕರಣ ದಾಖಲಿಸಲು ಆರಂಭಿಸಲಾಗಿತ್ತು. ಆ ವರ್ಷ ಕೇವಲ 32 ಪ್ರಕರಣಗಳನ್ನಷ್ಟೇ ದಾಖಲು ಮಾಡಲಾಗಿತ್ತು. ಆದರೆ, ಈ ವರ್ಷ ಬಳಕೆದಾರರ ಮೇಲೆ ಹೆಚ್ಚಿನ ನಿಗಾ ಇಡುವಂತೆ ಹಿರಿಯ ಅಧಿಕಾರಿಗಳು ಸೂಚನೆ ನೀಡಿದ್ದು, ಜನವರಿ 1ರಿಂದ ಮೇ 12ರ ತನಕ ಬಳಕೆದಾರರ ವಿರುದ್ಧವೇ 1,800 ಪ್ರಕರಣ ದಾಖಲು ಮಾಡಲಾಗಿದೆ.

ಸಾಫ್ಟ್‌ವೇರ್ ಉದ್ಯೋಗಸ್ಥರು, ಕಾಲೇಜು ವಿದ್ಯಾರ್ಥಿಗಳು, ಶ್ರೀಮಂತ ಕುಟುಂಬದಿಂದ ಬಂದ ಯುವಕ ಯುವತಿಯರನ್ನೇ ಗುರಿಯಾಗಿಸಿಕೊಂಡು ಡ್ರಗ್ಸ್ ಜಾಲ ಕೆಲಸ ಮಾಡುತ್ತಿದೆ ಕಾಲೇಜು, ಪೇಯಿಂಗ್ ಗೆಸ್ಟ್‌ಗಳು ಹಾಗೂ ಹಾಸ್ಟೆಲ್‌ಗಳ ಬಳಿ ಮಾದಕ ವಸ್ತುಗಳ ಮಾರಾಟ ದಂಧೆ ನಡೆಯುತ್ತಿದೆ. ಪೆಡ್ಲರ್‌ಗಳು ಕದ್ದು ಮುಚ್ಚಿ ಮಧ್ಯವರ್ತಿಗಳಿಗೆ ಡ್ರಗ್ಸ್ ಪೂರೈಸುತ್ತಾರೆ. ಅವರು ವಿದ್ಯಾರ್ಥಿಗಳು ಹಾಗೂ ಟೆಕಿಗಳಿಗೆ ಮಾರಾಟ ಮಾಡುತ್ತಾರೆ.

**ದಿಢೀರ್ ದಾಳಿಗೆ ಸಿದ್ಧತೆ:** ಪಶ್ಚಿಮ ವಿಭಾಗದ ಆರು ಶಿಕ್ಷಣ ಸಂಸ್ಥೆಗಳು, ಎರಡು ಹಾಸ್ಟೆಲ್‌ಗಳ ಮೇಲೆ ಕಳೆದ ಮಾರ್ಚ್‌ನಲ್ಲಿ ದಾಳಿ ನಡೆಸಿ ವಿದ್ಯಾರ್ಥಿಗಳನ್ನು ತಪಾಸಣೆಗೆ ಒಳಪಡಿಸಲಾಗಿತ್ತು. 1,200 ವಿದ್ಯಾರ್ಥಿಗಳ ಮೂತ್ರದ ಮಾದರಿ ಸಂಗ್ರಹಿಸಿ ಪರೀಕ್ಷೆಗೆ ಒಳಪಡಿಸಲಾಗಿತ್ತು. ಆ ಪೈಕಿ 31 ವಿದ್ಯಾರ್ಥಿಗಳು ಡ್ರಗ್ಸ್ ತೆಗೆದುಕೊಂಡಿರುವುದು ವೈದ್ಯಕೀಯ ಪರೀಕ್ಷೆಯಿಂದ ದೃಢಪಟ್ಟಿತ್ತು. ಮುಂದಿನ ದಿನಗಳಲ್ಲಿ ಪೂರ್ವ, ಆಗ್ನೇಯ, ಉತ್ತರ, ದಕ್ಷಿಣ, ಈಶಾನ್ಯ, ವಾಯವ್ಯ ವಿಭಾಗಗಳ ವ್ಯಾಪ್ತಿಯ ಶಿಕ್ಷಣ ಸಂಸ್ಥೆಗಳು, ಹಾಸ್ಟೆಲ್‌ಗಳು ಹಾಗೂ ಪೇಯಿಂಗ್ ಗೆಸ್ಟ್‌ಗಳ ಮೇಲೂ ಇದೇ ಮಾದರಿಯಲ್ಲಿ ದಾಳಿ ನಡೆಸಿ ಅಲ್ಲಿನ ನಿವಾಸಿಗಳನ್ನು ತಪಾಸಣೆಗೆ ಒಳಪಡಿಸಲಾಗುವುದು ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಥಾಯ್ಲೆಂಡ್‌ನಲ್ಲಿ ನೆಲಸಿರುವ ಕೆಲವು ಭಾರತೀಯರು ಅಲ್ಲಿಂದ ನೇರವಾಗಿ ಬೆಂಗಳೂರಿಗೆ ಮಾದಕ ವಸ್ತುಗಳನ್ನು ಪೂರೈಸುತ್ತಿದ್ದಾರೆ. ಥಾಯ್ಲೆಂಡ್‌ನಲ್ಲಿ ಸುಲಭವಾಗಿ ಸಿಗುವ ಹೈಪ್ರೊ ಗಾಂಜಾವನ್ನು 'ಇಂಜಿನಿಯರಿಂಗ್ ಪ್ಯಾಕಿಂಗ್' ಮೂಲಕ ಕಾರ್ಗೋ ಸೇವೆಯ ಮೂಲಕ ಸಾಗಿಸಲಾಗುತ್ತಿದೆ. ಚಿನ್ನದ ಕಳ್ಳ ಸಾಗಣೆಯ ಮೇಲೆ ಹೀಗಾಗಿ, ಚಿನ್ನ ಕಳ್ಳ ಸಾಗಣೆ ಮಾಡುತ್ತಿದ್ದವರು ಇದೀಗ ಮಾದಕ ವಸ್ತುಗಳ ಪೂರೈಕೆ ದಂಧೆಗೆ ಇಳಿದಿದ್ದಾರೆ. 190 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಈ ವರ್ಷ ಬೆಂಗಳೂರಿನಲ್ಲಿ ಡ್ರಗ್ಸ್ ವಿರುದ್ಧ ಕಾರ್ಯಾಚರಣೆಯನ್ನು ತೀವ್ರಗೊಳಿಸಲಾಗಿದೆ.

ಅದರ ಪರಿಣಾಮವೇ ಹೆಚ್ಚು ಪ್ರಕರಣಗಳು ದಾಖಲಾಗಿವೆ ಎಂದು ಸಿಸಿಬಿ ಮೂಲಗಳು ಹೇಳಿವೆ. 2026ರ ಜನವರಿ 1ರಿಂದ ಮೇ 12ರ ತನಕ ನಗರದಲ್ಲಿ ನಡೆದ ಕಾರ್ಯಾಚರಣೆಯಲ್ಲಿ 190.18 ಕೋಟಿ ಮೌಲ್ಯದ ನೈಸರ್ಗಿಕ ಹಾಗೂ ಸಿಂಥೆಟಿಕ್ ಮಾದರಿಯ ಡ್ರಗ್ಸ್ ಜಪ್ತಿ ಮಾಡಲಾಗಿದೆ.

ಈ ದಂಧೆಯಲ್ಲಿ ತೊಡಗಿದ್ದ ಸ್ಥಳೀಯ ಹಾಗೂ ವಿದೇಶದ ಪ್ರಜೆಗಳೂ ಸೇರಿ ಒಟ್ಟು 2639 ಆರೋಪಿಗಳನ್ನು ಈಗಾಗಲೇ ಬಂಧಿಸಲಾಗಿದೆ. ಅಂದಾಜು 1128 ಕೆ.ಜಿ ಮಾದಕ ವಸ್ತು ಜಪ್ತಿ ಮಾಡಲಾಗಿದೆ. ಕಳೆದ 15 ದಿನಗಳಲ್ಲಿ 65 ಕೋಟಿ ಮೌಲ್ಯದ ಡ್ರಗ್ಸ್ ಜಪ್ತಿ ಮಾಡಲಾಗಿದೆ ಎಂದು ಸಿಸಿಬಿ ಮೂಲಗಳು ತಿಳಿಸಿವೆ.



ಉದಯವಾಹಿನಿ ಚಿತ್ರ

### ವಿದೇಶಗಳಿಂದಲೇ ಹೆಚ್ಚು ಪೂರೈಕೆ

**ಬೆಂಗಳೂರಿಗೆ ಹೆಚ್ಚಿನ ಪ್ರಮಾಣದಲ್ಲಿ ಸಿಂಥೆಟಿಕ್ ಮಾದರಿಯ ಡ್ರಗ್ಸ್ ವಿದೇಶದಿಂದ ಪೂರೈಕೆ ಆಗುತ್ತಿದೆ. ವಿಮಾನದ ಕಾರ್ಗೋ ಸೇವೆಯಲ್ಲಿ ಕಳ್ಳ ಸಾಗಣೆಯ ಮೂಲಕ ಬೆಂಗಳೂರಿಗೆ ಡ್ರಗ್ಸ್ ತಂದು, ಇಲ್ಲಿಂದ ದೇಶದ ಬೇರೆ ಬೇರೆ ನಗರಗಳಿಗೆ ಪೂರೈಕೆ ಮಾಡಲಾಗುತ್ತಿದೆ ಎಂದು ತನಿಖಾಧಿಕಾರಿಯೊಬ್ಬರು ಹೇಳಿದರು.**

### 'ಸನ್ನಿತ್ರ': ವ್ಯಸನಿಗಳಿಗೆ ಕೌನ್ಸೆಲಿಂಗ್

**ಮಾದಕ ಪದಾರ್ಥಗಳ ಸೇವನೆ ಮಾಡುವವರನ್ನು ಪತ್ತೆಹಚ್ಚಿ ವ್ಯಸನದಿಂದ ಮುಕ್ತಗೊಳಿಸಲು ಪೊಲೀಸ್ ಇಲಾಖೆ 'ಸನ್ನಿತ್ರ' ಯೋಜನೆ ರೂಪಿಸಿದೆ. ಯಾರೇ ಡ್ರಗ್ಸ್ ವ್ಯಸನಿ ಆಗಿದ್ದರೂ 'ಸನ್ನಿತ್ರ'ದ ಮೂಲಕ ಕೌನ್ಸೆಲಿಂಗ್‌ಗೆ ಒಳಪಡಿಸಲಾಗುವುದು. ಈಗಾಗಲೇ ಹಲವು ವಿದ್ಯಾರ್ಥಿಗಳನ್ನು ಕೌನ್ಸೆಲಿಂಗ್‌ಗೆ ಒಳಪಡಿಸಲಾಗಿದೆ. ಯಾವ ಕಾರಣಕ್ಕೆ ಮಾದಕ ಪದಾರ್ಥಗಳಿಗೆ ದಾಸರಾಗಿದ್ದಾರೆ ಅವರಿಗೆ ಡ್ರಗ್ಸ್ ಎಲ್ಲಿ ಸಿಗುತ್ತಿದೆ ಎಂಬುದನ್ನೂ ತಿಳಿದುಕೊಂಡು ಅವರನ್ನು ಸರಿದಾರಿಗೆ ತರಲು ಪ್ರಯತ್ನಿಸಲಾಗುತ್ತಿದೆ ಎಂದು ಅಧಿಕಾರಿಯೊಬ್ಬರು ತಿಳಿಸಿದರು.**

## ಬೆಂಗಳೂರಲ್ಲಿ ಒಳಚರಂಡಿ ದೋಷ ಪತ್ತೆಗೆ ರೋಬೋಟಿಕ್ ತಂತ್ರಜ್ಞಾನ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ನಗರದಲ್ಲಿ ಪೈಪ್‌ಲೈನ್ ಮತ್ತು ಒಳಚರಂಡಿ ದೋಷ ಪತ್ತೆಗೆ ಅತ್ಯಾಧುನಿಕ ರೋಬೋಟಿಕ್ ತಂತ್ರಜ್ಞಾನ ಬಂದಿದೆ. ರೋಬೋಟಿಕ್ ಬಳಕೆಯ ಪರಿಣಾಮಕಾರಿಯಾಗಿ ನಗರದಲ್ಲಿ ರಸ್ತೆ ಅಗೆಯುವ ಅವಶ್ಯಕತೆ ಗಣನೀಯವಾಗಿ ಕಡಿಮೆಯಾಗಿದೆ. ಕಳೆದ ಆರು ತಿಂಗಳಲ್ಲಿ ಬೆಂಗಳೂರು ಜಲಮಂಡಳಿ 399 ಸ್ಥಳಗಳಲ್ಲಿ ರಸ್ತೆ ಅಗೆಯುವುದನ್ನು ತಪ್ಪಿಸಿ, ಸಾರ್ವಜನಿಕರು ಮತ್ತು ವಾಹನ ಸವಾರರಿಗೆ ಆಗುತ್ತಿದ್ದ ತೊಂದರೆಯನ್ನು ತಡೆಯುವಲ್ಲಿ ಯಶಸ್ವಿಯಾಗಿದೆ. ಕಳೆದ ವರ್ಷ ನವೆಂಬರ್‌ನಲ್ಲಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಚಾಲನೆ ನೀಡಿದ್ದ ಈ ರೋಬೋಟಿಕ್ ವ್ಯವಸ್ಥೆಯನ್ನು ಜಲಮಂಡಳಿ ಈಗ ಯಶಸ್ವಿಯಾಗಿ ಬಳಸುತ್ತಿದೆ. ಪೈಪ್‌ಲೈನ್ ಒಳಗೆ ಚಲಿಸುವ ಈ ಯಂತ್ರಗಳು ರಸ್ತೆ ಒಡೆದು ಪರಿಶೀಲನೆ ನಡೆಸುವ ಅವಶ್ಯಕತೆಯಿಲ್ಲದೆ, ಒಳಚರಂಡಿ, ನೀರು ಸರಬರಾಜು ಮಾರ್ಗಗಳಲ್ಲಿನ ದೋಷಗಳನ್ನು ನಿಖರವಾಗಿ ಪತ್ತೆಹಚ್ಚುತ್ತಿವೆ ಎಂದು ಜಲಮಂಡಳಿ ಅಧ್ಯಕ್ಷ ರಾಮ್ ಪ್ರಸಾಥ್ ಮನೋಹರ್ ತಿಳಿಸಿದ್ದಾರೆ.

ಬೆಂಗಳೂರು ಮಹಾನಗರದಲ್ಲಿ ರಸ್ತೆ ಅಗೆಯುವುದರಿಂದ ಭಾರೀ ಟ್ರಾಫಿಕ್ ಸಮಸ್ಯೆ ಉಂಟಾಗುತ್ತದೆ. ಅದನ್ನು ತಪ್ಪಿಸಲು ಈ ಆಧುನಿಕ ತಂತ್ರಜ್ಞಾನವನ್ನು ಅಳವಡಿಸಿಕೊಂಡಿದ್ದೇವೆ. ರೋಬೋಟಿಕ್ ಯಂತ್ರಗಳು ರಸ್ತೆ ಅಗೆಯದೇ ಪೈಪ್ ಲೈನ್ ಒಳಗೆ ಸಂಚರಿಸಿ ದೋಷಗಳನ್ನು ಗುರುತಿಸುತಿವೆ ಎಂದು ಅವರು ತಿಳಿಸಿದ್ದಾರೆ. **ಪ್ರಮುಖ ಅಂಶಗಳು:** ಕಳೆದ ಆರು ತಿಂಗಳಲ್ಲಿ 32,661 ಮೀಟರ್ (ಸುಮಾರು 32.66 ಕಿ.ಮೀ) ಉದ್ದದ ಪೈಪ್‌ಲೈನ್‌ಗಳನ್ನು ರೋಬೋಟಿಕ್ ತಂತ್ರಜ್ಞಾನದ ಮೂಲಕ ಪರಿಶೀಲಿಸಲಾಗಿದೆ.ಒಟ್ಟು 394 ದೋಷಗಳನ್ನು ನಿಖರವಾಗಿ ಪತ್ತೆಹಚ್ಚಿ ತ್ವರಿತ ದುರಸ್ತಿ ಕಾರ್ಯ ಕೈಗೊಳ್ಳಲಾಗಿದೆ.ಬಂದಿದ್ದ 404 ದೂರುಗಳಲ್ಲಿ 399 ದೂರುಗಳನ್ನು ಈಗಾಗಲೇ ಇತ್ಯರ್ಥಪಡಿಸಲಾಗಿದೆ. ಉಳಿದ ಐದು ಪ್ರಕರಣಗಳಿಗೂ ಆದ್ಯತೆಯ ಮೇರೆಗೆ ಕ್ರಮ ಕೈಗೊಳ್ಳಲಾಗುತ್ತಿದೆ.ನಗರದಲ್ಲಿ ಸುಗಮ ಸಂಚಾರ ಕಾಪಾಡುವುದರ ಜೊತೆಗೆ ಮೂಲಸೌಕರ್ಯಗಳಿಗೆ ಹಾನಿಯಾಗದಂತೆ ನೋಡಿಕೊಳ್ಳುವುದು ಜಲಮಂಡಳಿಯ ಪ್ರಮುಖ ಗುರಿಯಾಗಿದೆ ಎಂದು ಅವರು ಹೇಳಿದರು ಮುಂದಿನ ದಿನಗಳಲ್ಲೂ ಜನಸ್ನೇಹಿ ಹಾಗೂ ತಂತ್ರಜ್ಞಾನ ಆಧರಿತ ಸೇವೆಗಳನ್ನು ಮತ್ತಷ್ಟು ವಿಸ್ತರಿಸುವುದಾಗಿ ಅವರು ಭರವಸೆ ನೀಡಿದ್ದಾರೆ.

# ಬೆಂ ಸುರಂಗ ರಸ್ತೆ: ಅಂತಿಮವಾಗದ ಟೆಂಡರ್

• ಉದಯವಾಹಿನಿ, ಧಾರವಾಡ

ಮಹಾನಗರದ ಬಹುನಿರೀಕ್ಷಿತ ಅವಳಿ ಸುರಂಗ ರಸ್ತೆ ನಿರ್ಮಾಣ ಯೋಜನೆಯ ಟೆಂಡರ್‌ನಲ್ಲಿ ಎಲ್-1 ಗುತ್ತಿಗೆ ಸಂಸ್ಥೆಯಾಗಿ ಆಯ್ಕೆಯಾಗಿರುವ ಅದಾನಿ ಗ್ರೂಪ್, ಅಂದಾಜು ವೆಚ್ಚಕ್ಕಿಂತ 4720 ಕೋಟಿ ರೂ.ಹೆಚ್ಚು ಮೊತ್ತಕ್ಕೆ ಬಿಡ್ ಸಲ್ಲಿಸಿದೆ. ಹೀಗಾಗಿ, ಟೆಂಡರ್ ಪ್ರಕ್ರಿಯೆ ಅಂತಿಮಗೊಳಿಸುವಲ್ಲಿ ವಿಳಂಬವಾಗುತ್ತಿದೆ. ಹೆಬ್ಬಾಳದ ಎಸ್ಟೀಮ್ ಮಾಲ್‌ನಿಂದ ಸಿಲ್ಕ್ ಬೋರ್ಡ್ ಜಂಕ್ಷನ್ ವರೆಗೆ ಎರಡು ಹಂತಗಳಲ್ಲಿ ನಿರ್ಮಿಸಲು ಉದ್ದೇಶಿಸಿರುವ 6 ಪಥಗಳ 'ಟ್ವಿನ್‌ಟ್ಯೂಬ್ ಟನಲ್' ನಿರ್ಮಾಣಕ್ಕೆ ಬೆಂಗಳೂರು ಸ್ಮಾರ್ಟ್ ಇನ್ಫ್ರಾಸ್ಟ್ರಕ್ಚರ್ ನಿಯಮಿತವು 17,780.13 ಕೋಟಿ ರೂ. ವೆಚ್ಚ ಅಂದಾಜಿಸಿ ಟೆಂಡರ್ ಆಹ್ವಾನಿಸಿತ್ತು.

**ಅದಾನಿ ಗ್ರೂಪ್ ಪಾಲಾಗಿರುವ ಟೆಂಡರ್:** ಸುರಂಗ ರಸ್ತೆ ನಿರ್ಮಾಣ ಯೋಜನೆಗೆ ಅದಾನಿ ಗ್ರೂಪ್, ವಿಶ್ವಸಮುದ್ರ ಇಂಜಿನಿಯರಿಂಗ್, ರೈಲ್ ವಿಕಾಸ್ ನಿಗಮ್ ಲಿಮಿಟೆಡ್, ದಿಲೀಪ್ ಬಿಲ್ಡರ್ಸ್ ಕಂಪನಿಗಳು ಬಿಡ್ ಸಲ್ಲಿಸಿದ್ದವು. ಈ ಪೈಕಿ ಅದಾನಿ ಗ್ರೂಪ್, ವಿಶ್ವಸಮುದ್ರ ಇಂಜಿನಿಯರಿಂಗ್ ಸಂಸ್ಥೆಯು ಎಲ್-1, ಎಲ್-2 ಗುತ್ತಿಗೆದಾರರಾಗಿ ಆಯ್ಕೆಯಾಗಿದ್ದವು. ಅದಾನಿ ಗ್ರೂಪ್ 22,500 ಕೋಟಿ ರೂ., ವಿಶ್ವಸಮುದ್ರ ಇಂಜಿನಿಯರಿಂಗ್ ಸಂಸ್ಥೆಯು 28,500 ಕೋಟಿ ರೂ. ಮೊತ್ತಕ್ಕೆ ಬಿಡ್ ಸಲ್ಲಿಸಿದ್ದವು. ಹೀಗಾಗಿ, ಅದಾನಿ ಗ್ರೂಪ್ ಎಲ್-1 ಗುತ್ತಿಗೆ ಸಂಸ್ಥೆಯಾಗಿ ಆಯ್ಕೆಯಾಗಿದೆ.


ಉದಯವಾಹಿನಿ ಚಿತ್ರ

''ಅದಾನಿ ಗ್ರೂಪ್ ಅಂದಾಜು ವೆಚ್ಚಕ್ಕಿಂತ ಅಧಿಕ ಮೊತ್ತಕ್ಕೆ ಬಿಡ್ ಸಲ್ಲಿಸಿರುವ ಹಿನ್ನೆಲೆಯಲ್ಲಿ ದರ ಸಂಧಾನ ಮಾತುಕತೆ ನಡೆಸಲಾಗುತ್ತಿದೆ. ಸರಕಾರ ಮತ್ತು ಹಿರಿಯ ಅಧಿಕಾರಿಗಳ ಹಂತದಲ್ಲೇ ಮಾತುಕತೆ ನಡೆಯುತ್ತಿದ್ದು, ಈವರೆಗೆ ಬಿಡ್ ಮೊತ್ತ ಅಂತಿಮಗೊಂಡಿಲ್ಲ. ಹೀಗಾಗಿ, ಕಾರ್ಯಾದೇಶ ನೀಡಿಲ್ಲ. ಅಲ್ಲದೆ, ಬಿಡ್ ಮೊತ್ತ ಜಾಸ್ತಿಯಿರುವ ಹಿನ್ನೆಲೆಯಲ್ಲಿ ಸಚಿವ ಸಂಪುಟದ ಅನುಮೋದನೆ ಪಡೆಯಬೇಕಿದೆ. ಈ ಎಲ್ಲಾ ಪ್ರಕ್ರಿಯೆಗಳು ಪೂರ್ಣಗೊಳ್ಳಲು ಸಾಕಷ್ಟು ಸಮಯ ಹಿಡಿಯಲಿದೆ. ನಂತರ ಭೂಸ್ವಾಧೀನಕ್ಕೆ ಜಾಗ, ಕಟ್ಟಡಗಳನ್ನು ಗುರುತಿಸಬೇಕಾಗುತ್ತದೆ. ಈ ಹಿನ್ನೆಲೆಯಲ್ಲಿ ಸದ್ಯಕ್ಕೆ ಕಾಮಗಾರಿ ಶುರುವಾಗುವುದಿಲ್ಲ'' ಎಂದು ಬಿ-ಸ್ಮೈಲ್‌ನ ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

ರಾಜಧಾನಿಯ ಸಂಚಾರ ದಟ್ಟಣೆ ಸಮಸ್ಯೆ ನಿವಾರಿಸಲು ರಾಜ್ಯ ಸರಕಾರ ಕೈಗೊಂಡಿರುವ ಮಹತ್ವಾಕಾಂಕ್ಷೆಯ ಸುರಂಗ ರಸ್ತೆ ನಿರ್ಮಾಣ ಯೋಜನೆಯು ವಿವಾದದ ತರಂಗದಲ್ಲೇ ಸಿಲುಕಿ ಹಾಕಿಕೊಂಡಿದೆ. ನಗರದ ಕಿರೀಟದಂತಿರುವ ಲಾಲ್ ಬಾಗ್‌ನ 6 ಎಕರೆ ಜಾಗವನ್ನು ಸುರಂಗ ರಸ್ತೆಯ ಪ್ರವೇಶ, ನಿರ್ಗಮನ ದ್ವಾರ ನಿರ್ಮಾಣಕ್ಕೆ ಬಳಸಿಕೊಳ್ಳುತ್ತಿರುವುದಕ್ಕೆ ಪರಿಸರವಾದಿಗಳಿಂದ ತೀವ್ರ ವಿರೋಧವಿದೆ. ಟೆಂಡರ್ ಪ್ರಕ್ರಿಯೆ ಅಂತಿಮಗೊಂಡು, ಕೆಲಸ ಶುರುವಾದರೆ ಪ್ರತಿರೋಧದ ಕಿಚ್ಚು ಮತ್ತಷ್ಟು ಜೋರಾಗುವ ಸಾಧ್ಯತೆಗಳಿವೆ.

## ಭವಿಷ್ಯದ ಉದ್ಯಮಗಳಿಗೆ ಸಿದ್ಧಗೊಳಿಸುವತ್ತ ರೇವಾ


ಉದಯವಾಹಿನಿ ಚಿತ್ರ

• ಉದಯವಾಹಿನಿ, ಬೆಂಗಳೂರು

ಭವಿಷ್ಯದ ಉದ್ಯಮಗಳ ಅಗತ್ಯಗಳಿಗೆ ಅನುಗುಣವಾಗಿ ಕೌಶಲಯುತ ಹಾಗೂ ಬಹುಶಿಸ್ತೀಯ ವೃತ್ತಿಪರರನ್ನು ರೂಪಿಸಲು ರೇವಾ ವಿಶ್ವವಿದ್ಯಾಲಯ ಹಲವು ನೂತನ ಶೈಕ್ಷಣಿಕ ಉಪಕ್ರಮಗಳನ್ನು ಘೋಷಿಸಿದೆ.

ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಕುಲಾಧಿಪತಿ ಪಿ.ಶ್ಯಾಮರಾಜು, ಭಾರತ, ತಾಂತ್ರಿಕ ಹಾಗೂ ಕೈಗಾರಿಕಾ ಪರಿವರ್ತನೆಯ ಮಹತ್ವದ ಹಾದಿಯಲ್ಲಿದೆ.

ವಿವಿಧ ಕ್ಷೇತ್ರಗಳಲ್ಲಿ ಪರಿಣತ ಪ್ರತಿಭೆಗಳ ಕೊರತೆ ಮುಂದುವರಿದಿದ್ದು, ಅದನ್ನು ನಾವು ಸವಾಲಾಗಿ ನೋಡದೆ ಅವಕಾಶವಾಗಿ ಪರಿಗಣಿಸಿದ್ದೇವೆ. ಬಹುಶಿಸ್ತೀಯ ಕಲಿಕೆ, ಎ.ಐ ಸಂಯೋಜಿತ ಪಠ್ಯಕ್ರಮ, ಸೆಂಟರ್ಸ್ ಆಫ್ ಎಕ್ಸಲೆನ್ಸ್, ಉದ್ಯಮ ಸಹಯೋಗ ಹಾಗೂ ವಿದ್ಯಾರ್ಥಿ ವೇತನಗಳ ಮೂಲಕ ವಿದ್ಯಾರ್ಥಿಗಳಿಗೆ ನೈಜ ಜಗತ್ತಿನ ಕೌಶಲ ಮತ್ತು ಜಾಗತಿಕ ದೃಷ್ಟಿಕೋನ ನೀಡುವ ವಾತಾವರಣ ನಿರ್ಮಿಸುತ್ತಿದ್ದೇವೆ' ಎಂದು ಹೇಳಿದರು.

ಸೆಮಿಕಂಡಕ್ಟರ್, ಏರೋಸ್ಪೇಸ್, ಎಲೆಕ್ಟ್ರಿಕ್ ಮೊಬಿಲಿಟಿ, ಸ್ವಚ್ಛ ಇಂಧನ, ಆಟೋಮೇಷನ್, ಡಿಜಿಟಲ್ ಮೂಲಸೌಕರ್ಯ, ಅಡ್ವಾನ್ಸ್ ಮ್ಯಾನುಫ್ಯಾಕ್ಚರಿಂಗ್ ಕ್ಷೇತ್ರಗಳಲ್ಲಿ ವೇಗವಾಗಿ ಹೆಚ್ಚುತ್ತಿರುವ ಬೇಡಿಕೆಯನ್ನು ಗಮನದಲ್ಲಿ ಇಟ್ಟುಕೊಂಡು, ವಿದ್ಯಾರ್ಥಿಗಳನ್ನು ಭವಿಷ್ಯದ ಉದ್ಯಮಗಳಿಗೆ ಸಿದ್ಧಗೊಳಿಸುವತ್ತ ಒತ್ತು ನೀಡುತ್ತಿದೆ ಎಂದರು.

# ಮುಂಗಾರಿಗೆ ಸನ್ನದ್ಧ 'ಪ್ರಹರಿ' ಪರೇಡ್: ಜಿಬಿಎ ಮುಖ್ಯ ಆಯುಕ್ತ ಮಹೇಶ್ವರ ರಾವ್

• ಉದಯವಾಹಿನಿ, ಬೆಂಗಳೂರು



ಗ್ರೇಟರ್ ಬೆಂಗಳೂರು ಪ್ರಾಧಿಕಾರ ವ್ಯಾಪ್ತಿಯಲ್ಲಿ ಮುಂಗಾರು ಸನ್ನದ್ಧತೆಯನ್ನು ಮತ್ತಷ್ಟು ಬಲಪಡಿಸಲು 'ಪ್ರಹರಿ' ವಾಹನಗಳ ಪರೇಡ್ ಆಯೋಜಿಸಬೇಕು ಎಂದು ಜಿಬಿಎ ಮುಖ್ಯ ಆಯುಕ್ತ ಎಂ. ಮಹೇಶ್ವರ ರಾವ್ ತಿಳಿಸಿದರು.

ನಡೆದ ಸಮನ್ವಯ ಸಭೆಯಲ್ಲಿ ಮಾತನಾಡಿದ ಅವರು, 'ಪ್ರಹರಿ ವಾಹನಗಳಲ್ಲಿರುವ ಎಲ್ಲಾ ಅಗತ್ಯ ಉಪಕರಣಗಳನ್ನು ಸಮಗ್ರವಾಗಿ ಪರಿಶೀಲಿಸಬೇಕು. ಮಳೆ ಸಂಬಂಧಿತ ತುರ್ತು ಪರಿಸ್ಥಿತಿ ಎದುರಿಸಲು ಸಂಪೂರ್ಣ ಕಾರ್ಯ ಸನ್ನದ್ಧವಾಗಿರುವುದನ್ನು ಖಚಿತಪಡಿಸಿಕೊಳ್ಳಬೇಕು' ಎಂದು ನಿರ್ದೇಶಿಸಿದರು.

ಮರ ಕಟಾವು ಯಂತ್ರೋಪಕರಣಗಳು, ವಾಹನಗಳು, ಹಾಗೂ ಸಂಬಂಧಿತ ತುರ್ತು ಸೇವಾ ಸಾಧನಗಳನ್ನು ಕೂಡ ವಿವರವಾಗಿ ಪರಿಶೀಲಿಸಿ, ಒಂದು ವಾರದೊಳಗಾಗಿ ಸಮಗ್ರ ಸಿದ್ಧತಾ ವರದಿಯನ್ನು ಸಲ್ಲಿಸಬೇಕು ಎಂದು ಅಧಿಕಾರಿಗಳಿಗೆ ಸೂಚಿಸಿದರು.

ಪ್ರವಾಹ ಉಂಟಾಗುವ ಮತ್ತು ನೀರು ನಿಲ್ಲುವ ರೈಲ್ವೆ ತಗ್ಗು ಪ್ರದೇಶಗಳಿಗೆ ಸಂಬಂಧಿತ ನಗರ ಪಾಲಿಕೆ ಅಧಿಕಾರಿಗಳು ಹಾಗೂ ರೈಲ್ವೆ ಅಧಿಕಾರಿಗಳು ಭೇಟಿ ನೀಡಿ ಜಂಟಿಯಾಗಿ ಪರಿಶೀಲಿಸಬೇಕು. ಸಮಸ್ಯೆಗಳನ್ನು ಸಮನ್ವಯದಿಂದ ಪರಿಹರಿಸಬೇಕು. ಬಾಕಿ ಉಳಿದಿರುವ ಕಾಮಗಾರಿಗಳನ್ನು ಶೀಘ್ರ ಪೂರ್ಣಗೊಳಿಸಬೇಕು ಎಂದು ತಿಳಿಸಿದರು.

ನಿಯಂತ್ರಣ ಕೊಠಡಿಗಳನ್ನು ಪರಿಶೀಲಿಸಿ, ಭಾರಿ ಮಳೆ ಹಾಗೂ ಪ್ರವಾಹ ಪರಿಸ್ಥಿತಿಗಳಿಗೆ ಪರಿಣಾಮಕಾರಿಯಾಗಿ ಸ್ಪಂದಿಸಲು ಅಗತ್ಯ ಸೌಲಭ್ಯಗಳು, ತುರ್ತು ವ್ಯವಸ್ಥೆಗಳು ಹಾಗೂ ಸಿಬ್ಬಂದಿ ಸಿದ್ಧವಾಗಿರುವುದನ್ನು ಖಚಿತ ಪಡಿಸಿಕೊಳ್ಳಬೇಕು. ನಗರದ ಎಲ್ಲಾ ಪ್ರವಾಹ ಪೀಡಿತ ಪ್ರದೇಶಗಳನ್ನು ನಿಯಮಿತವಾಗಿ ಮೇಲ್ವಿಚಾರಣೆ ಮಾಡಬೇಕು. ಪ್ರವಾಹ ನಿಯಂತ್ರಣಕ್ಕಾಗಿ ಮುನ್ನೆಚ್ಚರಿಕೆ ಮತ್ತು ತುರ್ತು ಕ್ರಮಗಳನ್ನು ಕೈಗೊಳ್ಳಬೇಕು ಎಂದರು.

**ರಸ್ತೆಗಳ ಗುಣಮಟ್ಟ ಕಾಪಾಡಲು, ಸಮನ್ವಯದ ಮೂಲಕ ಕಾಮಗಾರಿಗಳನ್ನು ಖಚಿತಪಡಿಸಲು ಪೂರ್ವಾನುಮತಿ ಇಲ್ಲದೆ ರಸ್ತೆ ಕತ್ತರಿಸುವವರ ವಿರುದ್ಧ ಪ್ರಕರಣ ದಾಖಲಿಸಿ ಕ್ರಮ ಕೈಗೊಳ್ಳಲಾಗುವುದು**

**- ಎಂ. ಮಹೇಶ್ವರ ರಾವ್, ಜಿಬಿಎ ಮುಖ್ಯ ಆಯುಕ್ತ**

ವಿಶೇಷ ಆಯುಕ್ತರಾದ ಸುಷಮಾ ಗೋಡಬೋಲೆ, ಘನತ್ಯಾಜ್ಯ ನಿರ್ವಹಣಾ ನಿಯಮಿತದ ಸಿಇಒ ಕರೀಗೌಡ, ನಗರ ಪಾಲಿಕೆಗಳ ಆಯುಕ್ತರು, ಮುಖ್ಯ ಎಂಜಿನಿಯರ್‌ಗಳು, ರೈಲ್ವೆ, ಜಲಮಂಡಳಿ, ಬಿಡಿಎ ಅಧಿಕಾರಿಗಳು ಉಪಸ್ಥಿತರಿದ್ದರು.

**'ಅಗತ್ಯವಿದ್ದರೆ ಇನ್ನಷ್ಟು ಖರೀದಿಸಿ':** ನಗರದ ಸ್ವಚ್ಛತೆ ಮತ್ತು ತ್ಯಾಜ್ಯ ನಿರ್ವಹಣೆಯನ್ನು ಮತ್ತಷ್ಟು ಬಲಪಡಿಸಲು ಅಗತ್ಯ ಸಂಖ್ಯೆಯಲ್ಲಿ ಲಿಟ್ಟರ್ ಪಿಕ್ಕರ್‌ಗಳನ್ನು ಖರೀದಿಸುವ ಕುರಿತು ಪರಿಶೀಲನೆ ನಡೆಸಬೇಕು. ರಸ್ತೆ ತಡೆ ಗೋಡೆಗಳ ಸ್ವಚ್ಛತೆ, ಸಮರ್ಪಕ ನಿರ್ವಹಣೆ, ಅಗತ್ಯವಿದ್ದಲ್ಲಿ ಹೂಳೆತ್ತುವಿಕೆ ಕಾರ್ಯ ಕೈಗೊಳ್ಳಬೇಕು.

ನಗರದಲ್ಲಿರುವ ಶಿಥಿಲಾವಸ್ಥೆಯ ಕಟ್ಟಡಗಳು ಹಾಗೂ ಅಪಾಯಕಾರಿ ಕಾಂಪೌಂಡ್‌ಗಳನ್ನು ತೆರವುಗೊಳಿಸಬೇಕು ಎಂದು ನಿರ್ದೇಶನ ನೀಡಿದರು.

# ಎಸ್‌ಐಆರ್‌ಗೆ ಕರ್ನಾಟಕದಲ್ಲಿ ಆರಂಭದಲ್ಲೇ ವಿರೋಧ

## ಎಸ್ ಐ ಆರ್ ಪ್ರಕ್ರಿಯೆಯ ಕುರಿತಾಗಿ ಗೃಹ ಸಚಿವ ಡಾ. ಜಿ ಪರಮೇಶ್ವರ್ ಪ್ರತಿಕ್ರಿಯೆ, ಕಾಂಗ್ರೆಸ್ ನಾಯಕರಿಗೆ ಅನುಮಾನ, ಕಾರಣ ಏನು

• ಉದಯವಾಹಿನಿ, ಬೆಂಗಳೂರು

ಮತದಾರರ ಪಟ್ಟಿಯ ವಿಶೇಷ ಸಮಗ್ರ ಪರಿಷ್ಕರಣೆ ಪ್ರಕ್ರಿಯೆ ಕರ್ನಾಟಕದಲ್ಲಿ ಮೇ 20ರಿಂದ ಆರಂಭಗೊಳ್ಳಲಿದೆ. ಕರ್ನಾಟದಲ್ಲಿ 5.50 ಕೋಟಿ ಮತದಾರರಿದ್ದು, ಈ ಪೈಕಿ ಯಾರೆಲ್ಲಾ ಮತದಾನಕ್ಕೆ ಅರ್ಹರು ಎಂಬುವುದು ನಿರ್ಧಾರವಾಗಲಿದೆ. ಆದರೆ ಎಸ್‌ಐ ಆರ್ ಪ್ರಕ್ರಿಯೆಗೆ ಆರಂಭದಿಂದಲೇ ವಿರೋಧ ಎದುರಾಗಿದೆ. ಪಶ್ಚಿಮ ಬಂಗಾಳದಲ್ಲಿ ಬಿಜೆಪಿ ಗೆಲುವಿಗೆ ಎಸ್‌ಐಆರ್ ಪಾತ್ರ ಇದೆ ಎಂಬ ಆರೋಪದ ಹಿನ್ನೆಲೆಯಲ್ಲಿ ರಾಜ್ಯದ ಕಾಂಗ್ರೆಸ್ ನಾಯಕರು ಅಲರ್ಟ್ ಆಗಿದ್ದಾರೆ.


**ಕಾಂಗ್ರೆಸ್ ಅನುಮಾನ!:** ಎಸ್ ಐ ಆರ್ ಬಗ್ಗೆ ಕಾಂಗ್ರೆಸ್ ನಾಯಕರು ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಕುರಿತಾಗಿ ಬೆಂಗಳೂರಿನಲ್ಲಿ ಶುಕ್ರವಾರ ಪ್ರತಿಕ್ರಿಯೆ ನೀಡಿರುವ ಗೃಹ ಸಚಿವ ಡಾ. ಜಿ ಪರಮೇಶ್ವರ್, ಎಸ್‌ಐಆರ್ ಬಗ್ಗೆ ಅನುಮಾನಗಳು ಇವೆ ಎಂದಿದ್ದಾರೆ. ''ಎಸ್ ಐಆರ್ ಪ್ರಕ್ರಿಯೆಯ ಬಗ್ಗೆ ನಮಗೆಲ್ಲರಿಗೆ ಅನುಮಾನಗಳಿವೆ. ಪಶ್ಚಿಮ ಬಂಗಾಳ ಮತ್ತು ಇತರ ರಾಜ್ಯಗಳಲ್ಲಿ ನಡೆದ ಎಸ್ ಐ ಆರ್ ಪ್ರಕ್ರಿಯೆ ಈ ಅನುಮಾನ ಹುಟ್ಟಲು ಕಾರಣವಾಗಿದೆ. ಕೆಲವರನ್ನು ಉದ್ದೇಶ ಪೂರ್ವಕವಾಗಿ ಓಟರ್ ಲೀಸ್ಟ್ ನಿಂದ ಹೊರಗಿಡಲಾಗಿತ್ತಿದೆ. ಕೆಲವರನ್ನು ಸೇರ್ಪಡೆ ಮಾಡಲಾಗುತ್ತಿದೆ'' ಎಂದು ವಿವರಿಸಿದರು.



**ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣೆಯಲ್ಲಿ ಹೆಚ್ಚು ಕಡಿಮೆ ಜನ ಸಮುದಾಯಕ್ಕೆ ಇದು ಅರ್ಥ ಆಗಿದೆ. ಹಾಗಾಗಿ ಎಸ್‌ಐಆರ್ ಬಗ್ಗೆ ನಮಗೂ ಕೂಡ ಅನುಮಾನ ಇದೆ . ಅದನ್ನ ಸರಿಯಾದ ರೀತಿಯಲ್ಲಿ ಮಾಡಲು ನಾವು ಕೂಡ ನೋಡಿಕೊಳ್ಳುತ್ತೇವೆ. ನಾವು ಹೇಳಿದ ಕೂಡಲೆ ಅವರೇನು ಮುಗಿಸೋದಿಲ್ಲ. ಮುಗಿಸೋದಿದ್ರೆ ಖಂಡಿತವಾಗಿ ನಾವು ವಿರೋಧ ಮಾಡಿಯೇ ಮಾಡುತ್ತೇವೆ.**

**- ಡಾ. ಜಿ ಪರಮೇಶ್ವರ್, ಗೃಹ ಸಚಿವ**

**ಸಂಘಟನೆಗಳಿಂದ ಸಿದ್ದರಾಮಯ್ಯ ಭೇಟಿ:** ಎಸ್ ಐ ಆರ್ ಪ್ರಕ್ರಿಯೆಯಲ್ಲಿ ವ್ಯಕ್ತವಾಗುತ್ತಿರುವ ಅನುಮಾನದ ಹಿನ್ನೆಲೆಯಲ್ಲಿ ವಿವಿಧ ಸಂಘಟನೆಗಳ ಪದಾಧಿಕಾರಿಗಳು ಸಿಎಂ ಸಿದ್ದರಾಮಯ್ಯ ಅವರನ್ನು ಭೇಟಿ ಮಾಡಿ ಮಾತುಕತೆ ನಡೆಸಿದ್ದಾರೆ. ಸಿಎಂ ಗೃಹ ಕಚೇರಿ ಕೃಷ್ಣಾದಲ್ಲಿ ಈ ಸಭೆ ನಡೆದಿತ್ತು. ಎಸ್ ಐ ಆರ್ ಪ್ರಕ್ರಿಯೆಯಲ್ಲಾಗುವ ಲೋಪಗಳ ಬಗ್ಗೆ ಚರ್ಚೆ ನಡೆಸಲಾಗಿತ್ತು. ಸರ್ಕಾರ ಈ ನಿಟ್ಟಿನಲ್ಲಿ ಗಂಭೀರವಾಗಿ ಪರಿಗಣಿಸಬೇಕು ಎಂದು ಸಂಘಟನೆಗಳ ಪ್ರಮುಖರು ಮನವಿ ಮಾಡಿದ್ದರು.


ಉದಯವಾಹಿನಿ ಚಿತ್ರ

### ಚುನಾವಣಾ ಆಯೋಗದ ಸ್ಪಷ್ಟನೆ ಏನು?

**ಎಸ್‌ಐಆರ್ ಎನ್ನುವುದು ಮತದಾರರು, ರಾಜಕೀಯ ಪಕ್ಷಗಳು ಮತ್ತು ಚುನಾವಣಾ ಅಧಿಕಾರಿಗಳು ಸೇರಿದಂತೆ ಎಲ್ಲಾ ಪಾಲುದಾರರನ್ನು ಒಳಗೊಂಡ ಒಂದು ಸಹಭಾಗಿತ್ವದ ಕಾರ್ಯವಿಧಾನವಾಗಿದೆ ಎಂಬುವುದು ಚುನಾವಣಾ ಆಯೋಗದ ಸ್ಪಷ್ಟನೆಯಾಗಿದೆ. ಚುನಾವಣಾ ಆಯೋಗವು ಎಲ್ಲಾ ರಾಜಕೀಯ ಪಕ್ಷಗಳ ಪ್ರತಿನಿಧಿಗಳನ್ನು ಪ್ರತಿ ಮತದಾನ ಕೇಂದ್ರಕ್ಕೆ ಬಿಎಲ್‌ಎಗಳನ್ನು ನೇಮಿಸಲು ವಿನಂತಿಸಿದೆ. ಇದರಿಂದ ರಾಜಕೀಯ ಪಕ್ಷಗಳ ಸಂಪೂರ್ಣ ಭಾಗವಹಿಸುವಿಕೆ ಖಾತರಿಯಾಗುತ್ತದೆ. ಎಸ್‌ಐಆರ್ ಸಂಪೂರ್ಣ ಪಾರದರ್ಶಕತೆ ಮತ್ತು ರಾಜಕೀಯ ಪಕ್ಷಗಳ ಪೂರ್ಣ ಸಹಭಾಗಿತ್ವದೊಂದಿಗೆ ನಡೆಸಲು ಸಾಧ್ಯವಾಗುತ್ತದೆ ಎಂಬುವುದು ಚುನಾವಣಾ ಆಯೋಗದ ವಾದವಾಗಿದೆ.**

**ಹೇಗೆ ನಡೆಯಲಿದೆ ಪ್ರಕ್ರಿಯೆ?:** ಕರ್ನಾಟಕದಲ್ಲಿ ಜೂನ್ 20 ರಂದು ಎಸ್‌ಐ ಆರ್ ಕುರಿತಾಗಿ ಸಿಬ್ಬಂದಿಗೆ ತರಬೇತಿ ನಡೆಯಲಿದೆ. ಜೂನ್ 30 ರಿಂದ ಬಿಎಲ್‌ಒಗಳು ಮನೆಗಳಿಗೆ ಭೇಟಿ ನೀಡಲಿದ್ದಾರೆ. ಈ ಪ್ರಕ್ರಿಯೆ ಜುಲೈ 29ರವರೆಗೆ ನಡೆಯಲಿದೆ.

- **ರೇಷನಲೈಸಿಂಗ್ ಪೋಲೀಂಗ್ ಸ್ಟೇಷನ್ - ಜುಲೈ 29**
- **ಮತದಾರರ ಪಟ್ಟಿ ಪ್ರಕಟ ಆಗಸ್ಟ್ 5, 2026**
- **ಆಕ್ಷೇಪ ಆಹ್ವಾನ - ಆಗಸ್ಟ್ 5 ರಿಂದ ಅ. 3, 2026**
- **ಅಂತಿಮ ಪಟ್ಟಿ ಪ್ರಕಟಣೆ - ಅಕ್ಟೋಬರ್ 7- .2026**
- **ಬಿ ಎಲ್ ಒ ಗಳ ಸಂಖ್ಯೆ - 59050**
- **ಬಿ ಎಲ್ ಎ ಗಳು - 25284**
- **ಒಟ್ಟು ಮತದಾರರು - 55574064**

## ಅಂತರಾಳದಿಂದ.. EDITORIAL

# ಬೆಂಬಲ ನೀಡುವ ಬದಲು ನಿರ್ಬಂಧ ವಿನೇಶ್ ವಿರುದ್ಧ 'ರಾಜಕೀಯ ಕುಸ್ತಿ'



ದೇಶದ ಅತ್ಯಂತ ಪ್ರಸಿದ್ಧ ಕುಸ್ತಿಪಟುಗಳಲ್ಲಿ ಒಬ್ಬರಾದ ವಿನೇಶ್ ಫೋಗಟ್ ಹಾಗೂ 'ಭಾರತ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್ಐ) ನಡುವಿನ ಸಂಘರ್ಷವು, ರಾಜಕೀಯ ಮತ್ತು ಪುರುಷಪ್ರಾಧಾನ್ಯ ಮನಃಸ್ಥಿತಿ ಮೇಲುಗೈ ಸಾಧಿಸಿರುವ ವ್ಯವಸ್ಥೆಯಲ್ಲಿ ಮಹಿಳಾ ಕ್ರೀಡಾಪಟುಗಳು ಎದುರಿಸಬೇಕಾದ ಸಂಕಷ್ಟಕ್ಕೆ ಮತ್ತೊಂದು ನಿದರ್ಶನವಾಗಿದೆ. ಡಬ್ಲ್ಯುಎಫ್ಐ ಮತ್ತು ಅದರ ಮಾಜಿ ಮುಖ್ಯಸ್ಥ, ಬಿಜೆಪಿ ಮುಖಂಡ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಧ್ವನಿಯೆತ್ತಿದ ನಂತರ, ಎರಡು ಕಡೆಯಿಂದಲೂ ವಿನೇಶ್ ಅವರ ಮೇಲೆ ದಾಳಿ ನಡೆದಿದೆ. ತಾಯ್ತನದ ವಿರಾಮದ ನಂತರ ಸ್ಪರ್ಧಾತ್ಮಕ ಕುಸ್ತಿಕಣಕ್ಕೆ ಮರಳಲು ವಿನೇಶ್ ಪ್ರಯತ್ನಿಸುತ್ತಿದ್ದು, 'ರಾಷ್ಟ್ರೀಯ ಓಪನ್ ರ್‍ಯಾಂಕಿಂಗ್ ಟೂರ್ನಿ'ಯಲ್ಲಿ ಭಾಗವಹಿಸಲು ಡಬ್ಲ್ಯುಎಫ್ಐ ಅವರಿಗೆ ಅವಕಾಶ ನಿರಾಕರಿಸಿತು. ನಿವೃತ್ತ ಆಟಗಾರರು ಸ್ಪರ್ಧಾಕಣಕ್ಕೆ ಮರಳಲು ನಿರ್ಧರಿಸಿದಲ್ಲಿ, ಆ ವಿಷಯವನ್ನು 'ವಿಶ್ವ ಕುಸ್ತಿ ಸಂಸ್ಥೆ'ಗೆ (ಯುಡಬ್ಲ್ಯುಡಬ್ಲ್ಯು) ಆರು ತಿಂಗಳ ಮೊದಲು ತಿಳಿಸಿರಬೇಕು. ಆ ನಿಯಮವನ್ನು ಪಾಲಿಸದೆ ಹೋದುದೇ ವಿನೇಶ್ ಅನರ್ಹತೆಗೆ ಕಾರಣ ಎಂದು ಡಬ್ಲ್ಯುಎಫ್ಐ ಹೇಳುತ್ತಿದೆ.

> **ಬ್ರಿಜ್ ಭೂಷಣ್ ಸಿಂಗ್‌ರ ಲೈಂಗಿಕ ದೌರ್ಜನ್ಯಕ್ಕೆ ಬಲಿಯಾದವರಲ್ಲಿ ತಾವೂ ಒಬ್ಬರು ಎಂದು ಇತ್ತೀಚೆಗಷ್ಟೇ ವಿನೇಶ್ ಹೇಳಿಕೊಂಡಿದ್ದರು.**

ಆದರೆ, ನಿಯಮಾನುಸಾರ ಯುಡಬ್ಲ್ಯುಡಬ್ಲ್ಯುಗೆ ಸಾಕಷ್ಟು ಮೊದಲೇ ಮಾಹಿತಿ ನೀಡಿರುವುದಾಗಿ ವಿನೇಶ್ ಸ್ಪಷ್ಟಪಡಿಸಿದ್ದಾರೆ. ಶಿಸ್ತು–ನಿಯಮಗಳ ಉಲ್ಲಂಘನೆ ಹಾಗೂ ಡೋಪಿಂಗ್ ಪರೀಕ್ಷಾ ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದಂತೆ ಡಬ್ಲ್ಯುಎಫ್ಐ ವಿನೇಶ್ ಅವರಿಗೆ ನೋಟಿಸ್ ನೀಡಿದ್ದು, ಅರ್ಹತಾ ಪ್ರಕ್ರಿಯೆಯ ಹೊರತಾಗಿ ಉಳಿದ ಯಾವುದರ ಬಗ್ಗೆಯೂ ಅವರು ಉತ್ತರಿಸಿಲ್ಲ ಎಂದು ಒಕ್ಕೂಟ ಆರೋಪಿಸಿದೆ.

ಉತ್ತರಪ್ರದೇಶದ ಗೊಂಡಾದಲ್ಲಿ ನಡೆದ 'ರಾಷ್ಟ್ರೀಯ ಓಪನ್ ರ್‍ಯಾಂಕಿಂಗ್ ಟೂರ್ನಿ'ಯಲ್ಲಿ ಭಾಗವಹಿಸಲು ವಿಧಿಸಿದ ನಿಷೇಧ ಹಾಗೂ ಡಬ್ಲ್ಯುಎಫ್ಐ ನೀಡಿರುವ ನೋಟಿಸ್ ಹಿಂದೆ ದುರುದ್ದೇಶವಿದೆ. ವಿನೇಶ್ ಅವರು ಸ್ಪರ್ಧಾತ್ಮಕ ಕುಸ್ತಿಕಣಕ್ಕೆ ಮರಳುವುದನ್ನು ತಡೆಯುವುದಕ್ಕಾಗಿ ಹಾಗೂ 2028ರ ಒಲಿಂಪಿಕ್ಸ್‌ನಲ್ಲಿ ಭಾಗವಹಿಸುವುದನ್ನು ತಪ್ಪಿಸಲಿಕ್ಕಾಗಿ ಪಿತೂರಿ ನಡೆಸಲಾಗುತ್ತಿದೆ ಎಂದು ಅವರ ಬೆಂಬಲಿಗರು ಹೇಳಿದ್ದಾರೆ. ವಿನೇಶ್ ಮತ್ತು ಇತರ ಕುಸ್ತಿಪಟುಗಳು 2023ರಲ್ಲಿ ಒಕ್ಕೂಟದ ಅಧ್ಯಕ್ಷರಾಗಿದ್ದ ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಲೈಂಗಿಕ ದೌರ್ಜನ್ಯದ ಆರೋಪಗಳನ್ನು ಮಾಡಿದ್ದರು.

ಬ್ರಿಜ್ ಭೂಷಣ್ ಸಿಂಗ್‌ರ ಲೈಂಗಿಕ ದೌರ್ಜನ್ಯಕ್ಕೆ ಬಲಿಯಾದವರಲ್ಲಿ ತಾವೂ ಒಬ್ಬರು ಎಂದು ಇತ್ತೀಚೆಗಷ್ಟೇ ವಿನೇಶ್ ಹೇಳಿಕೊಂಡಿದ್ದರು. ಈಗಿನ ಡಬ್ಲ್ಯುಎಫ್ಐ ಅಧ್ಯಕ್ಷ ಸಂಜಯ್ ಸಿಂಗ್ ಅವರು ಬ್ರಿಜ್ ಭೂಷಣ್‌ರ ಆಪ್ತವರ್ಗಕ್ಕೆ ಸೇರಿದ್ದಾರೆ. ಪ್ರಸ್ತುತ ವಿನೇಶ್ ಅವರ ಮೇಲೆ ಡಬ್ಲ್ಯುಎಫ್ಐ ತೆಗೆದುಕೊಂಡಿರುವ ಶಿಸ್ತುಕ್ರಮಗಳು ಜನರು ನಂಬುವಂತಿರದೆ, ಆಟಗಾರ್ತಿಯನ್ನು ಗುರಿಯಾಗಿಸಿಕೊಂಡು ಸಂಚು ನಡೆಯುತ್ತಿರುವ ಅನುಮಾನ ಉಂಟುಮಾಡುವಂತಿವೆ. ಡಬ್ಲ್ಯುಎಫ್ಐ ಶಿಸ್ತುಕ್ರಮದ ವಿರುದ್ಧ ಕಾನೂನು ಹೋರಾಟ ನಡೆಸಲು ಅವರು ಸಿದ್ಧತೆ ನಡೆಸಿದ್ದಾರೆ.

ಈ ಪ್ರಕರಣದಲ್ಲಿ ಸರ್ಕಾರ ಮಧ್ಯಪ್ರವೇಶಿಸಬೇಕು ಎಂದು ಕೆಲವು ಅಥ್ಲೀಟ್‌ಗಳು ಒತ್ತಾಯಿಸಿದ್ದಾರೆ. ಆದರೆ, ಮಹಿಳಾ ಕುಸ್ತಿಪಟುಗಳು ಬೀದಿಗಿಳಿದು ಪ್ರತಿಭಟಿಸಿದಾಗಲೇ ತಮ್ಮ ಪಕ್ಷದ ಪ್ರಬಲ ನಾಯಕನ ವಿರುದ್ಧ ಕ್ರಮ ತೆಗೆದುಕೊಳ್ಳಲು ನಿರಾಕರಿಸಿದ ಸರ್ಕಾರ, ಈಗ ಅಥ್ಲೀಟ್‌ಗಳ ನೆರವಿಗೆ ಬರುತ್ತದೆಂದು ನಿರೀಕ್ಷಿಸುವುದು ಸಾಧ್ಯವಿಲ್ಲ. ಹದಿನೈದು ಅಂತರರಾಷ್ಟ್ರೀಯ ಪದಕಗಳನ್ನು ಜಯಿಸಿರುವ ವಿನೇಶ್ ದೇಶಕ್ಕೆ ಕೀರ್ತಿ ತಂದಿರುವ ಆಟಗಾರ್ತಿ. 2024ರ ಪ್ಯಾರಿಸ್ ಒಲಿಂಪಿಕ್ಸ್‌ನ 50 ಕೆ.ಜಿ. ವಿಭಾಗದಲ್ಲಿ ಅವರು ಫೈನಲ್ಸ್ ಪ್ರವೇಶಿಸಿದ್ದರು. ವಿಶ್ವದ ಅತ್ಯುತ್ತಮ ಮಹಿಳಾ ಕುಸ್ತಿಪಟುಗಳ ಸಾಲಿನಲ್ಲಿ ಅವರನ್ನು ಗುರ್ತಿಸಲಾಗುತ್ತಿದೆ. ಇಂಥ ಆಟಗಾರ್ತಿ ಸ್ಪರ್ಧಾಕಣಕ್ಕೆ ಮರಳಲು ಬಯಸಿದಾಗ, ಅವರ ಬೆಂಬಲಕ್ಕೆ ಒಕ್ಕೂಟ ನಿಲ್ಲಬೇಕು. ಆದರೆ, ರಾಜಕೀಯ ಹಾಗೂ ವ್ಯಕ್ತಿಗತ ಕಾರಣಗಳಿಗಾಗಿ ಅವರನ್ನು ವಿರೋಧಿಸಲಾಗುತ್ತಿದೆ.

ಈ ವಿರೋಧದ ಹಿನ್ನೆಲೆಯಲ್ಲಿ, ಹರಿಯಾಣದಲ್ಲಿ ಅವರು ಕಾಂಗ್ರೆಸ್‌ನ ಶಾಸಕಿ ಆಗಿರುವುದನ್ನೂ ಗಮನಿಸಬೇಕಾಗಿದೆ. ಯಾವುದೇ ಕ್ರೀಡೆಗೆ ಸಂಬಂಧಿಸಿದ ಆಡಳಿತವು ವೃತ್ತಿಪರವಾಗಿ, ಪಾರದರ್ಶಕವಾಗಿ ಹಾಗೂ ವಿಶ್ವಾಸಾರ್ಹವಾಗಿ ಇರುವುದು ಅಗತ್ಯ. ಆಗಷ್ಟೇ ಅದರ ಬಗ್ಗೆ ಆಟಗಾರರಿಗೆ ನಂಬಿಕೆ ಹಾಗೂ ಸುರಕ್ಷತೆಯ ಭಾವನೆ ಮೂಡುವುದು ಸಾಧ್ಯ. ವಿನೇಶ್ ಫೋಗಟ್ ಅವರಂಥ ವಿಶ್ವದರ್ಜೆಯ ಆಟಗಾರ್ತಿಯನ್ನೇ ಹೀನಾಯವಾಗಿ ನಡೆಸಿಕೊಳ್ಳುವುದಾದರೆ, ಸಾಮಾನ್ಯ ಕ್ರೀಡಾಪಟುಗಳು ಏನನ್ನು ತಾನೆ ನಿರೀಕ್ಷಿಸಬಹುದು

# ರೂಪಾಯಿಯ ಪಯಣ : 3ರಿಂದ 95ವರೆಗೆ...

## (1947ರಿಂದ 2026 ರವರೆಗೆ ಡಾಲರ್ ವಿರುದ್ಧ ಭಾರತೀಯ ರೂಪಾಯಿಯ ಮೌಲ್ಯದ ಕಥೆ)




**ನಾ ಕಂಡಂತೆ**



**ವಿಶ್ವಾಸ್.ಡಿ.ಗೌಡ**
ಲೇಖಕರು
ಸಾಮಾಜಿಕ ಚಿಂತಕರು

ಭಾರತ ಸ್ವಾತಂತ್ರ್ಯ ಪಡೆದ 1947ರಲ್ಲಿ ಭಾರತೀಯ ರೂಪಾಯಿ ಮತ್ತು ಅಮೆರಿಕನ್ ಡಾಲರ್ ನಡುವಿನ ವಿನಿಮಯ ದರ ಸುಮಾರು 3.30 ಇತ್ತು ಎಂದು ಹೇಳಲಾಗುತ್ತದೆ. ಆ ಕಾಲದಲ್ಲಿ ಭಾರತದ ಆರ್ಥಿಕ ವ್ಯವಸ್ಥೆ ಹೊಸದಾಗಿ ರೂಪುಗೊಳ್ಳುತ್ತಿತ್ತು. ದೇಶದ ಉತ್ಪಾದನೆ, ಕೈಗಾರಿಕೆ, ಕೃಷಿ ಮತ್ತು ವ್ಯಾಪಾರ ಎಲ್ಲವೂ ಆರಂಭಿಕ ಹಂತದಲ್ಲಿದ್ದವು. ಆದರೆ ಕಾಲಕ್ರಮೇಣ ಜಾಗತಿಕ ಆರ್ಥಿಕ ಬದಲಾವಣೆಗಳು, ಯುದ್ಧಗಳು, ಆಮದು–ರಫ್ತು ವ್ಯವಹಾರಗಳು, ರಾಜಕೀಯ ಪರಿಸ್ಥಿತಿಗಳು ಹಾಗೂ ಹಣದುಬ್ಬರದ ಪರಿಣಾಮದಿಂದ ರೂಪಾಯಿ ಮೌಲ್ಯ ನಿಧಾನವಾಗಿ ಕುಸಿಯತೊಡಗಿತು.

1950ರಿಂದ 1960ರ ದಶಕದವರೆಗೆ ರೂಪಾಯಿ ಸ್ಥಿರವಾಗಿಯೇ ಇತ್ತು. ದೇಶದಲ್ಲಿ ಯೋಜಿತ ಆರ್ಥಿಕತೆ ಜಾರಿಯಲ್ಲಿದ್ದು, ಸರ್ಕಾರ ಹಲವು ಸಾರ್ವಜನಿಕ ಕ್ಷೇತ್ರದ ಸಂಸ್ಥೆಗಳನ್ನು ಆರಂಭಿಸಿತು. ಆದರೆ 1962ರ ಚೀನಾ ಯುದ್ಧ ಮತ್ತು 1965ರ ಪಾಕಿಸ್ತಾನ ಯುದ್ಧ ಭಾರತದ ಆರ್ಥಿಕತೆಗೆ ದೊಡ್ಡ ಹೊಡೆತ ನೀಡಿದವು. ಇದರ ಪರಿಣಾಮವಾಗಿ 1966ರಲ್ಲಿ ರೂಪಾಯಿಯನ್ನು ಮೊದಲ ಬಾರಿಗೆ ಮೌಲ್ಯಹೀನಗೊಳಿಸಲಾಯಿತು. ಆಗ ಡಾಲರ್ ಮೌಲ್ಯವು 7ಕ್ಕೆ ಏರಿತು.

1970 ಮತ್ತು 1980ರ ದಶಕಗಳಲ್ಲಿ ಜಾಗತಿಕ ತೈಲ ಸಂಕಷ್ಟಗಳು ಭಾರತದ ಆರ್ಥಿಕ ಸ್ಥಿತಿಯನ್ನು ಕದಡಿದವು. ಭಾರತ ಹೆಚ್ಚಿನ ಪ್ರಮಾಣದಲ್ಲಿ ತೈಲವನ್ನು ಆಮದು ಮಾಡಿಕೊಳ್ಳುತ್ತಿದ್ದುದರಿಂದ ವಿದೇಶಿ ವಿನಿಮಯ ಸಂಗ್ರಹದ ಮೇಲೆ ಒತ್ತಡ ಹೆಚ್ಚಾಯಿತು. 1985ರ ವೇಳೆಗೆ ಡಾಲರ್ ಮೌಲ್ಯ 12ರಿಂದ 17ರ ನಡುವೆ ತಲುಪಿತು. ದೇಶದಲ್ಲಿ ಸಾಲದ ಪ್ರಮಾಣವೂ ಏರಿಕೆಯಾಗುತ್ತಿತ್ತು. 1991 ಭಾರತಕ್ಕೆ ಆರ್ಥಿಕವಾಗಿ ಅತ್ಯಂತ ಸಂಕಷ್ಟದ ವರ್ಷ. ವಿದೇಶಿ ವಿನಿಮಯ ಸಂಗ್ರಹ ಕೇವಲ ಕೆಲವೇ ದಿನಗಳ ಆಮದುಗಳಿಗೆ ಸಾಕಾಗುವ ಮಟ್ಟಕ್ಕೆ ಇಳಿಯಿತು. ಆಗ ಸರ್ಕಾರ ಚಿನ್ನವನ್ನು ಗಿರವಿ ಇಟ್ಟು ಸಾಲ ಪಡೆಯಬೇಕಾದ ಪರಿಸ್ಥಿತಿ ಎದುರಾಯಿತು. ಈ ಸಂದರ್ಭದಲ್ಲಿ ಮಾಜಿ ಪ್ರಧಾನಿ ಪಿ.ವಿ. ನರಸಿಂಹರಾವ್ ಮತ್ತು ಆರ್ಥಿಕ ತಜ್ಞ ಡಾ. ಮನಮೋಹನ್ ಸಿಂಗ್ ಅವರು ಆರ್ಥಿಕ ಉದಾರೀಕರಣದ ನೀತಿಗಳನ್ನು ಜಾರಿಗೆ ತಂದರು. ರೂಪಾಯಿಯನ್ನು ಮಾರುಕಟ್ಟೆ ಆಧಾರಿತ ವಿನಿಮಯ ವ್ಯವಸ್ಥೆಗೆ ಬಿಟ್ಟ ಪರಿಣಾಮ ಡಾಲರ್ ಮೌಲ್ಯ 25ಕ್ಕೆ ಏರಿತು.

2000ರ ದಶಕದಲ್ಲಿ ಐಟಿ ಕ್ಷೇತ್ರದ ಬೆಳವಣಿಗೆ, ವಿದೇಶಿ ಹೂಡಿಕೆ ಹಾಗೂ ಸೇವಾ ವಲಯದ ಪ್ರಗತಿಯಿಂದ ಭಾರತದ ಆರ್ಥಿಕತೆ ವೇಗವಾಗಿ ಬೆಳೆಯತೊಡಗಿತು. ಕೆಲವು ವರ್ಷಗಳ ಕಾಲ ರೂಪಾಯಿ ಸ್ಥಿರತೆಯನ್ನು ಕಾಯ್ದುಕೊಂಡಿತು. 2007ರಲ್ಲಿ ಒಂದು ಡಾಲರ್‌ಗೆ ಸುಮಾರು 40 ಇತ್ತು. ಆದರೆ 2008ರ ಜಾಗತಿಕ ಆರ್ಥಿಕ ಮಂದಿಯ ಪರಿಣಾಮ ಮತ್ತೆ ರೂಪಾಯಿ ದುರ್ಬಲವಾಯಿತು.2010ರಿಂದ 2020ರ ಅವಧಿಯಲ್ಲಿ ತೈಲ ಬೆಲೆ ಏರಿಕೆ, ಕೊರೋನಾ ಮಹಾಮಾರಿ, ಜಾಗತಿಕ ಮಾರುಕಟ್ಟೆಯ ಅಸ್ಥಿರತೆ ಹಾಗೂ ಅಮೆರಿಕದ ಬಡ್ಡಿದರ ನೀತಿಗಳು ರೂಪಾಯಿಗೆ ಸವಾಲಾಗಿದ್ದವು. 2022ರ ವೇಳೆಗೆ ಡಾಲರ್ ಮೌಲ್ಯ 80 ದಾಟಿತು. ನಂತರವೂ ರೂಪಾಯಿ ಮೌಲ್ಯ ನಿಧಾನವಾಗಿ ಕುಸಿಯುತ್ತಲೇ ಬಂದಿತು.

2026ರ ವೇಳೆಗೆ ಒಂದು ಅಮೆರಿಕನ್ ಡಾಲರ್‌ಗೆ ಸುಮಾರು 95 ತಲುಪಿರುವುದು ಭಾರತದ ಆರ್ಥಿಕ ಪಯಣದ ಒಂದು ಮಹತ್ವದ ಸೂಚಕವಾಗಿದೆ.

ಇದು ಕೇವಲ ರೂಪಾಯಿ ದುರ್ಬಲವಾಗಿದೆ ಎನ್ನುವುದಲ್ಲ; ಜಾಗತಿಕ ಆರ್ಥಿಕ ವ್ಯವಸ್ಥೆಯಲ್ಲಿನ ಬದಲಾವಣೆಗಳು, ಅಮೆರಿಕದ ಡಾಲರ್ ಪ್ರಾಬಲ್ಯ, ಆಮದು ಅವಲಂಬನೆ ಮತ್ತು ಹಣದುಬ್ಬರದ ಪರಿಣಾಮಗಳನ್ನೂ ಸೂಚಿಸುತ್ತದೆ. ಆದರೆ ರೂಪಾಯಿ ಮೌಲ್ಯ ಕುಸಿತವೆಂದರೆ ದೇಶ ದುರ್ಬಲವಾಗಿದೆ ಎಂದೇ ಅರ್ಥವಲ್ಲ. ಭಾರತ ಇಂದು ವಿಶ್ವದ ಪ್ರಮುಖ ಆರ್ಥಿಕ ಶಕ್ತಿಗಳಲ್ಲಿ ಒಂದಾಗಿದೆ. ತಂತ್ರಜ್ಞಾನ, ಔಷಧೋದ್ಯಮ, ಬಾಹ್ಯಾಕಾಶ ಸಂಶೋಧನೆ, ಡಿಜಿಟಲ್ ವ್ಯವಹಾರ ಮತ್ತು ಉತ್ಪಾದನಾ ಕ್ಷೇತ್ರಗಳಲ್ಲಿ ಭಾರತ ವಿಶ್ವದ ಗಮನ ಸೆಳೆಯುತ್ತಿದೆ. ರೂಪಾಯಿ ಮೌಲ್ಯ ಕುಸಿದರೂ ಭಾರತದ ಆರ್ಥಿಕ ಸಾಮರ್ಥ್ಯ ಮತ್ತು ಮಾರುಕಟ್ಟೆ ಶಕ್ತಿ ದಿನದಿಂದ ದಿನಕ್ಕೆ ವೃದ್ಧಿಯಾಗುತ್ತಿದೆ.

ಡಾಲರ್ ವಿರುದ್ಧ ರೂಪಾಯಿಯ ಈ ಪಯಣವು ಕೇವಲ ಹಣದ ಮೌಲ್ಯದ ಕಥೆಯಲ್ಲ; ಅದು ಭಾರತದ ಆರ್ಥಿಕ ಹೋರಾಟ, ಅಭಿವೃದ್ಧಿ, ಸವಾಲು ಮತ್ತು ಸಾಧನೆಗಳ ಪ್ರತಿಬಿಂಬವಾಗಿದೆ. 1947ರಲ್ಲಿ 3ರಿಂದ ಆರಂಭವಾದ ಈ ಪಯಣ ಇಂದು 95 ತಲುಪಿದರೂ, ಭಾರತದ ಆರ್ಥಿಕ ಭವಿಷ್ಯದ ಮೇಲಿನ ನಂಬಿಕೆ ಇನ್ನೂ ಗಟ್ಟಿಯಾಗಿಯೇ ಇದೆ.

# ಧಾರ್‌ನ 'ಭೋಜಶಾಲೆ' ಹಿಂದೂ ಮಂದಿರವೇ

**• ಮಂದಿರ ಮುಕ್ತಿಯ ಹೋರಾಟಕ್ಕೆ ಮತ್ತೊಂದು ಐತಿಹಾಸಿಕ ಯಶಸ್ಸು!**

**ಇನ್ನು ಕಾಶಿ-ಮಥುರಾ ಬಾಕಿ ಇದೆ**

ಮಧ್ಯಪ್ರದೇಶದ ಧಾರ್‌ನಲ್ಲಿರುವ ಐತಿಹಾಸಿಕ 'ಭೋಜಶಾಲೆ'ಯು ಹಿಂದೂಗಳ ಪವಿತ್ರ ಶ್ರೀ ವಾಗ್ ದೇವಿ (ಶ್ರೀ ಸರಸ್ವತಿ) ಮಂದಿರವೇ ಆಗಿದೆ ಎಂಬುದರ ಮೇಲೆ ಇಂದೋರ್ ಉಚ್ಚ ನ್ಯಾಯಾಲಯವು ಕಾನೂನು ಮತ್ತು ಪುರಾವೆಗಳ ಮುದ್ರೆ ಒತ್ತಿದೆ.

ಈ ತೀರ್ಪು ಕೇವಲ ಒಂದು ವಾಸ್ತುವಿನ ವಿಜಯವಲ್ಲ, ಬದಲಿಗೆ ಶತಮಾನಗಳಿಂದ ಹತ್ತಿಕ್ಕಲ್ಪಟ್ಟಿದ್ದ ಐತಿಹಾಸಿಕ ಸತ್ಯದ ಮತ್ತು ಪರಕೀಯ ಇಸ್ಲಾಮಿಕ್ ಆಕ್ರಮಣಕಾರರಿಂದ ಅತಿಕ್ರಮಿಸಲ್ಪಟ್ಟಿದ್ದ ಮಂದಿರಗಳ ಮುಕ್ತಿ ಹೋರಾಟದ ಭವ್ಯ ವಿಜಯವಾಗಿದೆ. ಭೋಜಶಾಲೆಯ ಮುಕ್ತಿಯ ಹೋರಾಟವು ಇಂದು ಯಶಸ್ವಿಯಾಗಿದ್ದರೂ, ಈ ಸಂಘರ್ಷದಲ್ಲಿ ಭೋಜಶಾಲಾ ಮುಕ್ತಿ ಆಂದೋಲನದ ಪ್ರಮುಖರಾದ ಶ್ರೀ. ನವಲಕಿಶೋರ್ ಶರ್ಮಾ ಮತ್ತು ಹಿಂದೂ ಜನಜಾಗೃತಿ ಸಮಿತಿಯ ಪಾತ್ರವು ಮಹತ್ವದ್ದಾಗಿದೆ. ಸಮಿತಿಯು ಈ ಐತಿಹಾಸಿಕ ನಿರ್ಧಾರವನ್ನು ಹಾರ್ದಿಕವಾಗಿ ಸ್ವಾಗತಿಸುತ್ತದೆ ಮತ್ತು '...ಅಬ್ ಕಾಶಿ–ಮಥುರಾ ಬಾಕಿ ಹೈ!' (ಈಗ ಕಾಶಿ–ಮಥುರಾ ಬಾಕಿ ಇವೆ) ಎಂಬ ಸಂಕಲ್ಪ ಘೋಷಣೆಯನ್ನು ಮಾಡುತ್ತಿದೆ.

ಹಿಂದೂ ಜನಜಾಗೃತಿ ಸಮಿತಿಯ ಆಂದೋಲನ ಮತ್ತು ಹಿಂದೂ ಅಧಿವೇಶನದ ಫಲಶ್ರುತಿ!

ಧಾರ್ ನ ಭೋಜಶಾಲೆಯ ಮುಕ್ತಿಗಾಗಿ ಹಿಂದೂ ಜನಜಾಗೃತಿ ಸಮಿತಿಯು ಕೇವಲ ಬೀದಿಗಿಳಿದು ಆಂದೋಲನಗಳನ್ನು ಮಾಡಿದ್ದಷ್ಟೇ ಅಲ್ಲದೆ, ರಾಷ್ಟ್ರಮಟ್ಟದಲ್ಲಿ ವ್ಯಾಪಕ ಜನಜಾಗೃತಿಯನ್ನು ಮೂಡಿಸಿದೆ. ಗೋವಾದಲ್ಲಿ ನಡೆಯುವ 'ವೈಶ್ವಿಕ ಹಿಂದೂ ರಾಷ್ಟ್ರ ಮಹೋತ್ಸವ' (ಅಖಿಲ ಭಾರತೀಯ ಹಿಂದೂ ರಾಷ್ಟ್ರ ಅಧಿವೇಶನ) ಎಂಬ ರಾಷ್ಟ್ರೀಯ ವೇದಿಕೆಯಿಂದ ಪ್ರತಿ ವರ್ಷ ಈ ಕುರಿತು ಕಾನೂನಾತ್ಮಕ ಮತ್ತು ಕಾರ್ಯತಂತ್ರದ ನಿರ್ಣಯಗಳನ್ನು ಅಂಗೀಕರಿಸಿ ಹೋರಾಟದ ದಿಕ್ಕನ್ನು ನಿರ್ಧರಿಸಲಾಗಿತ್ತು.

ದೇಶಾದ್ಯಂತದ ಹಿಂದುತ್ವನಿಷ್ಠ ಸಂಘಟನೆಗಳು ಮಧ್ಯಪ್ರದೇಶ ಸರಕಾರ ಮತ್ತು ಕೇಂದ್ರ ಸರಕಾರಕ್ಕೆ ಈ ಬಗ್ಗೆ ನಿರಂತರವಾಗಿ ಮನವಿಗಳನ್ನು ಸಲ್ಲಿಸಿದ್ದವು. ಇಂದು ನ್ಯಾಯಾಲಯ ನೀಡಿರುವ ಈ ಐತಿಹಾಸಿಕ ತೀರ್ಪಿನಿಂದಾಗಿ ಕೋಟ್ಯಂತರ ಹಿಂದೂಗಳ ಭಾವನೆಗಳಿಗೆ ಮತ್ತು ಸಮಿತಿಯ ಸುದೀರ್ಘ ಆಂದೋಲನಕ್ಕೆ ನ್ಯಾಯ ಸಿಕ್ಕಿದೆ.




ಆಕ್ರಮಣಕಾರರ ಅತಿಕ್ರಮಣವನ್ನು ಹಟಾವೋ; ಕಾಶಿ–ಮಥುರಾದ ಹೋರಾಟ ನಿರಂತರವಾಗಿರಲಿದೆ!

ಈ ಸಂದರ್ಭದಲ್ಲಿ ಸಮಿತಿಯ ರಾಷ್ಟ್ರೀಯ ವಕ್ತಾರರಾದ ಶ್ರೀ. ರಮೇಶ್ ಶಿಂದೆ ಅವರು, ಭಾರತದಲ್ಲಿ ಹಿಂದೂಗಳ ಕೇವಲ ಒಂದು ಅಥವಾ ಎರಡು ದೇವಸ್ಥಾನಗಳನ್ನು ಮಾತ್ರ ಆಕ್ರಮಿಸಲಾಗಿಲ್ಲ. ಪರಕೀಯ ಆಕ್ರಮಣಕಾರರು ಮತ್ತು ಧಾರ್ಮಿಕ ಕಟ್ಟರಪಂಥೀಯರು ಹಿಂದೂಗಳ ಸಹಿಷ್ಣುತೆಯ ದುರುಪಯೋಗ ಪಡೆದುಕೊಂಡು ಸಾವಿರಾರು ಮಂದಿರಗಳ ಮೇಲೆ ಅನಧಿಕೃತವಾಗಿ ಅತಿಕ್ರಮಣ ಮಾಡಿದರು

ಅದರ ಮೇಲೆ ತಮ್ಮ ಸುಳ್ಳು ಹಕ್ಕನ್ನು ಸ್ಥಾಪಿಸಿದರು. ಅಯೋಧ್ಯೆ ಮತ್ತು ಧಾರ್ (ಭೋಜಶಾಲೆ) ತೀರ್ಪುಗಳು ಅಸತ್ಯದ ಮುಖವಾಡ ಹೆಚ್ಚು ಕಾಲ ಉಳಿಯುವುದಿಲ್ಲ ಎಂಬುದನ್ನು ಸಾಬೀತುಪಡಿಸಿವೆ.

ಈಗ ಕಾಶಿಯ ಜ್ಞಾನವ್ಯಾಪಿಯಿಂದ ಹಿಡಿದು ಮಥುರಾದ ಶ್ರೀಕೃಷ್ಣ ಜನ್ಮಭೂಮಿಯವರೆಗಿನ ಎಲ್ಲಾ ಆಕ್ರಮಿತ ಕ್ಷೇತ್ರಗಳು ಮುಕ್ತವಾಗಬೇಕಾದ ಸಮಯ ಬಂದಿದೆ ಎಂದು ಸ್ಪಷ್ಟಪಡಿಸಿದರು.

**ಬೆಂಡೆಕಾಯಿಯಲ್ಲಿ ಕಂಡು ಬರುವ ನಿಸರ್ಗದತ್ತವಾದ ವಿಟಮಿನ್ ಎ, ಸಿ ಮತ್ತು ಕೆ ಹಾಗೂ ಇದರಲ್ಲಿರುವ ಲೋಳೆ ಅಂಶವು ನೆತ್ತಿಯನ್ನು ಆಳವಾಗಿ ಪೋಷಿಸುತ್ತದೆ ಮತ್ತು ಕೂದಲನ್ನು ಬೇರುಗಳಿಂದ ಬಲಪಡಿಸುತ್ತದೆ ಪ್ರಮುಖವಾಗಿ ಈ ತರಕಾರಿಯ ಲೋಳೆ ನೈಸರ್ಗಿಕ, ಸಸ್ಯ ಆಧಾರಿತ ಕಂಡಿಷನರ್ ಆಗಿ ಕಾರ್ಯನಿರ್ವಹಿಸಿ, ತಲೆಹೊಟ್ಟಿನ ಸಮಸ್ಯೆಯನ್ನು ದೂರ ಮಾಡುತ್ತದೆ**


# ತಲೆಹೊಟ್ಟು, ಒಣ ನೆತ್ತಿ ಸಮಸ್ಯೆಗೆ ಬೆಂಡೆಕಾಯಿ ಜೆಲ್



ಬೆಂಡೆಕಾಯಿ ನೀರಿನಲ್ಲಿ ವಿಟಮಿನ್‌ಗಳು ಮತ್ತು ಖನಿಜಗಳು ಸಮೃದ್ಧವಾಗಿದ್ದು, ಇದು ಕೂದಲಿನ ಬೆಳವಣಿಗೆಯನ್ನು ಉತ್ತೇಜಿಸುತ್ತದೆ, ನೆತ್ತಿಯನ್ನು ಪೋಷಿಸುತ್ತದೆ ಮತ್ತು ಕೂದಲು ಉದುರುವಿಕೆಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ. ಇದರ ವಿಟಮಿನ್‌ಗಳು ಎ, ಸಿ, ಕೆ, ಫೋಲೇಟ್ ಮತ್ತು ಕಬ್ಬಿಣವು ಇದನ್ನು ಅತ್ಯುತ್ತಮ ನೈಸರ್ಗಿಕ ಕೂದಲು ಕಂಡಿಷನರ್ ಆಗಿ ಮಾಡುತ್ತದೆ. ಪ್ರಮುಖವಾಗಿ ಬೆಂಡೆ ಕಾಯಿಯಲ್ಲಿರುವ ಜಿಗುಟಾದ ಜೆಲ್ ನಂತಿರುವ ಅಂಶವು ಒಣ ಕೂದಲನ್ನು ತೇವ ಗೊಳಿಸುತ್ತದೆ, ಅದನ್ನು ಮೃದು ಮತ್ತು ಹೊಳೆಯುವಂತೆ ಮಾಡುತ್ತದೆ.

**ಹೊಸ ಕೂದಲಿನ ಬೆಳವಣಿಗೆಯನ್ನು ಉತ್ತೇಜಿಸುತ್ತದೆ**


ಬೆಂಡೆಕಾಯಿ ನೆನೆಹಾಕಿದ ನೀರು ಕೂದಲಿನ ಬೇರುಗಳನ್ನು ಪೋಷಿಸುತ್ತದೆ ಮತ್ತು ಕೂದಲು ಉದುರುವಿಕೆಯನ್ನು ಕಡಿಮೆ ಮಾಡುತ್ತದೆ ಅಲ್ಲದೆ ಈ ತರಕಾರಿಯಲ್ಲಿ ಕಂಡುಬರುವ ಫೋಲಿಕ್ ಆಮ್ಲ ಮತ್ತು ಆಂಟಿಆಕ್ಸಿಡೆಂಟ್‌ಗಳು ಅಂಶವು ನೆತ್ತಿಯ ಆರೋಗ್ಯವನ್ನು ಸುಧಾರಿಸಿ, ಹೊಸ ಕೂದಲಿನ ಬೆಳವಣಿಗೆಯನ್ನು ಉತ್ತೇಜಿಸುತ್ತದೆ, ಜೊತೆಗೆ ಒಣ ನೆತ್ತಿಯ ಸಮಸ್ಯೆಯನ್ನು ತೊಡೆದು ಹಾಕಿ, ತಲೆಹೊಟ್ಟು ಸಮಸ್ಯೆ ಯನ್ನು ಕಡಿಮೆ ಮಾಡಲು ಸಹಾಯ ಮಾಡುತ್ತದೆ



**ತಯಾರಿಸುವ ಮತ್ತು ಬಳಸುವ ವಿಧಾನ:** 5–6 ತಾಜಾ ಬೆಂಡೆಕಾಯಿಯನ್ನು ಸಣ್ಣ ತುಂಡುಗಳಾಗಿ ಕತ್ತರಿಸಿ ಒಂದೂವರೆ ಕಪ್ ನೀರಿನಲ್ಲಿ 10–15 ನಿಮಿಷಗಳ ಕಾಲ ನೀರು ದಪ್ಪ, ಜಿಗುಟಾದ ಜೆಲ್ ಆಗುವವರೆಗೆ ಕುದಿಸಿ. ಜೆಲ್ ರೂಪುಗೊಂಡ ನಂತರ, ಅದನ್ನು ತಣ್ಣಗಾಗಿಸಿ ಮತ್ತು ಜರಡಿ ಮೂಲಕ ಸೋಸಿ. ಇನ್ನು ಈ ನೀರನ್ನು ಕೂದಲು ಮತ್ತು ನೆತ್ತಿಗೆ ಹಚ್ಚಿ, 30–40 ನಿಮಿಷಗಳ ಕಾಲ ಹಾಗೆಯೇ ಬಿಡಿ, ನಂತರ ಸೌಮ್ಯವಾದ ಶಾಂಪೂ ಬಳಸಿ ತೊಳೆಯಿರಿ. ದುಬಾರಿ ರಾಸಾಯನಿಕ ಕಂಡಿಷನರ್‌ಗಳಿಗೆ ಹೋಲಿಸಿದರೆ ಈ ನೈಸರ್ಗಿಕ ವಿಧಾನವು ಉತ್ತಮ ಪರ್ಯಾಯವಾಗಿದೆ.

**ಬಳಸುವ ವಿಧಾನ:** ಕೂದಲಿಗೆ ಶಾಂಪೂ ಹಾಕಿದ ನಂತರ, ನಿಮ್ಮ ನೆತ್ತಿ ಮತ್ತು ಕೂದಲಿಗೆ ಬೆಂಡೆಕಾಯಿ ಜೆಲ್ ಹಚ್ಚಿ. ಬೆಂಡೆಕಾಯಿ ಜೆಲ್ ಅನ್ನು ನೆತ್ತಿಯಿಂದ ಕೂದಲಿನ ಬುಡದವರೆಗೆ ಮತ್ತು ತುದಿಗಳವರೆಗೆ ಹಚ್ಚಿ. ಆಮೇಲೆ 3 ನಿಮಿಷಗಳ ಕಾಲ ನೆತ್ತಿಯನ್ನು ನಿಧಾನ ವಾಗಿ ಮಸಾಜ್ ಮಾಡಬೇಕು.
30 ನಿಮಿಷಗಳ ಕಾಲ ಹಾಗೆಯೇ ಬಿಡಿ, ನಂತರ ಸರಳ ನೀರಿನಿಂದ ತೊಳೆಯಿರಿ. ಉತ್ತಮ ಫಲಿತಾಂಶಕ್ಕಾಗಿ ವಾರಕ್ಕೆ 1–2 ಬಾರಿ ಇದನ್ನು ಬಳಸಿ. ಹೀಗ ಮಾಡುತ್ತಾ ಬರುವುದರಿಂದ ಕೂದಲಿನ ಹೊಳಪು ಹೆಚ್ಚಾಗುವುದರ ಜೊತೆಗೆ ನೆತ್ತಿಯ ಶುಷ್ಕತೆ ಯೂ ಕೂಡ ಕಡಿಮೆಯಾಗುತ್ತದೆ

# ರಾಮಾಯಣ



**ಸೀತೆಯನ್ನು ಒಲಿಸಿಕೊಳ್ಳಲು ರಾವಣನು ಅನುನಯದ ನುಡಿಗಳನ್ನಾಡಿದುದು**

## ಸುಂದರಕಾಂಡ

• ಹಿಂದಿನ ಸಂಚಿಕೆಯಿಂದ

ಅದರೊಡನೆ ಕಾಮಬಾಧೆಯಿಂದ ಧರಣಿಜೆಯನ್ನು ನೆನೆಸಿಕೊಂಡು ಅವಳನ್ನು ಕೂಡಲು ತವಕಿಸಿದ. ಇಂತಹ ಬಯಕೆಯಿಂದ ಕೂಡಿ ಮೇಲೆದ್ದ ರಾವಣನು ಹೊರಟ; ಅವನು ಹೊರಟುದನ್ನು ಕಂಡು ಕಾಂತಾಸಮೂಹವೆಲ್ಲ ನಿದ್ದೆಯಿಂದೆದ್ದು ಅವನ ಹಿಂದೆಯೇ, ಛತ್ರಿ ಚಾಮರ ತಾಳವೃಂತಗಳನ್ನು ಹಿಡಿದು, ಕಾಮನ ಹಿಂದೆ ಸಾಗುವ ಸೈನ್ಯದಂತೆ, ಸಾಗಿದರು. ಮುಂದೆ ಅಸಂಖ್ಯಾತ ಕೈದೀವಿಗೆಗಳನ್ನು ಹಿಡಿದ ಚೆಲುವೆಯರು ಹೋಗುತ್ತಿರಲು, ಅಕ್ಕಪಕ್ಕಗಳಲ್ಲಿ ಮತ್ತೆ ಹಲವರು ನೀರು ತುಂಬಿದ ಮಣಿಖಚಿತ ಕಳಶಗಳನ್ನು ಹೊತ್ತು ನಡೆದರು, ಮತ್ತೂ ಹಲವರು ತುಂಬಿದ ರತ್ನಮಯ ಮದ್ಯಪಾತ್ರಗಳನ್ನು ಹಿಡಿದು ಸಾಗಿದರು. ಹೀಗೆ ಮದಮತ್ತ ಮಾನಿನೀಗಣದೊಡನೆ ಸಾಕ್ಷಾತ್ ಮನ್ಮಥನೆಂಬಂತೆ ದಶಶಿರನು ಅಶೋಕವನದೊಳಗೆ ಕೊಂಚ ದೂರ ನಡೆದು ದಾರಿಯಲ್ಲಿ ನಾನಾ ಬಗೆಯ ಪಕ್ಷಿಗಳನ್ನೂ ನವಿಲುಗಳ ನರ್ತನವನ್ನೂ ಅರಗಿಳಿಯ ಆಲಾಪವನ್ನೂ ದುಂಬಿಗಳ ರೋಂಕಾರವನ್ನೂ ನೋಡುತ್ತ ಮುಂದುವರಿದು ಬಂದ.

ಸರೋವರ ಕೊಳಗಳನ್ನೂ, ಅರಗಿಳಿಗಳ ದುಂಬಿಗಳ ದನಿಯನ್ನೂ, ಹೂಹಣ್ಣುಗಳನ್ನು ಬಿಟ್ಟ ನಾನಾ ಬಗೆಯ ಮರಗಳ ತೋಪುಗಳನ್ನೂ ನೋಡುತ್ತ ಬರುವ ಮದಗಜಗಮನೆಯರಿಂದ ಸುತ್ತುವರಿದ ನಿದ್ದೆಗಣ್ಣುಗಳಿಂದ ಕೂಡಿದ ದೈತ್ಯೇಂದ್ರನು ಇಂದ್ರಸಿರಿಯನ್ನು ಧಿಕ್ಕರಿಸುವವನಂತೆ ತೋರಿದ. ನಿದ್ದೆ ತುಂಬಿದ ಕಣ್ಣುಗಳ ಸುಂದರಿಯರಲ್ಲಿ ಕೆಲವರು ಬೆದರಿ ಬರುವ ಅವಸರದಲ್ಲಿ ಜಾರಿದರೆ, ಮತ್ತೆ ಕೆಲವರು ಸೆರಗನ್ನು ಸರಿಪಡಿಸಿಕೊಳ್ಳದೆ ಬಂದರು; ಮತ್ತೆ ಕೆಲವರು ಮುಂದಲೆಯನ್ನು ಕೂಡ ಬಾಚಿಕೊಳ್ಳದಿದ್ದರೆ. ಮತ್ತೂ ಕೆಲವರು ಕಾಲಂದುಗೆಗಳನ್ನು ಕೈಯಲ್ಲೂ ಕಂಕಣಗಳನ್ನು ಕಾಲಲ್ಲೂ ಇಟ್ಟುಕೊಂಡಿದ್ದರು; ಇನ್ನೂ ಕೆಲವರು ಮುತ್ತಿನ ಜೊಟ್ಟನ್ನು ಕಿವಿಗೂ ಕುಂಡಲಗಳನ್ನು ಬೈತಲೆಯೊಳಗಿಟ್ಟಕೊಂಡು ಬರುತ್ತಿದ್ದರು. ನಕ್ಷತ್ರಗಳ ನಡುವೆ. ಚಂದಬಿಂಬವು ಎದ್ದುಕಾಣುವಂತೆ ಹೆಂಗೆಳೆಯರ ನಡುವೆ ಮನ್ಮಥನಂತೆ ರಕ್ಕಸೇಶ್ವರನು ಬರುತ್ತಿದ್ದರೆ, ಎಡಬಲಗಳಲ್ಲಿ ಹಿಡಿದ ದೊಂದಿಗಳು, ಸುಗಂಧಭರಿತ ಗಾಳಿ, ಆಭರಣಗಳ ಉಲುಹುಗಳು ತುಂಬಿ ಅವನಿಗಾಗಿ ದಾರಿಬಿಡಿಸುತ್ತಿದ್ದವು.

ಕಟಿಸೂತ್ರಗಳ ಸದ್ದು, ಕಿಂಕಿಣಿಗಳ ಗಣಗಣ, ಪರಿಮಳಭರಿತ ಸ್ತ್ರೀಯರ ನಡುವೆ ಚಂದಬಿಂಬದಂತೆ ಬಲಪೌರುಷವೆ ಭವ ಸಿರಿಗಳಿಂದ ಬರುವ ರಾವಣನನ್ನು ಕಂಡು ಮರುತಸುತನು ಬೆರಗಾಗಿ ನಿಂತುಬಿಟ್ಟ ಸಮುದ್ರದಲ್ಲಿ ಹುಟ್ಟಿದ ಅಪ್ಸರೆಯರು ದಶಶಿರನಿಗಾಗಿ ಬಂದರೋ ಎನ್ನುವಂತೆ ಎಡಬಲಗಳಲ್ಲಿದ್ದ ಸುದತಿಯರ ಸೌಂದರ್ಯಸಾಗರದ ನಡುವೆ ಹೊಳೆಯುವ ಪದ್ಮಲೋಚನನಂತೆ ರಕ್ಕಸನು ಬರುವ ಬೆಡಗನ್ನು ಪವನಜಾತನು ನಿಬಿಡ ತರುಗಳ ಹಿಂದೆ ನಿಂತು ನೋಡುತ್ತಿದ್ದ. ಇಷ್ಟು ವೈಭವವನ್ನು ಪಡೆಯಲು ಅಸುರನು ಎಷ್ಟು ಕಾಲ ತಪಗೈದನೋ, ಇಂತಹ ಸಿರಿ ವಾಸವನಿಗಾದರೂ ಇದೆಯೋ ಇಲ್ಲವೋ! ದಶಕಂಠನ ಬಲವು ವೀರರಮೆಯ ತೌರೆನಿಸುವಂತಹುದು ಎಂದುಕೊಂಡು ಮರುತಾತ್ಮಭವನು ತನ್ನ ಸುಳುಹು ತೋರದಂತೆ ಮರೆಗೊಂಡು ನಿಟ್ಟಿಸಿದ. ಲಲನೆಯರ ಕಲಕಲರವ, ಆಭರಣಗಳ ಉಲಿ, ಹೊಗಳುತ್ತ ಹಾಡುವ ಪ್ರಮದೆಯರ ಬೆಡಗು, ರಕ್ಕಸನ ತೇಜಃಪ್ರಭಾವಗಳನ್ನು ಕಂಡ ಭೂಲಲನೆಯಾತ್ಮಜೆಯು ಸುವರ್ಣಮಯ ಸೂರ್ಯನನ್ನು ನೋಡಿದ ಚಂದಬಿಂಬದಂತೆ ಭೀತಿಯಿಂದ ನಡುಗಿದಳು.

ಮುಂದುವರಿಯುವುದು...

**ನಮ್ಮ ನಾಡಿನ ಗರಡಿ ಮನೆಗಳಲ್ಲಿ ಪಳಗುವ ಪೈಲ್ವಾನರ ದೈಹಿಕ ಸೌಷ್ಟವ ಮತ್ತು ಅಪ್ರತಿಮ ಸಾಮರ್ಥ್ಯದ ಹಿಂದೆ ಕೇವಲ ಮಣ್ಣಿನ ತಾಲೀಮು ಮಾತ್ರವಲ್ಲ, ನಿಸರ್ಗದ ಶಕ್ತಿಯನ್ನು ಅರಿಯುವ ವೈಜ್ಞಾನಿಕ ಕ್ರಮವೂ ಅಡಗಿದೆ.**

# ಪೈಲ್ವಾನರ ಜಲ ಕಸರತ್ತು

**ಅಂತರಂಗದ ಮಾತು**




**ಡಾ.ಸುಧಾಕರ.ಜಿ. ಲಕ್ಕವಳ್ಳಿ**
ಲೇಖಕರು
ಸಾಮಾಜಿಕ ಚಿಂತಕರು

ಕುಸ್ತಿ ಅಖಾಡದ ಪಟ್ಟುಗಳಿಗೂ ಮುನ್ನ ಪೈಲ್ವಾನರು ನಡೆಸುವ ತಾಲೀಮುಗಳಲ್ಲಿ ಅತ್ಯಂತ ವಿಶಿಷ್ಟವಾದುದು ಜಲ ಕಸರತ್ತು ಅಥವಾ ನೀರಿನಲ್ಲಿ ಓಟ. ಆಧುನಿಕ ಕ್ರೀಡಾ ಲೋಕವು ಇದನ್ನು ಹೈಡ್ರೋ–ರೆಸಿಸ್ಟೆನ್ಸ್ ಟ್ರೈನಿಂಗ್ ಎಂದು ಕರೆಯುವ ಶತಮಾನಗಳ ಮೊದಲೇ, ನಮ್ಮ ದೇಶಿ ಪೈಲ್ವಾನರು ಈ ಜಲಶಕ್ತಿಯನ್ನು ತಮ್ಮ ಸಹಿಷ್ಣುತೆ ಹೆಚ್ಚಿಸುವುದಕ್ಕೆ ಗುಪ್ತ ತಂತ್ರವನ್ನಾಗಿ ಬಳಸುತ್ತಿದ್ದರು.

ನೀರಿನಲ್ಲಿ ಓಡುವ ವ್ಯಾಯಾಮವು ಮೇಲ್ನೋಟಕ್ಕೆ ಸುಲಭವಾಗಿ ಕಂಡರೂ, ಇದು ಸಾಮಾನ್ಯ ನೆಲದ ಮೇಲಿನ ಓಟಕ್ಕಿಂತ ಹತ್ತು ಪಟ್ಟು ಹೆಚ್ಚು ಶ್ರಮದಾಯಕವಾಗಿದೆ. ಪೈಲ್ವಾನರು ಸಾಮಾನ್ಯವಾಗಿ ಮೊಣಕಾಲಿನ ಮೇಲ್ಭಾಗ ಅಥವಾ ಸೊಂಟದ ಮಟ್ಟದವರೆಗೆ ನೀರಿರುವ ನದಿ, ಹಳ್ಳಗಳನ್ನು ಈ ಕಸರತ್ತಿಗೆ ಆರಿಸಿಕೊಳ್ಳುತ್ತಾರೆ. ಇಲ್ಲಿ ಗಾಳಿಯ ಬದಲು ನೀರಿನ ಸಾಂದ್ರತೆಯನ್ನು ಸೀಳಿಕೊಂಡು ಮುನ್ನುಗ್ಗಬೇಕಿರುವುದು ಮುಖ್ಯ ಸವಾಲು. ಪ್ರತಿ ಹೆಜ್ಜೆಯಲ್ಲೂ ನೀರಿನ ವಿರುದ್ಧ ದಿಕ್ಕಿನಲ್ಲಿ ಅಥವಾ ನೀರಿನ ದಟ್ಟವಾದ ಒತ್ತಡವನ್ನು ಮೆಟ್ಟಿ ನಿಂತು ವೇಗವಾಗಿ ಓಡಬೇಕು. ಈ ಪ್ರಕ್ರಿಯೆಯಲ್ಲಿ ಶರೀರದ ಪ್ರತಿಯೊಂದು ಸ್ನಾಯುವು ಏಕಕಾಲಕ್ಕೆ ಕಾರ್ಯಪ್ರವೃತ್ತವಾಗುವುದರಿಂದ ದೇಹವು ಅತ್ಯಂತ ಬೇಗನೆ ಹುರಿಗಟ್ಟುತ್ತದೆ.

ವೈಜ್ಞಾನಿಕವಾಗಿ ನೀರಿನ ಸಾಂದ್ರತೆಯು ಗಾಳಿಗಿಂತ ಅತಿ ಹೆಚ್ಚಿರುವುದರಿಂದ, ನೀರಿನಲ್ಲಿ ಮಾಡುವ ಚಲನೆಯು ಸ್ನಾಯುಗಳಿಗೆ ಹೆಚ್ಚಿನ ಪ್ರತಿರೋಧವನ್ನು ಒಡ್ಡುತ್ತದೆ. ಇದು ವಿಶೇಷವಾಗಿ ತೊಡೆ,ಪೃಷ್ಠ ಮತ್ತು ಮಂಡಿ ಸ್ನಾಯುಗಳನ್ನು ಬಲಗೊಳಿಸುತ್ತದೆ. ಕುಸ್ತಿ ಅಖಾಡದಲ್ಲಿ ಎದುರಾಳಿಯು ಕಾಲು ಹಿಡಿದು ಎಳೆದಾಗ ಅಥವಾ ಎದುರಾಳಿಯನ್ನು ಬಲವಾಗಿ ತಳ್ಳುವಾಗ ಬೇಕಾದ ಲೋವರ್ ಬಾಡಿ ಸ್ಥಿರತೆಯು ಈ ವ್ಯಾಯಾಮದಿಂದ ಸಿದ್ಧಿಸುತ್ತದೆ. ಇದು ಸ್ನಾಯುಗಳಿಗೆ ಯಾವುದೇ ಬಾಹ್ಯ ಗಾಯವಾಗದಂತೆ ಅವುಗಳ ಗಾತ್ರ ಮತ್ತು ಶಕ್ತಿಯನ್ನು ನೈಸರ್ಗಿಕವಾಗಿ ವೃದ್ಧಿಸುತ್ತದೆ.



ಇದು ಕೇವಲ ಸ್ನಾಯುಗಳ ವ್ಯಾಯಾಮವಲ್ಲ, ಬದಲಿಗೆ ಅತ್ಯುತ್ತಮವಾದ ಕಾರ್ಡಿಯೋ ತರಬೇತಿಯೂ ಹೌದು. ನೀರಿನ ಒತ್ತಡವು ಎದೆಯ ಭಾಗದ ಮೇಲೆ ಇರುವುದರಿಂದ, ಉಸಿರಾಟ ಪ್ರಕ್ರಿಯೆಯನ್ನು ಸಮತೋಲನದಲ್ಲಿಡಲು ಶ್ವಾಸಕೋಶವು ಹೆಚ್ಚಿನ ಶ್ರಮ ಹಾಕಬೇಕಾಗುತ್ತದೆ. ಇದರಿಂದ ಶ್ವಾಸಕೋಶದ ಗಾಳಿ ಹೀರಿಕೊಳ್ಳುವ ಸಾಮರ್ಥ್ಯ ಮತ್ತು ಹೃದಯದ ಕಾರ್ಯಕ್ಷಮತೆ ವೃದ್ಧಿಯಾಗುತ್ತದೆ. ಸತತವಾಗಿ ನೀರಿನಲ್ಲಿ ಓಡುವುದರಿಂದ ಪೈಲ್ವಾನರಿಗೆ ದೀರ್ಘಕಾಲದವರೆಗೆ ದಣಿವಿಲ್ಲದೆ ಅಖಾಡದಲ್ಲಿ ಸೆಣಸಾಡಲು ಬೇಕಾದ ಎಂಡ್ಯೂರೆನ್ಸ್ ಅಥವಾ ಸಹಿಷ್ಣುತೆ ಲಭಿಸುತ್ತದೆ.

ನೆಲದ ಮೇಲೆ ಓಡುವಾಗ ಪಾದ ಮತ್ತು ಮಂಡಿಯ ಕೀಲುಗಳ ಮೇಲೆ ಬೀರುವ ತೀವ್ರ ಒತ್ತಡ ನೀರಿನಲ್ಲಿ ಇರುವುದಿಲ್ಲ. ನೀರಿನ ಬೂಯನ್ಸಿ ಗುಣವು ದೇಹದ ಭಾರವನ್ನು ಕಡಿಮೆ ಮಾಡುತ್ತದೆ, ಇದರಿಂದ ಮೂಳೆಗಳ ಕೀಲುಗಳಿಗೆ ಗಾಯವಾಗುವ ಸಂಭವ ಅತ್ಯಲ್ಪ. ಹೀಗಾಗಿ, ಕ್ರೀಡಾಪಟುಗಳು ಯಾವುದಾದರೂ ಗಾಯದಿಂದ ಚೇತರಿಸಿಕೊಳ್ಳುವ ಸಂದರ್ಭದಲ್ಲಿ ತಮ್ಮ ಸ್ನಾಯುಗಳನ್ನು ಪುನಃ ಸಕ್ರಿಯಗೊಳಿಸಲು ಈ ಜಲ ತಾಲೀಮನ್ನು ಆಶ್ರಯಿಸುತ್ತಾರೆ.

ಇದು ಕೀಲುಗಳಿಗೆ ಮೃದುವಾದ ಮಸಾಜ್ ನೀಡಿದಂತಾಗಿ ಅವುಗಳ ನಮ್ಯತೆಯನ್ನು ಹೆಚ್ಚಿಸುತ್ತದೆ.

ಈ ವ್ಯಾಯಾಮವು ಎಷ್ಟು ಪ್ರಯೋಜನಕಾರಿಯೋ, ಅಷ್ಟೇ ಅಪಾಯಕಾರಿಯೂ ಆಗಬಲ್ಲದು. ಆದ್ದರಿಂದ ಕೆಲವು ಕ್ರಮಗಳು ಅನಿವಾರ್ಯ. ನೀರಿನ ತಳಭಾಗವು ಸಮತಟ್ಟಾಗಿರಬೇಕು. ಅತಿಯಾದ ಹರಿವು ಅಥವಾ ಸುಳಿ ಇರುವ ಜಾಗದಲ್ಲಿ ಓಡಬಾರದು. ಸೊಂಟದ ಮಟ್ಟಕ್ಕಿಂತ ಹೆಚ್ಚಿನ ಆಳದ ನೀರಿಗೆ ಹೋಗುವುದು ಅಪಾಯಕಾರಿ. ವ್ಯಾಯಾಮದ ಆರಂಭದಲ್ಲಿ ಮೊಣಕಾಲಿನ ಮಟ್ಟದ ನೀರಿನಲ್ಲಿ ಅಭ್ಯಾಸ ಮಾಡುವುದು ಸೂಕ್ತ. ಈ ತಾಲೀಮನ್ನು ಒಬ್ಬರೇ ಮಾಡುವ ಬದಲು ಅನುಭವಿ ಪೈಲ್ವಾನರ ಅಥವಾ ಗುರುಗಳ ಮೇಲ್ವಿಚಾರಣೆಯಲ್ಲಿ ಮಾಡುವುದು ಸುರಕ್ಷಿತ.

ನಮ್ಮ ಪೂರ್ವಜರು ನಿಸರ್ಗದ ಪ್ರತಿಯೊಂದು ಅಂಶವನ್ನು ಶಕ್ತಿವರ್ಧನೆಗೆ ಬಳಸಿಕೊಳ್ಳುವ ಜಾಣ್ಮೆ ಹೊಂದಿದ್ದರು. ಇಂದು ಕೇವಲ ಎಸಿ ರೂಮುಗಳ ಜಿಮ್ ಮತ್ತು ಟ್ರೆಡ್‌ಮಿಲ್‌ಗಳ ಮೇಲೆ ಅವಲಂಬಿತವಾಗಿರುವ ಯುವ ಕ್ರೀಡಾಪಟುಗಳಿಗೆ ಪೈಲ್ವಾನರ ಈ ಜಲ ಕಸರತ್ತು ಒಂದು ದೊಡ್ಡ ಪಾಠ. ಇಂತಹ ನೈಸರ್ಗಿಕ ಮತ್ತು ವೈಜ್ಞಾನಿಕ ತರಬೇತಿಗಳನ್ನು ಅಳವಡಿಸಿಕೊಂಡಾಗ ಮಾತ್ರ ದೇಹವು ಸ್ವಾಭಾವಿಕವಾಗಿ ಮತ್ತು ದೀರ್ಘಕಾಲಿಕವಾಗಿ ಬಲಿಷ್ಠವಾಗಲು ಸಾಧ್ಯ. ಗರಡಿ ಮನೆಗಳ ಈ ಸಂಪ್ರದಾಯ ನಮ್ಮ ದೇಶಿ ಕ್ರೀಡಾ ವಿಜ್ಞಾನದ ಶ್ರೇಷ್ಠತೆಗೆ ಹಿಡಿದ ಕನ್ನಡಿಯಾಗಿದೆ.

## ದಿನ ಭವಿಷ್ಯ

| | | |
|---|---|---|
| ರಾಹುಕಾಲ | ಬೆಳಿಗ್ಗೆ | 09:00 ರಿಂದ 10:30 |
| ಗುಳಿಕ ಕಾಲ | ಬೆಳಿಗ್ಗೆ | 06:00 ರಿಂದ 07:30 |
| ಯಮಗಂಡ ಕಾಲ | ಮಧ್ಯಾಹ್ನ | 01:30 ರಿಂದ 03:00 |

**ಮೇಷ** ಬಾಕಿಯಿರುವ ಸಮಸ್ಯೆಗಳನ್ನು ಶೀಘ್ರದಲ್ಲೇ ಪರಿಹರಿಸಬೇಕು ಮತ್ತು ನೀವು ಎಲ್ಲಾದರೂ ಆರಂಭಿಸಬೇಕೆಂದು ನಿಮಗೆ ತಿಳಿದಿದೆ – ಆದ್ದರಿಂದ ಸಕಾರಾತ್ಮಕವಾಗಿ ಆಲೋಚಿಸಿ ಮತ್ತು ಇಂದೇ ಪ್ರಯತ್ನಗಳನ್ನು ಆರಂಭಿಸಿ. ಇಂದು ನೀವು ವಿವಾಹದ ನಿಜವಾದ ಭಾವಪರವಶತೆಯನ್ನು ತಿಳಿಯುತ್ತೀರಿ.

**ವೃಷಭ** ಸಂಬಂಧಿಕರು ಮತ್ತು ಸ್ನೇಹಿತರಿಂದ ಅನಿರೀಕ್ಷಿತ ಉಡುಗೊರೆಗಳು. ನಿಮ್ಮ ಸಂಗಾತಿಯ ಚಿತ್ತ ಚೆನ್ನಾಗಿರುವಂತೆ ಕಾಣದಿದ್ದರಿಂದ ವಿಷಯಗಳನ್ನು ಸರಿಯಾಗಿ ನಿರ್ವಹಿಸಿ. ಹಣಕಾಸು, ನೀವು ಆನಂದವನ್ನು ಹುಡುಕುತ್ತ ಯಾವುದೇ ಆಧ್ಯಾತ್ಮಿಕ ಗುರುವನ್ನು ಭೇಟಿ ಮಾಡಲು ಹೋಗಬಹುದು.

**ಮಿಥುನ** ಸರ್ವತೋಮುಖ ಅಭಿವೃದ್ಧಿ ಸಾಧ್ಯವಿದ್ದಾಗ ಮಾತ್ರ ಮಾನಸಿಕ ಮತ್ತು ನೈತಿಕ ಶಿಕ್ಷಣದ ಜೊತೆ ದೈಹಿಕ ಶಿಕ್ಷಣವನ್ನೂ ತೆಗೆದುಕೊಳ್ಳಿ. ಆರೋಗ್ಯಕರ ಮನಸ್ಸು ಯಾವಾಗಲೂ ಆರೋಗ್ಯಕರ ದೇಹದಲ್ಲಿ ಪರ್ಯವಸಾನವಾಗುತ್ತದೆಂದು ನೆನಪಿಡಿ. ದಿನದ ಆರಂಭದಲ್ಲಿ ನೀವು ಯಾವುದೇ ಆರ್ಥಿಕ ನಷ್ಟವನ್ನು ಹೊಂದಿರಬಹುದು.

**ಕರ್ಕಾಟಕ** ನೀವು ಒಳ್ಳೆಯ ಆರೋಗ್ಯ ಹೊಂದಿರುವುದರಿಂದ ಅದು ನಿಮಗೆ ಯಶಸ್ಸು ನೀಡುವ ಸಾಧ್ಯತೆಯಿದೆ. ಆದರೆ ನಿಮ್ಮ ಶಕ್ತಿಯನ್ನು ನಾಶಪಡಿಸುವ ಎಲ್ಲವನ್ನೂ ನೀವಿಂದು ತಪ್ಪಿಸಬೇಕು. ಆಭರಣಗಳಲ್ಲಿ ಹೂಡಿಕೆ ಲಾಭ ಮತ್ತು ಸಮೃದ್ಧಿ ತರುತ್ತದೆ. ಸಂಬಂಧಗಳೊಂದಿಗಿನ ಸಂಬಂಧಗಳು , ಬಂಧಗಳ ನವೀಕರಣದ ಒಂದು ದಿನ.

**ಸಿಂಹ** ತರಾತುರಿಯಲ್ಲಿ ಹೂಡಿಕೆಗಳನ್ನು ಮಾಡಬೇಡಿ – ನೀವು ಎಲ್ಲಾ ಸಾಧ್ಯವಿರುವ ಕೋನಗಳಿಂದ ಹೂಡಿಕೆಯನ್ನು ಪರಿಶೀಲಿಸದೇ ಹೋದರೆ ನಷ್ಟ ಖಚಿತ. ನಿಮ್ಮ ನಾಲಗೆ ನಿಮ್ಮ ಅಜ್ಜ ಅಜ್ಜಿಯಂದಿರ ಭಾವನೆಗಳಿಗೆ ಘಾಸಿ ಮಾಡುವುದರಿಂದ ನಿಮ್ಮ ಭಾಷೆಯನ್ನು ನಿಯಂತ್ರಿಸಿ.

**ಕನ್ಯಾ** ನೀವು ಸಾಕಷ್ಟು ಸಕಾರಾತ್ಮಕತೆಯೊಂದಿಗೆ ಮನೆಯಿಂದ ಹೊರಬರುತ್ತೀರಿ, ಆದರೆ ಕೆಲವು ಅಮೂಲ್ಯ ವಸ್ತುವಿನ ಕಳ್ಳತನದಿಂದಾಗಿ, ನಿಮ್ಮ ಮನಸ್ಥಿತಿಗೆ ತೊಂದರೆಯಾಗಬಹುದು. ನಿಮ್ಮನ್ನು ನೀವೇ ಮುದ್ದಿಸಿಕೊಳ್ಳಲು ಮತ್ತು ನೀವು ಹೆಚ್ಚು ಆನಂದಿಸುವ ಕೆಲಸಗಳನ್ನು ಮಾಡಲು ಒಳ್ಳೆಯ ದಿನ.

**ತುಲಾ** ನೀವು ಸುಲಭವಾಗಿ ಬಂಡವಾಳ ಪಡೆಯಬಹುದು.ಬಾಕಿಯಿರುವ ಸಾಲಗಳನ್ನು ಸಂಗ್ರಹಿಸಬಹುದು ಅಥವಾ ಹೊಸ ಯೋಜನೆಗಳಿಗೆ ಕೆಲಸ ಮಾಡಲು ಹಣ ಕೇಳಬಹುದು. ಮಕ್ಕಳಲ್ಲಿ ನಿಮಗೆ ರೋಮಾಂಚಕ ಸುದ್ದಿ ತರಬಹುದು. ಪ್ರಣಯ ಸಂಬಂಧದಲ್ಲಿ ನಿಮ್ಮನ್ನು ತಪ್ಪಾಗಿ ತಿಳಿದುಕೊಳ್ಳುವ ಸಾಧ್ಯತೆಯಿದೆ.

**ವೃಶ್ಚಿಕ** ನಿಮ್ಮ ಮಾನಸಿಕ ಆರೋಗ್ಯವನ್ನು ಕಾಯ್ದುಕೊಳ್ಳಿ. ಒಳ್ಳೆಯದೂ ಹಾಗೂ ಕೆಟ್ಟದೆಲ್ಲವೂ ಮನಸ್ಸಿನ ಮೂಲಕವೇ ಬರುವುದರಿಂದ ಬುದ್ಧಿ ಜೀವನದ ಹೆಬ್ಬಾಗಿಲಾಗಿದೆ. ಇದು ಜೀವನದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಹಾಯ ಮಾಡುತ್ತದೆ ಮತ್ತು ಅಗತ್ಯವಿರುವ ಬೆಳಕನ್ನು ನೀಡುತ್ತದೆ.

**ಧನಸ್ಸು** ನಿಮ್ಮ ದೈಹಿಕ ಬಲವನ್ನು ನಿರ್ವಹಿಸಲು ನೀವು ಕ್ರೀಡೆಯಲ್ಲಿ ಸಮಯ ಕಳೆಯುವ ಸಾಧ್ಯತೆಗಳಿವೆ. ನಿಮ್ಮ ಸಹೋದರ–ಸಹೋದರಿಯರಲ್ಲಿ ಒಬ್ಬರು ನಿಮ್ಮಿಂದ ಹಣವನ್ನು ಎರವಲು ಪಡೆಯಬಹುದು, ನೀವು ಅವರಿಗೆ ಹಣವನ್ನು ಸಾಲವಾಗಿ ಕೊಡುತ್ತೀರಿ ಆದರೆ ಇದರಿಂದ ನಿಮ್ಮ ಆರ್ಥಿಕ ಪರಿಸ್ಥಿತಿ ಹದಗೆಡಬಹುದು.

**ಮಕರ** ನಿಮ್ಮ ಭರವಸೆ ಒಂದು ಸಮೃದ್ಧ, ಸೂಕ್ಷ್ಮ ಪರಿಮಳಯುಕ್ತ ಮತ್ತು ಬೆರಗುಗೊಳಿಸುವ ಹೂವಿನ ಹಾಗೆ ಅರಳುತ್ತದೆ. ನೀವು ಯಾವುದೇ ಅಜ್ಞಾತ ಮೂಲಗಳಿಂದ ಹಣವನ್ನು ಪಡೆಯಬಹುದು, ಇದರಿಂದ ನಿಮ್ಮ ಅನೇಕ ಆರ್ಥಿಕ ಸಮಸ್ಯೆಗಳು ದೂರವಾಗುತ್ತವೆ. ನಿಮ್ಮ ಹಾಸ್ಯದ ಪ್ರಕೃತಿ ನಿಮ್ಮ ಸುತ್ತಮುತ್ತಲಿನ ಪರಿಸರವನ್ನು ಬೆಳಗಿಸುತ್ತದೆ.

**ಕುಂಭ** ಹಿಂದಿನ ಬಂಡವಾಳದಿಂದ ಆದಾಯವನ್ನು ನಿರೀಕ್ಷಿಸಿದ್ದಲ್ಲಿ. ಕುಟುಂಬ ಸದಸ್ಯರಿಗೆ ಸಹಾಯ ಮಾಡಲು ಮುಕ್ತ ಸಮಯದ ಲಾಭ ತೆಗೆದುಕೊಳ್ಳಿ. ಸ್ನೇಹ ಆಳವಾದ ಹಾಗೆ ಪ್ರಣಯ ನಿಮ್ಮೆಡೆ ಬರುತ್ತದೆ. ಆಸಕ್ತಿದಾಯಕ ಪತ್ರಿಕೆ , ಕಾದಂಬರಿಯನ್ನು ಓದುವ ಮೂಲಕ ಇಂದಿನ ದಿನವನ್ನು ನೀವು ಉತ್ತಮವಾಗಿ ಕಳೆಯಬಹುದು.

**ಮೀನ** ತೊಂದರೆಗಳ ಬಗ್ಗೆ ಚಿಂತಿಸುವ ಮತ್ತು ಅವುಗಳನ್ನು ದೊಡ್ಡದಾಗಿಸುವ ನಿಮ್ಮ ಸ್ವಭಾವ ನಿಮ್ಮ ನೈತಿಕತೆಯನ್ನು ದುರ್ಬಲಗೊಳಿಸಬಹುದು. ಇಲ್ಲಿಯವರೆಗೆ ಅನಗತ್ಯವಾಗಿ ಹಣವನ್ನು ಖರ್ಚು ಮಾಡುತ್ತಿದ್ದವರು ಜೀವನದಲ್ಲಿ ಹಣದ ಪ್ರಾಮುಖ್ಯತೆ ಏನು ಎಂಬುದನ್ನು ಅರ್ಥಮಾಡಿಕೊಳ್ಳಬಹುದು.

### ಹೊಸದಾಗಿ ಬಂದು ನಕಲಿ ದಾಖಲೆ ಮೂಲಕ ಸೇರಿದ್ದರೆ ಯಾವುದೇ ಮುಲಾಜಿಲ್ಲದೆ ಅಂತಹವರನ್ನು ತೆಗೆಯಲಿದೆ

# ಎಸ್‌ಐಆರ್‌ನಿಂದ ಅಕ್ರಮ ಬಾಂಗ್ಲಾ ವಲಸಿಗರು ಹೊರ ಬೀಳ್ತಾರಾ?



ಡಿಸಿಗೆ ಪತ್ರ ಬರೆದು ತನಿಖೆಗೆ ಮನವಿ

• ಉದಯವಾಹಿನಿ ಬಳ್ಳಾರಿ

ನಗರದ ಕೌಲ್ ಬಜಾರ್ ಪ್ರದೇಶದಲ್ಲಿ ಹತ್ತು ಸಾವಿರ ಜನ ಬಾಂಗ್ಲಾ ವಲಿಸಗರು ನೆಲಸಿದ್ದಾರೆ. ಇದು ಮೇಲ್ನೋಟಕ್ಕೆ ಕಂಡು ಬರುತ್ತಿದೆ. ಇವರು ಓಟರ್ ಐಡಿ, ಆಧಾರ್ ಹೊಂದಿದ್ದಾರೆ. ಅವು ನಕಲಿ ಅಥವಾ ಅಸಲಿ ಎಂಬುದನ್ನು ಪತ್ತೆ ಹಚ್ಚಬೇಕಾಗಿದೆ ಎಂದು ಕಳೆದ ಡಿಸೆಂಬರ್‌ನಲ್ಲಿ ಬಿಜೆಪಿಯ ನಾಯಕ, ಮಾಜಿ ಸಚಿವ ಬಿ. ಶ್ರೀರಾಮುಲು ಹೇಳಿದ್ದರು.

ಅವರ ಹೇಳಿಕೆ ಪ್ರಕಾರ ಈಗ ನಡೆಯಲಿರುವ ಮತಪಟ್ಟಿಯ ಎಸ್ ಐ ಆರ್ ( ಸ್ಪೆಷಲ್ ಇನ್ಟೆನ್ಸಿವ್ ರಿವಿಷನ್ ) ವಿಶೇಷ ಸಮಗ್ರ ಪರಿಷ್ಕರಣೆಯಿಂದ ಈ ಅಕ್ರಮ ಬಾಂಗ್ಲಾ ವಲಸಿಗರು ಮತಪಟ್ಟಿಯಿಂದ ಹೊರ ಬೀಳ್ತಾರಾ ಎಂಬ ಪ್ರಶ್ನೆ ಉದ್ಭವವಾಗಿದೆ.

ನಗರದಲ್ಲಿ ಅಕ್ರಮ ಬಾಂಗ್ಲಾ ವಲಸಿಗರು ಇರುವುದನ್ನು ನಮ್ಮ ಬಿಜೆಪಿ ಕಾರ್ಯಕರ್ತರು ಗುರುತಿಸಿದ್ದು. ಈ ಬಗ್ಗೆ ಡಿಸಿ ಅವರಿಗೆ ಪತ್ರ ಬರೆದು ತನಿಖೆಗೆ ಮನವಿ ಮಾಡಿದೆ. ನಮ್ಮ ರಾಜ್ಯದಲ್ಲಿ ಎಸ್ ಐ ಆರ್ ಆಗುವಾಗ ಇವರನ್ನು ಗುರುತಿಸಿ ಹೊರ ಹಾಕುವ ಸಂದರ್ಭದ ಬರಲಿದೆ. ಎಸ್ ಐ ಆರ್ ನಡೆದರೆ ಈ ಬಗ್ಗೆ ಸ್ಪಷ್ಟ ಚಿತ್ರಣ ದೊರೆಯಲಿದೆ ಎಂದಿದ್ದರು.

ಆದರೆ ಅಧಿಕಾರಿಗಳ ಮೂಲದ ಪ್ರಕಾರ ಬಳ್ಳಾರಿಯಲ್ಲಿ ಬಾಂಗ್ಲಾ ವಲಸಿಗರು ಇದ್ದಾರೆ ಆದರೆ ಶ್ರೀರಾಮುಲು ಹೇಳಿದಷ್ಟಿಲ್ಲ.

2002 ರ ಮತಪಟ್ಟಿಯಲ್ಲಿ ಅವರು ಹೆಸರು ಹೊಂದಿದ್ದರೆ ಈಗ ಅವರನ್ನು ತೆಗೆಯಲು ಬರಲ್ಲ. ಹೊಸದಾಗಿ ಬಂದು ನಕಲಿ ದಾಖಲೆ ಮೂಲಕ ಸೇರಿದ್ದರೆ ಯಾವುದೇ ಮುಲಾಜಿಲ್ಲದೆ ಅಂತಹವರನ್ನು ತೆಗೆಯಲಿದೆ ಎನ್ನುತ್ತಾರೆ.

**ಎಸ್‌ಐಆರ್ ವೇಳಾಪಟ್ಟಿ:**

- ಜೂನ್ 20-29: ಎಸ್‌ಐಆರ್‌ಗೆ ಸಿದ್ಧತೆ, ತರಬೇತಿ ಮತ್ತು ಮುದ್ರಣ
- ಜೂನ್ 30- ಜುಲೈ29: ಮತದಾರರ ಮನೆಗೆ ಬಿಎಲ್‌ಒಗಳ ಭೇಟಿ
- ಜುಲೈ 29: ಮತದಾನ ಕೇಂದ್ರಗಳಲ್ಲಿ ಎಸ್‌ಐಆರ್ ಪ್ರಕ್ರಿಯೆ
- ಆಗಸ್ಟ್ 5: ಎಸ್‌ಐಆರ್ ಭಾಗವಾಗಿ ಮತದಾರರ ಕರಡು ಪಟ್ಟಿ ಪ್ರಕಟ
- ಆಗಸ್ಟ್ 5 ರಿಂದ-ಸೆಪ್ಟೆಂಬರ್ 4 ರ ವರೆಗೆ: ಆಕ್ಷೇಪಣೆ ಸಲ್ಲಿಕೆ ಮಾಡಲು ಅವಕಾಶ
- ಆಗಸ್ಟ್ 5 ರಿಂದ ಅಕ್ಟೋಬರ್ ರ ವರೆಗೆ: ನೋಟಿಸ್ / ವಿಲೇವಾರಿ/ ಆಕ್ಷೇಪಣೆ
- ಅಕ್ಟೋಬರ್ 7: ಅಂತಿಮ ಮತದಾರರ ಪಟ್ಟಿ ಬಿಡುಗಡೆ

ಈಗ ಚುನಾವಣಾ ಆಯೋಗ ರಾಜ್ಯದಲ್ಲಿ ಎಸ್.ಐ.ಆರ್ ನಡೆಸಲು ಮುಂದಾಗಿದೆ. ಇದರಿಂದ ಶ್ರೀರಾಮುಲು ಹೇಳಿದ ಅಕ್ರಮ ವಲಿಸಿಗರು ಮತಪಟ್ಟಿಯಲ್ಲಿ ಎಷ್ಟು ಎಂಬುದು ಹೊರ ಬೀಳುವ ಕಾಲ ಬಂದಿದೆ.

**ಮತಪಟ್ಟಿ ಪರಿಷ್ಕರಣೆ:** ಎಸ್ ಐ ಆರ್ ಹಿನ್ನಲೆಯಲ್ಲಿ ಈಗಾಗಲೇ ಚುನಾವಣಾ ಆಯೋಗದ ನಿರ್ದೇಶನದಂತೆ ಜಿಲ್ಲೆಯಲ್ಲಿ ಮತಪಟ್ಟಿ ಮ್ಯಾಪಿಂಗ್ ಮಾಡಲಾಗಿದೆ.

ಜಿಲ್ಲೆಯ ಐದು ವಿಧಾನಸಭಾ ಕ್ಷೇತ್ರದಲ್ಲಿ 2025 ರ ಪ್ರಕಾರ 12 ಲಕ್ಷದ 48 ಸಾವಿರದ 780 ಮತದಾರರಿದ್ದು.

- ಕೌಲ್ ಬಜಾರ್ ನಲ್ಲಿ 10 ಸಾವಿರ ಅಕ್ರಮ ವಲಸಿಗರು: ಶ್ರೀರಾಮುಲು ಆರೋಪ
- ಜಿಲ್ಲೆಯಲ್ಲಿ ಶೇ 95.42 ಓಟರ್ ಲಿಸ್ಟ್ ಮ್ಯಾಪಿಂಗ್ ಪೂರ್ಣ
- ಜೂನ್ 20 ರಿಂದ ಎಸ್‌ಐಆರ್ ಆರಂಭ
- ಒಂದೇ ಕ್ಷೇತ್ರದಲ್ಲಿ ಎರೆಡು ಮೂರು ಮತಗಟ್ಟೆಗಳಲ್ಲಿ ಹೆಸರು

ಇವರ ಮ್ಯಾಪಿಂಗ್ ಕಾರ್ಯ ಶೇ 95.42 ರಷ್ಟು ಆಗಿದೆ.

ಇದರಲ್ಲಿ ಒಂದೇ ಕ್ಷೇತ್ರದಲ್ಲಿ ಎರೆಡು ಮೂರು ಮತಗಟ್ಟೆಗಳಲ್ಲಿ ಹೆಸರು ಇರುವವರನ್ನು, ಅಲ್ಲದೆ ರಾಜ್ಯದ ಇತರೇ ಕ್ಷೇತ್ರಗಳಲ್ಲಿ ಹೆಸರು ಇರುವವರನ್ನು ಪತ್ತೆಹಚ್ಚಿ ಅಂತವರು ಯಾವ ಕ್ಷೇತ್ರದಲ್ಲಿ ಇರಲು ಬಯಸುತ್ತಾರೆ ಎಂದು ವಿಚಾರಿಸಿ. ಅವರ ಹೆಸರನ್ನು ಒಂದು ಕ್ಷೇತ್ರದಲ್ಲಿ ಮಾತ್ರ ಉಳಿಸಲಾಗಿದೆ.

ರಾಜ್ಯದಲ್ಲಿ 2002 ರಲ್ಲಿ ನಡೆದ ಮತಪಟ್ಟಿ ಪರಿಷ್ಕರಣೆಯಲ್ಲಿ ಇದ್ದವರನ್ನು ಪರಿಗಣಿಸಿ ಈ ಪ್ರಕ್ರಿಯೆ ನಡೆದಿದೆ. 2002 ರ ಮತಪಟ್ಟಿಯಲ್ಲಿ ಇಲ್ಲದವರು ನಂತರ ಸೇರಿದ್ದರೆ ಅವರ ಕುಟುಂಬದ ಮೂಲದ ದಾಖಲೆಯೊಂದಿಗೆ ತಾಳೆ ಮಾಡಲಾಗಿದೆ.

ಹೀಗೆ ಮ್ಯಾಪಿಂಗ್ ಮಾಡಿ ಜಿಲ್ಲೆಯ 5 ವಿಧಾನ ಸಭಾ ಕ್ಷೇತ್ರದಲ್ಲಿ 31403 ಸಂಖ್ಯೆ ಮತಪಟ್ಟಿಯಿಂದ ಕಡಿಮೆಯಾಗಿದೆ. ಎಸ್‌ಐಆರ್‌ನಿಂದ ಸತ್ತಿರುವ, ಭಾರತೀಯ ನಾಗರೀಕರಲ್ಲದವರ ಹೆಸರನ್ನು ಪತಪಟ್ಟಿಯಿಂದ ಕೈ ಬಿಡಲಿದೆ. ಹೀಗೆ ಕೈ ಬಿಡುವ ಮುನ್ನ ಸಂಬಂಧಿಸಿದ ಮತದಾರರಿಗೆ ನೋಟೀಸ್ ನೀಡಿ ಅವರ ಹಕ್ಕಿನ ಬಗ್ಗೆ ಪ್ರಶ್ನಿಸಲಾಗುತ್ತದೆ.

ಭಾರತೀಯ ನಾಗರೀಕರೆಂದು ಆಯೋಗ ಹೇಳಿರುವ 12 ದಾಖಲೆಗಳನ್ನು ಒದಗಿಸಿದರೆ ಮತಪಟ್ಟಿಯಲ್ಲಿ ಹೆಸರನ್ನು ಹಾಗೇ ಉಳಿಸುತ್ತಾರೆ.

## ಕರೆಂಟಿಲ್ಲ, ನೀರಿಲ್ಲ, ಅಧಿಕಾರಿಗಳು ಫೋನ್ ತೆಗೀತಿಲ್ಲ ಮೂಡುಬಿದಿರೆ ಮೆಸ್ಕಾಂ ಕಚೇರಿಗೆ ಮುತ್ತಿಗೆ

• ಉದಯವಾಹಿನಿ ಮೂಡುಬಿದಿರೆ

ಕರಿಂಜೆ, ಕಲ್ಲಬೆಟ್ಟು, ಕೋಟೆಬಾಗಿಲು, ಮಾರೂರು, ಸುವರ್ಣ ನಗರ ಹಾಗೂ ಪ್ರಾಂತ್ಯ ಮುಂತಾದ ಕಡೆಗಳಲ್ಲಿ ಕಳೆದ ನಾಲ್ಕು ದಿನಗಳಿಂದ ಕರೆಂಟ್ ಇಲ್ಲದಿರುವುದರಿಂದ ನೀರಿನ ಸಮಸ್ಯೆ ಉಂಟಾಗಿದ್ದು ಅಡಿಗೆ ಮಾಡಲು, ಟಾಯ್ಲೆಟ್, ಬಾತ್ ರೂಮ್ ಗಳಿಗೆ ನೀರು ಇಲ್ಲದಂತ್ತಾಗಿದೆ ಕರೆಂಟ್ ಯಾವಾಗ ಬರುತ್ತದೆ ಎಂದು ಕೇಳಲು ಮೆಸ್ಕಾಂ ಅಧಿಕಾರಿಗಳಿಗೆ ಕರೆ ಮಾಡಿದರೆ ಕರೆ ಸ್ವೀಕರಿಸುತ್ತಿಲ್ಲ ಎಂದು ಆರೋಪಿಸಿದ ಆಕ್ರೋಶಿತ ಸಾರ್ವಜನಿಕರು ರಾತ್ರಿ ಮೂಡುಬಿದಿರೆ ಮೆಸ್ಕಾಂ ಕಛೇರಿಗೆ ಮುತ್ತಿಗೆ ಹಾಕಿ ಪ್ರತಿಭಟನೆ ನಡೆಸಿದರು. ಪ್ರತಿಭಟನೆಯಲ್ಲಿ ಮಾತನಾಡಿದ ಅಶ್ರಫ್ ಮರೋಡಿ ಅವರು ಕಳೆದ ಒಂದು ವಾರದಿಂದ ವಿದ್ಯುತ್ ಸಮಸ್ಯೆ ಇದೆ.

ಈ ಹಿಂದೆಯೇ ಕೋಟೆಬಾಗಿಲು ಭಾಗದಲ್ಲಿ ಲೋ ವೋಲ್ಟೇಜ್ ಮತ್ತು ತಂತಿ ಉರಿದು ಹೋಗಿರುವ ಬಗ್ಗೆ ಅಧಿಕಾರಿಗಳಿಗೆ ದೂರು ನೀಡಿದ್ದರೂ ಯಾವುದೇ ಪ್ರಯೋಜನವಾಗಿಲ್ಲ. ಬಿಲ್ ವಸೂಲಿ ಮಾಡಲು ಬರುವ ಅಧಿಕಾರಿಗಳಿಗೆ ಜನರ ಸಂಕಷ್ಟಗಳು ಕಾಣುತ್ತಿಲ್ಲ, ಎಂದು ಆರೋಪಿಸಿದರು.



ಉದಯವಾಹಿನಿ ಚಿತ್ರ

ಶಾಸಕರು ಈ ವಿಷಯದಲ್ಲಿ ಮಧ್ಯಪ್ರವೇಶಿಸಿ ಅಧಿಕಾರಿಗಳಿಗೆ ಸೂಕ್ತ ಸೂಚನೆ ನೀಡುತ್ತಿಲ್ಲ ಎಂಬ ಅಸಮಾಧಾನವೂ ವ್ಯಕ್ತವಾಯಿತು. ಅಧಿಕಾರಿಗಳು ಜನರ ಕರೆಗಳನ್ನು ಸ್ವೀಕರಿಸದೆ ಇರುವುದು ಅಥವಾ ನಂಬರ್‌ಗಳನ್ನು ಬ್ಲಾಕ್ ಮಾಡಿರುವುದು ಸಾರ್ವಜನಿಕರ ಆಕ್ರೋಶಕ್ಕೆ ತುಪ್ಪ ಸುರಿದಂತಾಗಿದೆ.

ಪ್ರತಿಭಟನೆಯಲ್ಲಿ ಭಾಗವಹಿಸಿದ ಮಹಿಳೆಯರು ತಮ್ಮ ಸಂಕಷ್ಟವನ್ನು ಹೀಗೆ ಹಂಚಿಕೊಂಡಿದ್ದಾರೆ. ಮನೆಯಲ್ಲಿ ನಾಲ್ಕು ದಿನಗಳಿಂದ ನೀರಿಲ್ಲದೆ ಶೌಚಾಲಯಕ್ಕೂ ತೊಂದರೆಯಾಗಿದೆ. ಅಡುಗೆ ಮಾಡಲು, ಮಕ್ಕಳಿಗೆ ಓದಲು ಸಾಧ್ಯವಾಗುತ್ತಿಲ್ಲ. ಮಳೆಗಾಲದಲ್ಲಿ ಕತ್ತಲೆಯಲ್ಲಿ ಕಳೆಯುವುದು ಕಷ್ಟಕರವಾಗಿದೆ. ಅಧಿಕಾರಿಗಳನ್ನು ಕೇಳಿದರೆ ಮರ ಬಿದ್ದಿದೆ, ಕಂಬ ಕಟ್ ಆಗಿದೆ ಎಂಬ ಸಬೂಬುಗಳನ್ನು ನೀಡುತ್ತಿದ್ದಾರೆಯೇ ಹೊರತು ಪರಿಹಾರ ನೀಡುತ್ತಿಲ್ಲ ಎಂದಿದ್ದಾರೆ.

ರಾತ್ರಿ 10 ಗಂಟೆಯೊಳಗೆ ವಿದ್ಯುತ್ ಸಂಪರ್ಕ ಪುನರ್ ಸ್ಥಾಪಿಸಬೇಕು. ಒಂದು ವೇಳೆ ನಾಳೆ ಬೆಳಿಗ್ಗೆ 10:30ರ ಒಳಗೆ ಶಾಶ್ವತ ಪರಿಹಾರ ಸಿಗದಿದ್ದರೆ ಸಾವಿರಾರು ಸಂಖ್ಯೆಯಲ್ಲಿ ಸಾರ್ವಜನಿಕರು ಸೇರಿ ಉಗ್ರ ಪ್ರತಿಭಟನೆ ನಡೆಸುವುದಾಗಿ ಪ್ರತಿಭಟನಾಕಾರರು ಎಚ್ಚರಿಸಿದ್ದಾರೆ.

## ಕಟ್ಟಡ ಅವಶೇಷ ವಿಲೇವಾರಿ ವಿಳಂಬ

• ಉದಯವಾಹಿನಿ ಬ್ಯಾಡಗಿ



ಉದಯವಾಹಿನಿ ಚಿತ್ರ

ಪಟ್ಟಣದ ಮುಖ್ಯ ರಸ್ತೆಯ ಮೂಲಕ ಹಾಯ್ದು ಹೋಗಿರುವ ಸೊರಬ-ಗಜೇಂದ್ರಗಡ ರಾಜ್ಯ ಹೆದ್ದಾರಿ ವಿಸ್ತರಣಾ ಕಾರ್ಯ 6ನೇ ದಿನವೂ ಮುಂದುವರಿಯಿತು.

ಅತಿ ದೊಡ್ಡ ಕಟ್ಟಡಗಳ ತೆರವು ಕಾರ್ಯದ ಜವಾಬ್ದಾರಿಯನ್ನು ಕಟ್ಟಡ ಮಾಲೀಕರೇ ವಹಿಸಿಕೊಂಡಿದ್ದರಿಂದ ತೆರವು ಕಾರ್ಯ ವಿಳಂಬವಾಗುತ್ತಿದೆ. ಅಲ್ಲದೇ ಈಗಾಗಲೇ ತೆರವುಗೊಳಿಸಿರುವ ಕಟ್ಟಡಗಳ ಅವಶೇಷಗಳನ್ನು ವಿಲೇವಾರಿ ಮಾಡುವ ಕಾರ್ಯ ಮಂದಗತಿಯಲ್ಲಿ ಸಾಗಿದೆ. ಇದರಿಂದ ಮುಖ್ಯರಸ್ತೆಯ ನಿವಾಸಿಗಳು ತೀವ್ರ ತೊಂದರೆ ಅನುಭವಿಸುವಂತಾಗಿದೆ. ಬಾಗಿಲವರೆಗೆ ಬಿದ್ದಿರುವ ಮಣ್ಣಿನ ಗುಡ್ಡೆಗಳನ್ನು ತೆರವುಗೊಳಿಸದೇ ಇರುವುದರಿಂದ ಮನೆಯಿಂದ ಹೊರಗೆ ಬರಲು ತೊಂದರೆಯಾಗುತ್ತಿದೆ ಎಂದು ಕೆಲ ನಿವಾಸಿಗಳು ಆರೋಪಿಸಿದರು.

ಮಣ್ಣಿನ ಗುಡ್ಡೆಗಳನ್ನು ಶೀಘ್ರ ತೆರವುಗೊಳಿಸಬೇಕು. ಕುಡಿಯುವ ನೀರು, ಶೌಚಕ್ಕೆ ನೀರು ಇಲ್ಲದೇ ತೀವ್ರ ತೊಂದರೆಯಾಗುತ್ತಿದೆ ಎಂದು ನಿವಾಸಿಗಳು ಅಳಲು ತೋಡಿಕೊಂಡರು. ಶೆಟ್ಟರ್ ಬಿಲ್ಡಿಂಗ್, ಕಬ್ಬುರ ಬಿಲ್ಡಿಂಗ್ ಸೇರಿದಂತೆ ಇನ್ನೂ 30ಕ್ಕೂ ಹೆಚ್ಚು ಕಟ್ಟಡಗಳ ತೆರವು ಕಾರ್ಯ ಪೂರ್ಣಗೊಳ್ಳಬೇಕಾಗಿದೆ.

## ಸಮಾನವಾಗಿ ಬದುಕುವ ಸಂವಿಧಾನಿಕ ಹಕ್ಕು ನೀಡಿದ ಡಾ. ಅಂಬೇಡ್ಕರ್

• ಉದಯವಾಹಿನಿ ಜೇವರಗಿ

ಸಮಾಜದಲ್ಲಿ ಮನುಷ್ಯರು ಸಮಾನವಾಗಿ ಬದುಕಲು ಬದುಕುವ ಹಕ್ಕನ್ನು ಯಾವ ದೇವತೆಗಳೂ ಕೊಡಲಿಲ್ಲ. ಅದನ್ನು ಕೊಟ್ಟದ್ದು ಡಾ.ಬಿ ಆರ್ ಅಂಬೇಡ್ಕರ್ ಅವರ ಸಂವಿಧಾನ. ಜನರು ಮೌಢ್ಯದಿಂದ ಹೊರ ಬರಬೇಕು, ವೈಚಾರಿಕತೆಯನ್ನು ಬೆಳೆಸಿಕೊಳ್ಳಬೇಕು ಎಂದು ಪ್ರಾಂಶುಪಾಲೆ ಡಾ. ಶಾಂತಾ ಬಿ ಅಸ್ಟಿಗೆ ಹೇಳಿದರು .

ಅವರು ಪಟ್ಟಣದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಡಾ. ಬಿ. ಆರ್. ಅಂಬೇಡ್ಕರ್ ಸ್ಮರಣಾರ್ಥ ಸ್ಪರ್ಧಾಕೂಟದ ಸಮಾರೋಪ ಕಾರ್ಯಕ್ರಮದಲ್ಲಿ ಅಧ್ಯಕ್ಷ ಸ್ಥಾನದಿಂದ ಮಾತನಾಡಿದರು. ಮುಖ್ಯ ಅತಿಥಿಯಾಗಿದ್ದ ಕಲಬುರಗಿಯ ನಿವೃತ್ತ ಮನೋವಿಜ್ಞಾನದ ಪ್ರಾಧ್ಯಾಪಕ ಆರ್. ವೆಂಕಟರಡ್ಡಿ ಮಾತನಾಡಿ, ಅಂಬೇಡ್ಕರ್ ಅವರು ತಮ್ಮ ಬಡತನ, ಕಷ್ಟಕೋಟಲೆಗಳನ್ನೇ ಸಾಧನೆಗೆ ಮೆಟ್ಟಿಲುಗಳನ್ನಾಗಿಸಿಕೊಂಡರು. ವಿದ್ಯಾರ್ಥಿಗಳು ತಮ್ಮ ಭವಿಷ್ಯವನ್ನು ರೂಪಿಸಿಕೊಳ್ಳಲು ತಮ್ಮ ಅಗತ್ಯಗಳನ್ನು ಮರೆತು ಶಿಕ್ಷಣ ಪಡೆಯಬೇಕು. ಅಂಬೇಡ್ಕರ್ ಅವರನ್ನು ಚೆನ್ನಾಗಿ ಓದಿ ಮಾಡಿಕೊಳ್ಳಬೇಕು ಎಂದು ನುಡಿದರು.

## ಬಸ್ ಹತ್ತುವಾಗ 2.25 ಲಕ್ಷರೂ. ಮೌಲ್ಯದ ಚಿನ್ನಾಭರಣ ಕಳವು

• ಉದಯವಾಹಿನಿ ಕಲಬುರಗಿ

ಬಸ್ ಹತ್ತುವಾಗ ಮಹಿಳೆಯೊಬ್ಬರ ವ್ಯಾನಿಟಿ ಬ್ಯಾಗ್‌ನಲ್ಲಿದ್ದ 2.25 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಕಳವಾಗಿರುವ ಘಟನೆ ನಗರದ ಕೇಂದ್ರ ಬಸ್ ನಿಲ್ದಾಣದಲ್ಲಿ ನಡೆದಿದೆ. ಯಾದಗಿರಿ ಜಿಲ್ಲೆಯ ಲಕ್ಷ್ಮೀನಗರದ ಆರತಿ ಉಮೇಶ ಶೆಟಗಾರ ಎಂಬುವವರು ಮಕ್ಕಳೊಂದಿಗೆ ಸೊಲ್ಲಾಪುರದಲ್ಲಿರುವ ತಮ್ಮ ಸಹೋದರನ ಮಗಳ ನಾಮಕರಣ ಹೋಗಿದ್ದು, ಕಾರ್ಯಕ್ರಮ ಮುಗಿಸಿಕೊಂಡು ಸೊಲ್ಲಾಪುರದಿಂದ ಮರಳಿ ಕಲಬುರಗಿಗೆ ಬಂದಿದ್ದಾರೆ. ಕಲಬುರಗಿಯಿಂದ ಯಾದಗಿರಿಗೆ ಹೋಗಲೆಂದು ಕೇಂದ್ರ ಬಸ್ ನಿಲ್ದಾಣದ ಪ್ಲಾಟ್ ಫಾರಂ.ನಂ.11ರಲ್ಲಿ ಯಾದಗಿರಿಗೆ ಹೋಗುವ ಬಸ್ ಹತ್ತಿದ್ದಾರೆ. ಈ ವೇಳೆ ಅವರ ವ್ಯಾನಿಟಿ ಬ್ಯಾಗ್‌ನಲ್ಲಿದ್ದ 1.50 ಲಕ್ಷ ರೂ.ಮೌಲ್ಯದ 13 ಗ್ರಾಂ. ಬಂಗಾರದ ಲಾಕೆಟ್, 75 ಸಾವಿರ ರೂ.ಮೌಲ್ಯದ 5 ಗ್ರಾಂ. ಉಂಗುರ ಸೇರಿ 2.25 ಲಕ್ಷ ರೂ.ಮೌಲ್ಯದ ಚಿನ್ನಾಭರಣ ಕಳವಾಗಿವೆ. ಈ ಸಂಬಂಧ ಅವರು ಅಶೋಕನಗರ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸಿದ್ದು, ತನಿಖೆ ನಡೆದಿದೆ.

## ಹವಾಮಾನ ವೈಪರೀತ್ಯ :ಆಕಾಶದಲ್ಲೇ ಸುತ್ತಾಡಿದ ವಿಮಾನಗಳು; ಜನರಲ್ಲಿ ಆತಂಕ

• ಉದಯವಾಹಿನಿ ಮಂಗಳೂರು

ಕರಾವಳಿ ಜಿಲ್ಲೆಯಲ್ಲಿ ಉಂಟಾದ ಅನಿರೀಕ್ಷಿತ ಹವಾಮಾನ ವೈಪರೀತ್ಯ ಹಾಗೂ ಭಾರಿ ಮಳೆಯ ಹಿನ್ನೆಲೆಯಲ್ಲಿ ಮಂಗಳೂರು ವಿಮಾನ ನಿಲ್ದಾಣಕ್ಕೆ ಆಗಮಿಸಬೇಕಿದ್ದ ಎರಡು ವಿಮಾನಗಳು ಲ್ಯಾಂಡಿಂಗ್ ಆಗಲಾಗದೆ ಆಕಾಶದಲ್ಲೇ ಸುದೀರ್ಘ ಕಾಲ ಸುತ್ತಾಡಿದ ಘಟನೆ ಗುರುವಾರ ನಡೆದಿದೆ. ಇದರಿಂದಾಗಿ ವಿಟ್ಲ ಪರಿಸರದ ಸಾರ್ವಜನಿಕರಲ್ಲಿ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು.

ಮಂಗಳೂರಿನ ಕೆಂಜಾರು ಅಂತಾರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ನಿಗದಿತ ಸಮಯದಲ್ಲಿ ಎರಡು ವಿಮಾನಗಳು ಆಗಮಿಸಿದ್ದವು. ಆದರೆ ಮಂಗಳೂರು ಪರಿಸರದಲ್ಲಿ ಮೋಡ ಕವಿದ ವಾತಾವರಣ ಹಾಗೂ ಗಾಳಿಯ ವೇಗ ಹೆಚ್ಚಾಗಿದ್ದರಿಂದ ರನ್ ವೇ ಸರಿಯಾಗಿ ಕಾಣಿಸದ ಕಾರಣ ಪೈಲಟ್‌ಗಳಿಗೆ ವಿಮಾನವನ್ನು ಕೆಳಗಿಳಿಸಲು ಸಾಧ್ಯವಾಗಲಿಲ್ಲ. ಮುನ್ನೆಚ್ಚರಿಕಾ ಕ್ರಮವಾಗಿ ವಿಮಾನಗಳು ಕೆಲಕಾಲ ಆಕಾಶದಲ್ಲೇ ಹಾರಾಟ ನಡೆಸಬೇಕಾಯಿತು. ಸುಮಾರು ಅರ್ಧ ಗಂಟೆಗೂ ಹೆಚ್ಚು ಕಾಲ ಈ ವಿಮಾನಗಳು ವಿಟ್ಲ ಪರಿಸರದ ಆಕಾಶದಲ್ಲಿ ಭೂಮಿಗೆ ಹತ್ತಿರವೆಂಬಂತೆ ಸುತ್ತಾಡುತ್ತಿದ್ದುದನ್ನು ಗಮನಿಸಿದ ಸ್ಥಳೀಯರು ಭಯಭೀತರಾದರು. ವಿಮಾನದಲ್ಲಿ ತಾಂತ್ರಿಕ ತೊಂದರೆ ಕಾಣಿಸಿಕೊಂಡಿರಬಹುದೇ ಎಂಬ ಅನುಮಾನ ಸಾರ್ವಜನಿಕರನ್ನು ಕಾಡತೊಡಗಿತ್ತು. ಹಲವರು ಕುತೂಹಲ ಮತ್ತು ಆತಂಕದಿಂದ ಆಕಾಶದತ್ತ ದೃಷ್ಟಿ ನೆಟ್ಟಿದ್ದರು.

## ರಕ್ತದಾನದಿಂದ ಹೃದಯ ಸಂಬಂಧಿ ಕಾಯಿಲೆ ತಡೆ ಸಾಧ್ಯ: ಟಿಹೆಚ್‌ಒ ಡಾ. ಬಿ.ವಿ. ಗಿರೀಶ್

• ಉದಯವಾಹಿನಿ ಚಿತ್ರದುರ್ಗ

ರಕ್ತದಾನ ಮಾಡುವುದರಿಂದ ಹೃದಯ ಸಂಬಂಧಿ ಕಾಯಿಲೆಗಳನ್ನು ತಡೆಗಟ್ಟಬಹುದು ಎಂದು ಚಿತ್ರದುರ್ಗ ತಾಲ್ಲೂಕು ಆರೋಗ್ಯ ಅಧಿಕಾರಿ ಡಾ. ಬಿ.ವಿ. ಗಿರೀಶ್ ತಿಳಿಸಿದರು. ಚಿತ್ರದುರ್ಗ ತಾಲ್ಲೂಕಿನ ಚಿಕ್ಕಗೊಂಡನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಆರೋಗ್ಯ ಇಲಾಖೆ, ಭಾರತೀಯ ರೆಡ್ ಕ್ರಾಸ್ ಸಂಸ್ಥೆ, ರಾಷ್ಟ್ರೀಯ ಸೇವಾ ಯೋಜನೆ (ಎನ್‌ಎಸ್‌ಎಸ್), ಸರ್ಕಾರಿ ಕಲಾ ಕಾಲೇಜು ಹಾಗೂ ನೆಹರು ಯುವ ಕೇಂದ್ರದ ವತಿಯಿಂದ ಆಯೋಜಿಸಿದ್ದ ಉಚಿತ ಆರೋಗ್ಯ ತಪಾಸಣೆ ಹಾಗೂ ರಕ್ತದಾನ ಶಿಬಿರ ಉದ್ಘಾಟಿಸಿ ಅವರು ಮಾತನಾಡಿದರು.

ಹೆರಿಗೆ ಸಮಯದಲ್ಲಿ ಮಹಿಳೆಯರಿಗೆ, ರಕ್ತಹೀನತೆಯಿಂದ ಬಳಲುತ್ತಿರುವವರಿಗೆ ಹಾಗೂ ಅಪಘಾತಕ್ಕೊಳಗಾದವರಿಗೆ ರಕ್ತದ ಅವಶ್ಯಕತೆ ಹೆಚ್ಚಿರುತ್ತದೆ. ಇಂತಹ ತುರ್ತು ಸಂದರ್ಭದಲ್ಲಿ ರಕ್ತದಾನ ಮಾಡುವುದರಿಂದ ಅಮೂಲ್ಯ ಜೀವಗಳನ್ನು ಉಳಿಸಲು ಸಾಧ್ಯ ಎಂದು ಅವರು ಹೇಳಿದರು.

ಚಿಕ್ಕಗೊಂಡನಹಳ್ಳಿ ಪಿಎಚ್‌ಸಿ ಆಡಳಿತ ವೈದ್ಯಾಧಿಕಾರಿ ಹಾಗೂ ಮಾನಸಿಕ ತಜ್ಞ ಡಾ. ಆರ್. ಮಂಜುನಾಥ್ ಮಾತನಾಡಿ, ರಕ್ತವನ್ನು ಕೃತಕವಾಗಿ ತಯಾರಿಸಲು ಸಾಧ್ಯವಿಲ್ಲ. ರಕ್ತದಾನ ಮಾಡುವುದರಿಂದ ಕೇವಲ ದೈಹಿಕ ಆರೋಗ್ಯವಷ್ಟೇ ಅಲ್ಲದೆ, ಮಾನಸಿಕ ನೆಮ್ಮದಿ ಮತ್ತು ಚೈತನ್ಯವೂ ಹೆಚ್ಚುತ್ತದೆ. ಇದೊಂದು ಶ್ರೇಷ್ಠ ಪುಣ್ಯದ ಕೆಲಸ ಎಂದರು. ತಾಲ್ಲೂಕು ಆರೋಗ್ಯ ಶಿಕ್ಷಣಾಧಿಕಾರಿ ಬಿ. ಮೂಗಪ್ಪ ಮಾತನಾಡಿ, ರಕ್ತದಾನದಿಂದ ದೇಹದಲ್ಲಿ ಹೊಸ ರಕ್ತಕಣಗಳು ಉತ್ಪತ್ತಿಯಾಗುತ್ತವೆ. ಇದರಿಂದ



ಉದಯವಾಹಿನಿ ಚಿತ್ರ

18 ರಿಂದ 65 ವರ್ಷದೊಳಗಿನ ಆರೋಗ್ಯವಂತ ಪುರುಷರು ಮತ್ತು ಮಹಿಳೆಯರು ರಕ್ತದಾನ ಮಾಡಬಹುದು. ರಕ್ತದಾನದಿಂದ ಯಾವುದೇ ಅಶಕ್ತತೆ ಉಂಟಾಗುವುದಿಲ್ಲ. ಪೌಷ್ಟಿಕ ಆಹಾರ, ಹಸಿರು ತರಕಾರಿ ಮತ್ತು ಹೆಚ್ಚಿನ ನೀರು ಸೇವಿಸುವ ಮೂಲಕ ರಕ್ತದ ಪ್ರಮಾಣವನ್ನು ಹೆಚ್ಚಿಸಿಕೊಳ್ಳಬಹುದು. ಜಂಕ್ ಫುಡ್‌ಗಳ ಬಳಕೆಯನ್ನು ಕಡಿಮೆ ಮಾಡಬೇಕು. – ಡಾ. ರೂಪಾ, ಜಿಲ್ಲಾ ಆಸ್ಪತ್ರೆ ರಕ್ತನಿಧಿ ಕೇಂದ್ರದ

ಕೊಲೆಸ್ಟ್ರಾಲ್ ಕಡಿಮೆಯಾಗುವುದಲ್ಲದೆ ಕ್ಯಾನ್ಸರ್‌ನಂತಹ ಕಾಯಿಲೆಗಳನ್ನು ತಡೆಯಬಹುದು. ಆದರೆ ಕಾಮಾಲೆ ಮತ್ತು ಎಚ್‌ಐವಿ ಸೋಂಕಿತರು ರಕ್ತದಾನ ಮಾಡಲು ಅರ್ಹರಲ್ಲ ಎಂದು ತಿಳಿಸಿದರು.

ಎನ್‌ಎಸ್‌ಎಸ್ ಶಿಬಿರಾರ್ಥಿಗಳು ಗ್ರಾಮದಲ್ಲಿ ಪರಿಸರ ಸ್ವಚ್ಛತೆ ಕುರಿತು ಜಾಥಾ ನಡೆಸುವ ಮೂಲಕ ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಿದರು. ಶಿಬಿರದಲ್ಲಿ ಆರು ಮಂದಿ ರಕ್ತದಾನ ಮಾಡಿದರು. ಬಸವೇಶ್ವರ ವೈದ್ಯಕೀಯ ಮಹಾವಿದ್ಯಾಲಯದ ತಜ್ಞ ವೈದ್ಯರ ತಂಡವು 82 ಜನರಿಗೆ ಉಚಿತ ಆರೋಗ್ಯ ತಪಾಸಣೆ ನಡೆಸಿತು.

ಎಮರ್ಜೆನ್ಸಿ ಮೆಡಿಸಿನ್ ತಜ್ಞ ವೈದ್ಯ ಡಾ.ಸಂತೋಷ್ ರೆಡ್ ಕ್ರಾಸ್ ಸಂಸ್ಥೆಯ ಜಿಲ್ಲಾ ಕಾರ್ಯದರ್ಶಿ ಮಜಹರ್ ಉಲ್ಲಾ, ಸಂಚಾಲಕ ಡಾ. ಪ್ರದೀಪ್ ಕುಮಾರ್, ಸದಸ್ಯ ಡಾ. ದೀಕ್ಷಿತ್, ನೆಹರು ಯುವ ಕೇಂದ್ರದ ಭರತ್, ಸರ್ಕಾರಿ ಕಲಾ ಕಾಲೇಜಿನ ಡಾ. ವಿ. ಪ್ರಸಾದ್, ಬಿ.ಕೆ. ಬಸವರಾಜ್, ಅಶೋಕ್ ಕುಮಾರ್, ಹಿರಿಯ ಪಿಎಚ್‌ಸಿಒ ಸುಧಾ, ಆರೋಗ್ಯ ನಿರೀಕ್ಷಣಾಧಿಕಾರಿ ಶಂಕ್ರನಾಯಕ್, ಪ್ರಯೋಗಶಾಲಾ ತಂತ್ರಜ್ಞ ಸಂದೀಪ್, ಮುರುಳೀಧರ ಹಾಗೂ ಆರೋಗ್ಯ ಇಲಾಖೆಯ ಸಿಬ್ಬಂದಿ ಉಪಸ್ಥಿತರಿದ್ದರು.

## ಡಿಜಿಟಲ್ ರೂಪದಲ್ಲಿ ದಾಖಲೆ ಲಭ್ಯ

• ಉದಯವಾಹಿನಿ ಮುಂಡಗೋಡ

ಭೂ ಸುರಕ್ಷಾ ಯೋಜನೆಯಡಿ ಇಲ್ಲಿನ ತಹಶೀಲ್ದಾರ್ ಕಚೇರಿಯ ರೆಕಾರ್ಡ್ ರೂಮ್ ದಾಖಲೆಗಳನ್ನು ಈಗ ಸಂಪೂರ್ಣವಾಗಿ ಡಿಜಿಟಲೀಕರಣಗೊಳಿಸಲಾಗಿದೆ. ದಾಖಲೆಗಳ ಸುರಕ್ಷತೆಯನ್ನು ಖಚಿತಪಡಿಸುವುದು ಹಾಗೂ ಹಳೆಯ ಕಡತಗಳನ್ನು ಡಿಜಿಟಲ್ ರೂಪದಲ್ಲಿ ಶಾಶ್ವತವಾಗಿ ಸಂರಕ್ಷಿಸುವುದು ಯೋಜನೆಯ ಮುಖ್ಯ ಉದ್ದೇಶವಾಗಿದೆ ಎಂದು ತಹಶೀಲ್ದಾರ್ ಶಂಕರ ಗೌಡಿ ತಿಳಿಸಿದ್ದಾರೆ. ಪೋರ್ಟಲ್ ಮೂಲಕವೇ ನೇರವಾಗಿ ದಾಖಲೆಗಳನ್ನು ವಿತರಿಸುವುದರಿಂದ, ಸಾರ್ವಜನಿಕರು ಕಚೇರಿಗಳಿಗೆ ಪದೇ ಪದೇ .http://recordroom.karnataka.gov.in/service4 20 ಬಳಸಿಕೊಂಡು ತಮ್ಮ ಅಧಿಕೃತ ದಾಖಲೆಗಳನ್ನು ಪಡೆಯಬಹುದು. ತಹಶೀಲ್ದಾರ್ ಕಚೇರಿಯ ಎ.ಜೆ.ಎಸ್.ಕೆ ಕೇಂದ್ರ ಹಾಗೂ ಪಾಳಾ ಹೋಬಳಿಯ ನಾಡಕಚೇರಿಯಲ್ಲಿಯೂ ಈ ಸೌಲಭ್ಯವಿದ್ದು ಸಾರ್ವಜನಿಕರು ಸದುಪಯೋಗ ಪಡಿಸಿಕೊಳ್ಳುವಂತೆ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ಗಾಳಿ, ಮಳೆ: 30 ಮನೆ, ಶಾಲೆಗೆ ಹಾನಿ

• ಉದಯವಾಹಿನಿ ಕಾಗವಾಡ

ಮತ ಕ್ಷೇತ್ರದ ವ್ಯಾಪ್ತಿಯ ಹಲವು ಗ್ರಾಮಗಳಲ್ಲಿ ರಾತ್ರಿ ಸುರಿದ ಭಾರಿ ಗಾಳಿ ಮಳೆ ಅಪಾರ ಅವಾಂತರ ಮಾಡಿದೆ. ಸಂಬರಗಿ, ನಾಗನೂರ, ತಾವಂಶಿ ಸೇರಿದಂತೆ ಹಲವು ಗ್ರಾಮಗಳಲ್ಲಿ ಹಾನಿಯಾಗಿದೆ. ಭಾರಿ ಗಾಳಿಯ ಅಬ್ಬರಕ್ಕೆ 30ಕ್ಕೂ ಹೆಚ್ಚು ಮನೆಗಳ ಮೇಲ್ಛಾವಣಿಗಳು ಹಾರಿಹೋಗಿದ್ದು, ಹಲವಾರು ಕುಟುಂಬಗಳು ರಾತ್ರಿಯಿಡೀ ಆತಂಕದಲ್ಲಿ ಕಾಲ ಕಳೆದಿವೆ. ಮನೆಗಳ ಮೇಲಾವಣಿ ಕುಸಿದು ಯುವಕನ ಕೈಗೆ ಗಂಭೀರ ಗಾಯವಾಗಿದ್ದು, ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದೆ. ಗಾಳಿ ರಭಸಕ್ಕೆ ಜಾನುವಾರುಗಳ ಮೇಲೂ ಶೀಟ್‌ಗಳು ಬಿದ್ದು ಗಾಯಗಳಾಗಿವೆ.

ನೂರಾರು ಬೃಹತ್ ಮರಗಳು, ತೆಂಗಿನ ಮರಗಳು ಹಾಗೂ ವಿದ್ಯುತ್ ಕಂಬಗಳು ಧರೆಗೆ ಉರುಳಿದ್ದು, ಗ್ರಾಮಗಳಲ್ಲಿ ವಿದ್ಯುತ್ ವ್ಯತ್ಯಯ ಉಂಟಾಗಿದೆ. ಇನ್ನೊಂದೆಡೆ ದಾಳಿಂಬೆ, ಮಾವು ಸೇರಿದಂತೆ ಹಲವು ಬೆಳೆಗಳು ನೆಲಕಚ್ಚಿದ್ದು, ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಅಕಾಲಿಕ ಗಾಳಿ ಮಳೆಯಿಂದ ಗ್ರಾಮಗಳಲ್ಲಿ ಅಪಾರ ಪ್ರಮಾಣದ ಹಾನಿ ಸಂಭವಿಸಿದ್ದು, ಸ್ಥಳಕ್ಕೆ ಅಧಿಕಾರಿಗಳು ಭೇಟಿ ನೀಡಿ ಪರಿಶೀಲನೆ ನಡೆಸುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ. ಕಾಗವಾಡ ಪಟ್ಟಣದಲ್ಲಿ ಜೋರಾಗಿ ಬೀಸಿದ ಗಾಳಿ ಮಳೆಗೆ ನಮ್ಮೂರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆಯ ಮೇಲ್ಛಾವಣಿ ಹಾರಿಹೋಗಿದೆ. ವಿದ್ಯುತ್ ಕಂಬಗಳು ನೆಲಕ್ಕೆ ಉರುಳಿವೆ. ಜೂಗುಳ ಗ್ರಾಮದಲ್ಲಿ ಬೃಹದಾಕಾರದ ಮರ ಜೂಗುಳ-ಶಿರಗುಪ್ಪಿ ರಸ್ತೆಯಲ್ಲಿ ವಾಲಿದ್ದರಿಂದ ಕೆಲ ಕಾಲ ಸಂಚಾರಕ್ಕೆ ಅಡಚಣೆ ಆಯಿತು. ಬಿಸಿಲಿನ ಬೇಗೆಯಿಂದ ಕಂಗೆಟ್ಟಿದ್ದ ಜನರಿಗೆ ಅಕಾಲಿಕ ಮಳೆ ಗಾಳಿ ಬಹಳ ನಷ್ಟ ಉಂಟು ಮಾಡಿದೆ.



ಉದಯವಾಹಿನಿ ಚಿತ್ರ

## 4 ವರ್ಷದ ನಿಖಿಲ್ ಜೀವ ಉಳಿಸಲು ನಡೆಯುತ್ತಿದೆ ಹಣದ ಜೊತೆಗಿನ ಹೋರಾಟ

### ಹನಿ ಹನಿ ಕೂಡಿದರೆ ಹಳ್ಳ ಎಂಬಂತೆ, ನಾವೆಲ್ಲರೂ ಕೈಜೋಡಿಸಿದರೆ ಆ ಪುಟ್ಟ ಜೀವ ಮತ್ತೆ ಎದ್ದು ನಿಲ್ಲಲು ಸಾಧ್ಯ

**ಉದಯವಾಹಿನಿ ವಿಶೇಷ**

• ಇಲ್ಯಾಸ್ ಪಟೇಲ್, ಬಳಗಾನೂರ

• ಉದಯವಾಹಿನಿ ಯಾದಗಿರಿ

ವಿಧಿಯಾಟ ಎಷ್ಟು ಕ್ರೂರ ಎಂದರೆ, ಕೈಯಲ್ಲಿ ಆಟದ ಸಾಮಾನು ಹಿಡಿದು ಮನೆತುಂಬಾ ಓಡಿ ಆಡಬೇಕಾದ 4 ವರ್ಷದ ಕಂದ ನಿಖಿಲ್ ಕುಮಾರ್ ಇಂದು ಆಸ್ಪತ್ರೆಯ ಬೆಡ್ ಮೇಲೆ ಮಲಗಿ ಮರಣಯಾತನೆ ಅನುಭವಿಸುತ್ತಿದ್ದಾನೆ. ಬೆನ್ನುಹುರಿಯ ಗೆಡ್ಡೆ ಯೆಂಬ (Spinal Cord Tumor) ಮಹಾಮಾರಿ ಈ ಪುಟ್ಟ ಜೀವವನ್ನು ಹಿಂಡಿ ಹಿಪ್ಪೆ ಮಾಡುತ್ತಿದೆ. ಪ್ರತಿ ಕ್ಷಣವೂ ಮಗ ಅನುಭವಿಸುತ್ತಿರುವ ನರಕಯಾತನೆಯನ್ನು ಕಣ್ಣಾರೆ ನೋಡುತ್ತಿರುವ ತಂದೆ ನಿಂಗಪ್ಪ ಡಿ ಅವರು, ಮಗನನ್ನು ಉಳಿಸಿ... ಉಳಿಸಿ..ಎಂದು ದಾನಿಗಳ ಮುಂದೆ ಕಣ್ಣೀರು ಹಾಕುತ್ತಾ ಕೈ ಚಾಚಿ ನಿಂತಿದ್ದಾರೆ.


**ಬಡತನದ ನಡುವೆ ಮೃತ್ಯುಂಜಯನ ಹೋರಾಟ:** ನಿಖಿಲ್ ನೋವಿನಿಂದ ನರಳುತ್ತಿದ್ದರೆ, ಅತ್ತ ತಂದೆ ನಿಂಗಪ್ಪ ಆರ್ಥಿಕ ಸಂಕಷ್ಟದ ಬೆಂಕಿಯಲ್ಲಿ ಬೇಯುತ್ತಿದ್ದಾರೆ. ಕೂಲಿ ಕೆಲಸ ಮಾಡಿ ಸಂಸಾರ ನಡೆಸುವ ಅವರಿಗೆ ಮಗನ ಚಿಕಿತ್ಸೆಯ ವೆಚ್ಚ ಬೆಟ್ಟದಂತೆ



ಉದಯವಾಹಿನಿ ಚಿತ್ರ

ಕಾಣುತ್ತಿದೆ. ವೈದ್ಯರ ಪ್ರಕಾರ, ಶಸ್ತ್ರಚಿಕಿತ್ಸೆಗೆ ಸುಮಾರು 10 ಲಕ್ಷ ರೂಪಾಯಿ ಮೊತ್ತದ ಅಗತ್ಯವಿದೆ. ಆದರೆ, ಈ ಬಡ ಕುಟುಂಬದ ಪಾಲಿಗೆ ಆ ಹಣ ಆಕಾಶದ ನಕ್ಷತ್ರದಷ್ಟೇ ದೂರವಾಗಿದೆ.

ನನ್ನ ಬಳಿ ಆಸ್ತಿ–ಪಾಸ್ತಿ ಅಂತ ಏನೂ ಇಲ್ಲ, ನನ್ನ ಮಗನೇ ನನಗಿರೋ ಏಕೈಕ ಆಸ್ತಿ. ಅವನನ್ನು ಉಳಿಸಿಕೊಳ್ಳೋಕೆ ಹತ್ತು ಲಕ್ಷ ರೂಪಾಯಿ ನಾನು ಎಲ್ಲಿಂದ ತರಲಿ? ಮಗ ನೋವಿನಿಂದ ಅಪ್ಪಾ ಕಾಪಾಡು ಅಂತ ಕಿರುಚುತ್ತಿದ್ದರೆ ಎದೆ ಸೀಳಿದಂತಾಗುತ್ತದೆ, ಎಂದು ನಿಂಗಪ್ಪ ಅವರು ಅಳುತ್ತಾ ಹೇಳುವ ಮಾತುಗಳು ಕಲ್ಲು ಮನಸ್ಸನ್ನೂ ಕರಗಿಸುವಂತಿವೆ.



ಮಗುವಿನ ಬೆನ್ನುಹುರಿಯಲ್ಲಿ ಬೆಳೆಯುತ್ತಿರುವ ಗೆಡ್ಡೆ ದಿನೇ ದಿನೇ ಅವನ ಚಲನೆಯನ್ನು ಕಿತ್ತುಕೊಳ್ಳುತ್ತಿದೆ, ತುರ್ತು ಚಿಕಿತ್ಸೆ ಸಿಗದಿದ್ದರೆ ಮಗುವಿನ ಪ್ರಾಣಕ್ಕೇ ಅಪಾಯವಿದೆ.

**ಹನಿ ಹನಿ ನೀರು ಸೇರಿದರೆ ಹಳ್ಳ, ನಿಮ್ಮ ಪುಟ್ಟ ನೆರವು ನೀಡಲಿ ಜೀವ:** ಹಣದ ಕೊರತೆಯಿಂದಾಗಿ ಕೇವಲ 4 ವರ್ಷದ ಒಂದು ಹಸುಗೂಸಿನ ಜೀವ ಹೋಗಬಾರದು. ನಾವು ಐಷಾರಾಮಿ ಜೀವನಕ್ಕಾಗಿ ಖರ್ಚು ಮಾಡುವ ಸಣ್ಣ ಮೊತ್ತವು ಈ ಕುಟುಂಬಕ್ಕೆ ಬೆನ್ನೆಲುಬಾಗಬಲ್ಲದು. ನಾವು ನೀಡುವ 100, 200, 500 ಅಥವಾ 1000 ರೂಪಾಯಿಗಳು ನಮಗೆ ಸಣ್ಣ ಮೊತ್ತವಾಗಿರಬಹುದು, ಆದರೆ ಅದು ನಿಖಿಲ್ ಪಾಲಿಗೆ ಸಂಜೀವಿನಿ ಇದ್ದಂತೆ. ಹನಿ ಹನಿ ಕೂಡಿದರೆ ಹಳ್ಳ ಎಂಬಂತೆ, ನಾವೆಲ್ಲರೂ ಕೈಜೋಡಿಸಿದರೆ ಆ ಪುಟ್ಟ ಜೀವ ಮತ್ತೆ ಎದ್ದು ನಿಲ್ಲಲು ಸಾಧ್ಯ. ನಾಳೆ ಈ ಮಗು ಶಾಲೆಗೆ ಹೋಗಿ, ದೇಶದ ಉತ್ತಮ ಪ್ರಜೆಯಾಗಬೇಕೆಂದರೆ ಇಂದು ನಿಮ್ಮ ಮತ್ತು ಸಮಾಜದ ಸಹಕಾರದ ಅತ್ಯಗತ್ಯವಿದೆ. ಇದು ಕೇವಲ ಒಂದು ಕುಟುಂಬದ ಹೋರಾಟವಲ್ಲ, ಇದು ಮಾನವೀಯತೆಯ ಪರೀಕ್ಷೆ.

ಅಪ್ಪಾ, ನನಗೆ ನೋವಾಗ್ತಿದೆ, ಕಾಪಾಡು..


**ಒಂದು ತಾಯಿಯ ಕಣ್ಣೀರು ವೊರೆಸೋಣ, ಒಂದು ಮಗುವಿನ ನಗು ಉಳಿಸೋಣ:** ದಯವಿಟ್ಟು ಮಾನವೀಯತೆ ತೋರಿ. ನಿಮ್ಮ ಪ್ರತಿಯೊಂದು ಸಹಾಯವೂ ಆ ಪುಟ್ಟ ನಿಖಿಲ್ ಗೆ ಮರುಜನ್ಮ ನೀಡಬಲ್ಲದು. ಒಂದು ತಾಯಿಯ ಒಡಲ ಕಿಚ್ಚನ್ನು ಆರಿಸಲು, ಒಬ್ಬ ತಂದೆಯ ಮಗುವಿನ ಕನಸನ್ನು ಉಳಿಸಲು ನಾವು ಜೊತೆಯಾಗೋಣ. ಈ ಮಾಹಿತಿಯನ್ನು ನಿಮ್ಮ ಸ್ನೇಹಿತರು ಹಾಗೂ ಸಂಬಂಧಿಕರೊಂದಿಗೆ ಹಂಚಿಕೊಳ್ಳುವ ಮೂಲಕವೂ ನೀವು ಸಹಾಯ ಮಾಡಬಹುದು.

**ಸಹಾಯ ಹಸ್ತ ಚಾಚಲು ವಿವರಗಳು: ಹೆಸರು: ನಿಂಗಪ್ಪ ಡಿ**
ಫೋನ್/UPI (PhonePe/GPay): 9986615749

# ಟ್ರಂಪ್ ಇರಾನ್ ಯುದ್ಧದ ಬಗ್ಗೆ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಹೆಲ್ಪ್ ಕೇಳೇ ಇಲ್ಲ

**ಬೀಜಿಂಗ್:** ಮಧ್ಯಪ್ರಾಚ್ಯ ಸಂಘರ್ಷದ ನಡುವೆ ಅಮೆರಿಕಾ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಚೀನಾ ಪ್ರವಾಸ ನಡೆಸಿದ್ದು, ಈ ವೇಳೆ ಯುದ್ಧದ ಕುರಿತು ಮಾತುಕತೆ ನಡೆಸಲಾಗಿದೆ ಎಂಬ ವರದಿಗಳ ನಡುವೆ ಚೀನಾ ಅಧ್ಯಕ್ಷ ಕ್ಸಿ ಜಿನ್‌ಪಿಂಗ್ ಅವರೊಂದಿಗೆ ಇರಾನ್ ಯುದ್ಧದ ಕುರಿತು ಸಹಾಯವನ್ನೇ ಕೇಳಿಲ್ಲ ಎಂದು ಯುಎಸ್ ವಿದೇಶಾಂಗ ಕಾರ್ಯದರ್ಶಿ ಮಾರ್ಕೊ ರುಬಿಯೊ ಹೇಳಿಕೆ ನೀಡಿದ್ದಾರೆ.

**ಟ್ರಂಪ್ ಇರಾನ್ ಯುದ್ಧ ಕುರಿತು ಚೀನಾ ಸಹಾಯ ಕೇಳಿಲ್ಲ:** ಟ್ರಂಪ್ ಚೀನಾ ಪ್ರವಾಸದ ವೇಳೆ ಇರಾನ್ ಯುದ್ಧದ, ಹೊರ್ಮುಜ್ ಜಲಸಂಧಿ ಬಿಕ್ಕಟ್ಟು ಕುರಿತು ಮಾತುಕತೆಗಳು ಕೇಂದ್ರೀಕೃತವಾಗಿದೆ ಎಂಬ ವರದಿಗಳು ಕೇಳಿಬಂದಿದ್ದು, ಇದೀಗ ಈ ಕುರಿತು ಮಾತನಾಡಿದ ಮಾರ್ಕೊ ರುಬಿಯೊ ಪ್ರತಿಕ್ರಿಯೆ ನೀಡಿ



ಟ್ರಂಪ್-ಕ್ಸಿ ಮಾತುಕತೆ ವೇಳೆ, ಇರಾನ್ ಕುರಿತು ಪ್ರಸ್ತಾಪಿಸಿದ್ದಾರೆ. ಆದರೆ, ಅಧ್ಯಕ್ಷ ಟ್ರಂಪ್ ಇರಾನ್‌ಬಗ್ಗೆ ಚೀನಾದ ಅಧ್ಯಕ್ಷರ ಸಹಾಯವನ್ನು ಕೇಳಲಿಲ್ಲ ಮತ್ತು ನಮಗೆ ಅದರ ಅಗತ್ಯವಿಲ್ಲ ಎಂದಿದ್ದಾರೆ. ಅಲ್ಲದೆ, ಚೀನಾ ಹೊರ್ಮುಜ್ ಜಲಸಂಧಿಯನ್ನು ಮಿಲಿಟರೀಕರಣಗೊಳಿಸುವ ಹಾಗೂ ಜಲಸಂಧಿಯಲ್ಲಿ ಟೋಲ್ ಸಂಗ್ರಹಿಸುವ ವ್ಯವಸ್ಥೆಯ ಪರವಾಗಿಲ್ಲ, ಅದು ನಮ್ಮ ನಿಲುವು ಸಹ ಆಗಿದೆ. ನಾವು ಎಂದಿಗೂ ಹೊರ್ಮುಜ್‌ನಲ್ಲಿ ಇರಾನ್ ಟೋಲ್ ವ್ಯವಸ್ಥೆ ಜಾರಿಗೊಳಿಸುವುದು ಹಾಗೂ ಅಂತಾರಾಷ್ಟ್ರೀಯ ಜಲಮಾರ್ಗದಲ್ಲಿ ಜಲಸ್ಫೋಟಕಗಳನ್ನು ಹಿಡುವುದನ್ನು ಒಪ್ಪುವುದಿಲ್ಲ ಎಂದು ತಿಳಿಸಿದ್ದಾರೆ.

**ಇರಾನ್‌ಗೆ ಒಪ್ಪಂದದಲ್ಲಿ ರಿಯಾಯಿತಿ ನೀಡಲ್ಲ ಎಂದು ಯುಎಸ್ ವಿದೇಶಾಂಗ ಕಾರ್ಯದರ್ಶಿ:** ಇದೇ ವೇಳೆ, ಅಮೆರಿಕಾ ತಮ್ಮೊಂದಿಗೆ ಒಪ್ಪಂದ ಮಾಡಿಕೊಳ್ಳಲು ರಿಯಾಯಿತಿಗಳನ್ನು ನೀಡಲಿದೆ ಎಂಬ ಇರಾನ್ ತಪ್ಪು ಭಾವನೆಯಲ್ಲಿ ಇರಬಾರದು ಎಂದಿದ್ದು, ನಾವು ಒಪ್ಪಂದಕ್ಕೆ ಬರಲು ರಿಯಾಯಿತಿಗಳನ್ನು ನೀಡುತ್ತೇವೆ ಎಂದು ಇರಾನಿಯನ್ನರು ಊಹಿಸಿದರೆ, ಅವರು ತಪ್ಪಾಗಿ ಭಾವಿಸುತ್ತಿದೆ. ಏಕೆಂದರೆ, ಇರಾನ್ ಪರಮಾಣು ಶಸ್ತ್ರಾಸ್ತ್ರವನ್ನು ಪಡೆಯಲು ನಾವು ಅವಕಾಶ ನೀಡಿದರೆ, ಅದು ಹೊರ್ಮುಜ್ ಜಲಸಂಧಿಯನ್ನು ಶಾಶ್ವತವಾಗಿ ನಿಯಂತ್ರಿಸುತ್ತದೆ. ಹಾಗಾಗಿ ಯಾವುದೇ ಸಂದರ್ಭದಲ್ಲೂ ನಾವು ಇರಾನ್ ಇಂತಹ ಜೊತೆ ಕೆಟ್ಟ ಒಪ್ಪಂದ ಮಾಡಿಕೊಳ್ಳುವುದಿಲ್ಲ ಎಂದಿದ್ದಾರೆ.

**ಕ್ಸಿ ಭೇಟಿ ಕುರಿತು ಟ್ರಂಪ್ ಹೇಳಿದ್ದೇನು?**

ಇತ್ತ, ಕ್ಸಿ ಯೊಂದಿಗಿನ ಮಾತುಕತೆ ವೇಳೆ, ಇರಾನ್ ಯುದ್ಧದ ಕುರಿತು ಟ್ರಂಪ್ ಫಾಕ್ಸ್ ನ್ಯೂಸ್‌ಗೆ ನೀಡಿದ ಸಂದರ್ಶನದಲ್ಲಿ ಮಾತನಾಡಿ ಚೀನಾ ಅಧ್ಯಕ್ಷರು ಹೊರ್ಮುಜ್ ಜಲಸಂಧಿಯನ್ನು ತೆರೆಯಲು ಬಯಸುತ್ತಾರೆ. ಅದಕ್ಕಾಗಿ ಅವರು ಒಪ್ಪಂದವನ್ನು ಮಾಡಿಕೊಳ್ಳಲು ಬಯಸುತ್ತಿದ್ದಾರೆ. ಹಾಗಾಗಿಯೇ ಅವರು ನಾನು ಯಾವುದೇ ಸಹಾಯ ಮಾಡಲು ಸಾಧ್ಯವಾದರೆ, ನಾನು ಸಹಾಯ ಮಾಡಲು ಬಯಸುತ್ತೇನೆ ಎಂದಿದ್ದಾರೆ. ಇದರ ಜೊತೆಗೆ ತಮ್ಮ ದೇಶವು ಟೆಹ್ರಾನ್‌ಗೆ ಮಿಲಿಟರಿ ನೆರವು ನೀಡುವುದಿಲ್ಲ ಎಂದು ಭರವಸೆ ನೀಡಿದ್ದಾರೆ ಎಂದು ತಿಳಿಸಿದ್ದಾರೆ.

# ಉಗ್ರರು ನಡೆಸಿದ ಸರಣಿ ದಾಳಿಯಲ್ಲಿ 18 ಪಾಕ್ ಸೈನಿಕರು ಬಲಿ

**ಇಸ್ಲಾಮಾಬಾದ್:** ಪಾಕಿಸ್ತಾನದಲ್ಲಿ ಉಗ್ರರು ನಡೆಸಿದ ಸರಣಿ ದಾಳಿಗೆ 18 ಪಾಕಿಸ್ತಾನಿ ಸೈನಿಕರು ಬಲಿಯಾಗಿದ್ದಾರೆ. ಇಲ್ಲಿನ ವಾಯವ್ಯ ಪ್ರಾಂತ್ಯವಾದ ಖೈಬರ್ ಪಖ್ತುಂಖ್ವಾದಲ್ಲಿ ಉಗ್ರರು ನಡೆಸಿದ ಸರಣಿ ದಾಳಿಯಲ್ಲಿ ಕನಿಷ್ಠ 18 ಪಾಕಿಸ್ತಾನಿ ಭದ್ರತಾ ಸಿಬ್ಬಂದಿ ಮೃತಪಟ್ಟಿದ್ದಾರೆ. ನಿಷೇಧಿತ ಸಂಘಟನೆ ತೆಹ್ರೀಕ್-ಎ-ತಾಲಿಬಾನ್ ಪಾಕಿಸ್ತಾನ ಉಗ್ರರು ಸೇನಾ ಶಿಬಿರಗಳು ಮತ್ತು ಪೊಲೀಸ್ ಚೌಕಿಗಳನ್ನು ಗುರಿಯಾಗಿಸಿಕೊಂಡು ಈ ಭೀಕರ ದಾಳಿ ನಡೆಸಿದ್ದಾರೆ. ಬಜೌರ್ ಜಿಲ್ಲೆಯ ಸೇನಾ ಶಿಬಿರದ ಮೇಲೆ ಆತ್ಮಹತ್ಯಾ ದಾಳಿಗೆ ಪ್ರತಿಯಾಗಿ ಭದ್ರತಾ ಪಡೆಗಳು ನಡೆಸಿದ ಪ್ರತಿದಾಳಿಯಲ್ಲಿ ಕನಿಷ್ಠ 9 ಉಗ್ರರ ಸಾವನ್ನಪ್ಪಿದ್ದಾರೆ ಎನ್ನಲಾಗಿದೆ. ಪಾಕಿಸ್ತಾನದ ಬಜೌರ್ ಜಿಲ್ಲೆಯ ದಮಂಗಿ ಸ್ಕೌಟ್ಸ್ ಕ್ಯಾಂಪ್‌ನ ಮುಖ್ಯ ದ್ವಾರದ ಬಳಿ ಉಗ್ರನೊಬ್ಬ ಆತ್ಮಹತ್ಯಾ ಸ್ಫೋಟ ನಡೆಸುವ ಮೂಲಕ ದಾಳಿಯನ್ನು ಆರಂಭಿಸಿದ್ದಾನೆ. ಸ್ಫೋಟದ ಬೆನ್ನಲ್ಲೇ ಸುಮಾರು 20ಕ್ಕೂ ಹೆಚ್ಚು ಶಸ್ತ್ರಸಜ್ಜಿತ ಉಗ್ರರು ಶಿಬಿರಕ್ಕೆ ನುಗ್ಗಿ ಮನಬಂದಂತೆ ಗುಂಡಿನ ಮಳೆಗರೆದಿದ್ದಾರೆ. ಈ ಗುಂಡಿನ ಕಾಳಗದಲ್ಲಿ 14 ಸಿಬ್ಬಂದಿ ಹತರಾಗಿದ್ದಾರೆ. ಇದೇ ವೇಳೆ ಐನಾಯಿ ಕಿಲೆ ಮತ್ತು ಮಾಮಂಡ್ ಪ್ರದೇಶಗಳಲ್ಲಿ ನಡೆದ ಪ್ರತ್ಯೇಕ ದಾಳಿಗಳಲ್ಲಿ ನಾಲ್ವರು ಪೊಲೀಸರು ಮೃತಪಟ್ಟಿದ್ದಾರೆ ಎಂದು ಮೂಲಗಳು ತಿಳಿಸಿವೆ. ಸದ್ಯ ಘಟನಾ ಸ್ಥಳವನ್ನು ಸೇನೆಯು ಸುತ್ತುವರೆದಿದೆ. ಅಡಗಿಕೊಂಡಿರುವ ಭಯೋತ್ಪಾದಕರಿಗಾಗಿ ಶೋಧ ಕಾರ್ಯಾಚರಣೆ ಆರಂಭವಾಗಿದೆ. ಪಾಕಿಸ್ತಾನದಲ್ಲಿ ಆಗಾಗ್ಗೆ ನಡೆಯುತ್ತಿರುವ ಈ ದಾಳಿಗಳು ಅಲ್ಲಿನ ಭದ್ರತಾ ಲೋಪಗಳನ್ನು ಬಹಿರಂಗಪಡಿಸಿವೆ. ಆಗಾಗ್ಗೆ ಸಂಭವಿಸುವ ಸ್ಫೋಟಗಳಿಂದಾಗಿ ಸೇನೆ ಮತ್ತು ನಾಗರಿಕರು ತೀವ್ರ ಆತಂಕದಲ್ಲಿ ದಿನಕಳೆಯುವಂತಾಗಿದೆ. ಕಳೆದ ಮಂಗಳವಾರವಷ್ಟೇ ಖೈಬರ್ ಪಖ್ತುಂಖ್ವಾದ ನೌರಂಗ್ ಬಜಾರ್‌ನಲ್ಲಿ ಸಂಭವಿಸಿದ ಬಾಂಬ್ ಸ್ಫೋಟದಲ್ಲಿ 9 ಮಂದಿ ಸಾವನ್ನಪ್ಪಿದ್ದರು. ಇತ್ತೀಚಿನ ದಿನಗಳಲ್ಲಿ ಪಾಕಿಸ್ತಾನದ ವಾಯವ್ಯ ಭಾಗದಲ್ಲಿ ಉಗ್ರರ ಚಟುವಟಿಕೆಗಳು ಗಣನೀಯವಾಗಿ ಹೆಚ್ಚಾಗಿದ್ದು, ಜನರಲ್ಲಿ ಆತಂಕ ಮನೆ ಮಾಡಿದೆ. ಸದ್ಯ ಘಟನಾ ಸ್ಥಳಗಳಲ್ಲಿ ಶೋಧ ಕಾರ್ಯಾಚರಣೆ ಮುಂದುವರಿದಿದ್ದು, ಸಾವಿನ ಸಂಖ್ಯೆ ಇನ್ನು ಹೆಚ್ಚಾಗುವ ಸಾಧ್ಯತೆಯಿದೆ ಎಂದು ಭದ್ರತಾ ಪಡೆ ಅಧಿಕಾರಿಗಳು ತಿಳಿಸಿದ್ದಾರೆ.



# ಬಾಯ್ತೆರೆದ ಹವಾಯಿ ಕಿಲೌಯಾ ಜ್ವಾಲಾಮುಖಿ


## ಸಾವಿರ ಅಡಿ ಮೇಲೆ ಚಿಮ್ಮಿದ ಲಾವಾ ರೂಪದ ಭೂತಾಯಿ ಕೋಪಾಗ್ನಿ!

**ಹವಾಯಿ:** ಭೂ ಇತಿಹಾಸದಲ್ಲಿ ಸಾಸಿವೆ ಕಾಳಷ್ಟು ಪಾಲು ಪಡೆದಿರುವ ಮಾನವರು, ತಮ್ಮ ಪರಮಾಣು ಸಾಮರ್ಥ್ಯದ ಕಾರಣಕ್ಕೆ ಇಡೀ ಭೂಮಂಡಲವನ್ನೇ ಸುಟ್ಟು ಭಸ್ಮ ಮಾಡುವುದಾಗಿ ಜಂಭ ಕೊಚ್ಚಿಕೊಳ್ಳುತ್ತಾರೆ. ಇನ್ನೂ ಕೆಲವರಂತೂ ಒಂದಿಡೀ ನಾಗರೀಕತೆಯನ್ನೇ ಸರ್ವನಾಶ ಮಾಡುವುದಾಗಿ ಹೇಳಿಕೆ ನೀಡುತ್ತಾರೆ. ವಿನಾಶ ಕಾಲೇ ವಿಪರೀತ ಬುದ್ಧಿ ಎನ್ನುವುದು ಬಹುಶಃ ಇದಕ್ಕೇ ಇರಬೇಕು. ತಲೆಯ ಮೇಲೊಂದು ಅಸಂಖ್ಯಾತ ಪರಮಾಣು ಬಾಂಬ್‌ಗಳಿಗೆ ಸಮನಾದ ಸುಡುವ ಸೂರ್ಯ, ಪಾದದಡಿ ಕೊತ ಕೊತ ಕುದಿಯುತ್ತಿರುವ ಭೂತಾಯಿಯ ಒಡಲಾಳ. ಇಷ್ಟಿದ್ದರೂ ಸರ್ವಸ್ವವನ್ನೂ ನಾಶ ಮಾಡುವ ಬಯಕೆ ಈ ಹುಲುಮಾನವರಿಗೆ. ಒಂದು ವೇಳೆ ಸೂರ್ಯ ಸಿಡಿದರೆ ಏನಾಗುತ್ತದೆ ಎಂದು ತಿಳಿಯಲೂ ಸಮಯವಿಲ್ಲದಷ್ಟು ಬೇಗ ಇಡೀ ಮಾನವ ಜನಾಂಗ ಸರ್ವನಾಶವಾಗುತ್ತದೆ. ಒಂದು ವೇಳೆ ಭೂತಾಯಿ ಬಾಯ್ತರೆದರೆ, ಅಮ್ಮಾ ಎಂದೂ ಕೂಗುವುಷ್ಟು ಸಮಯದಲ್ಲಿ ಜೀವ ಹೋಗಿರುತ್ತದೆ.

- ಹವಾಯಿ ಕಿಲೌಯಾ ಜ್ವಾಲಾಮುಖಿ ಸ್ಫೋಟ.
- 1 ಸಾವಿರ ಅಡಿ ಮೇಲಕ್ಕೆ ಚಿಮ್ಮಿದ ಬಿಸಿ ಲಾವಾ .
- ಜ್ವಾಲಾಮುಖಿ ಕುಳಿಯಿಂದ 43ನೇ ಸರಣಿ ಸ್ಫೋಟ.

ಸಾಕ್ಷಿ ಬೇಕಾ? ಈಗಷ್ಟೇ ಸ್ಫೋಟಗೊಂಡಿರುವ ಹವಾಯಿ ದ್ವೀಪದ ಕಿಲೌಯಾ ಜ್ವಾಲಾಮುಖಿಯ ದೃಶ್ಯಗಳನ್ನೊಮ್ಮೆ ನೋಡಿ. ಭೂತಾಯಿಯ ಕೋಪಾಗ್ನಿ ಎಂತದ್ದು ಎಂದು ತಿಳಿಯುತ್ತದೆ.

ಹೌದು, ಹವಾಯಿ ದ್ವೀಪದಲ್ಲಿರುವ ಕಿಲೌಯಾ ಜ್ವಾಲಾಮುಖಿ ಮತ್ತೆ ಸ್ಫೋಟಗೊಂಡಿದ್ದು, ಸುಮಾರು 1,000 ಅಡಿ (300 ಮೀಟರ್) ಎತ್ತರದ ಲಾವಾ ಕಾರಂಜಿಗಳನ್ನು ಗಾಳಿಯಲ್ಲಿ ಚಿಮ್ಮಿಸಿದೆ. ಇಲ್ಲಿನ ಬಿಗ್ ಐಲ್ಯಾಂಡ್‌ನಲ್ಲಿರುವ ಕಿಲೌಯಾ ಶಿಖರದಲ್ಲಿ ಜ್ವಾಲಾಮುಖಿ ಸ್ಫೋಟಗೊಂಡಿದ್ದು, ಡಿಸೆಂಬರ್ 2024ರಲ್ಲಿ ಆರಂಭವಾದ ಸರಣಿಯ ಸ್ಫೋಟದ 43ನೇ ಸ್ಫೋಟ ಇದಾಗಿದೆ ಎಂದು ಈ ಜ್ವಾಲಾಮುಖಿಯನ್ನು ಅಧ್ಯಯನ ಮಾಡುತ್ತಿರುವ ವಿಜ್ಞಾನಿಗಳು ತಿಳಿಸಿದ್ದಾರೆ. 2020ರಲ್ಲಿ



ಇಂಡೋನೇಷ್ಯಾದಲ್ಲಿ ಜ್ವಾಲಾಮುಖಿ ಸ್ಫೋಟ ಸಂಭವಿಸಿತ್ತು.

ಹವಾಯಿ ಜ್ವಾಲಾಮುಖಿಗಳ ರಾಷ್ಟ್ರೀಯ ಉದ್ಯಾನವನದೊಳಗಿನ ಶಿಖರದ ಕುಳಿಯ ಮೇಲೆ ಲಾವಾ ಕಾರಂಜಿಗಳು ಎತ್ತರಕ್ಕೆ ಹಾರಿದ್ದು, ಕರಗಿದ ಬಂಡೆ, ಜ್ವಾಲಾಮುಖಿ ಶಿಲಾಖಂಡರಾಶಿಗಳ ನಾಟಕೀಯ ಗರಿಗಳು ಸ್ಪಷ್ಟವಾಗಿ ಕಂಡು ಬರುತ್ತಿವೆ. ಜ್ವಾಲಾಮುಖಿ ಸ್ಫೋಟದ ಅದ್ಭುತ ಪ್ರದರ್ಶನದ ಹೊರತಾಗಿಯೂ, ಲಾವಾ ಕುಳಿಯೊಳಗೆ ಸೀಮಿತವಾಗಿದೆ ಮತ್ತು ಪ್ರಸ್ತುತ ಹತ್ತಿರದ ಮನೆಗಳು ಅಥವಾ ಮೂಲಸೌಕರ್ಯಕ್ಕೆ ಯಾವುದೇ ಬೆದರಿಕೆ ಹಾಕುತ್ತಿಲ್ಲ ಎಂದು ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

ಜ್ವಾಲಾಮುಖಿಯ ತುಣುಕುಗಳು ಮತ್ತು ಟೆಫ್ರಾ ಎಂದು ಕರೆಯಲ್ಪಡುವ ಬೂದಿ ಇಡೀ ಪ್ರದೇಶವನ್ನು ಆವರಿಸಿರುವುದರಿಂದ, ಅಧಿಕಾರಿಗಳು ಶಿಖರದ ಸಮೀಪವಿರುವ ಭಾಗಗಳನ್ನು ಮತ್ತು ಹೆದ್ದಾರಿ 11ರ ಕೆಲವು ಭಾಗಗಳನ್ನು ತಾತ್ಕಾಲಿಕವಾಗಿ ಮುಚ್ಚಿದ್ದಾರೆ. ಈ ಪ್ರದೇಶದ ಸಮೀಪವಿರುವ ಜನವಸತಿ ಪ್ರದೇಶದಲ್ಲಿ ಜ್ವಾಲಾಮುಖಿ ಅವಶೇಷಗಳ ಕೆಲವು ತುಣುಕುಗಳು ಪತ್ತೆಯಾಗಿವೆ. ಇದು ಸುರಕ್ಷತಾ ಎಚ್ಚರಿಕೆಗಳು ಮತ್ತು ರಸ್ತೆ ನಿರ್ಬಂಧಗಳನ್ನು ಪ್ರೇರೇಪಿಸಿದೆ. 2025ರಲ್ಲಿ ಇಥಿಯೋಪಿಯಾ ಹೈಲಿ ಗುಬ್ಬಿ ಜ್ವಾಲಾಮುಖಿ ಸ್ಫೋಟ ಸಂಭವಿಸಿದ್ದನ್ನು ಇಲ್ಲಿ ಸ್ಮರಿಸಬಹುದು. ಹವಾಯಿ ಕೌಂಟಿಯ ಅಧಿಕಾರಿಗಳು ಮುನ್ನೆಚ್ಚರಿಕೆಯಾಗಿ ಆಶ್ರಯ ತಾಣಗಳನ್ನು ತೆರೆದರು, ಆದಾಗ್ಯೂ, ಗಾಯಗಳು ಅಥವಾ ರಚನಾತ್ಮಕ ಹಾನಿಯ ಬಗ್ಗೆ ತಕ್ಷಣದ ವರದಿಗಳು ಬಂದಿಲ್ಲ. ಏತನ್ಮಧ್ಯೆ, ರಾಷ್ಟ್ರೀಯ ಹವಾಮಾನ ಸೇವೆಯು ಬೂದಿ ಬೀಳುವ ಎಚ್ಚರಿಕೆಯನ್ನು ನೀಡಿತು, ಜ್ವಾಲಾಮುಖಿ ಬೂದಿ ಕಣ್ಣುಗಳು, ಚರ್ಮ, ಉಸಿರಾಟದ ವ್ಯವಸ್ಥೆಯನ್ನು ಕೆರಳಿಸಬಹುದು ಎಂದು ನಿವಾಸಿಗಳಿಗೆ ಸಲಹೆ ನೀಡಿತು. ಅಮೆರಿಕದ ಭೂವೈಜ್ಞಾನಿಕ ಸಮೀಕ್ಷೆ ವಿಜ್ಞಾನಿಗಳು ಹೇಳುವಂತೆ, ಕಿಲೌಯಾ ಜ್ವಾಲಾಮುಖಿ ಸ್ಫೋಟ ಹಲವು ಗಂಟೆಗಳ ಪ್ರಕ್ರಿಯೆಯಾಗಿದ್ದು, ಇದು ಪ್ರಸ್ತುತ ಸ್ಫೋಟ ಚಕ್ರದಲ್ಲಿ ಕಂಡುಬರುವ ಮಾದರಿಯ ಭಾಗವಾಗಿದೆ. ಇದರಲ್ಲಿ ಲಾವಾ ಕಾರಂಜಿಯ ಸ್ಫೋಟಗಳು ಮುಗಿಲೆತ್ತರಕ್ಕೆ ಚಿಮ್ಮುತ್ತವೆ. 2022ರಲ್ಲಿ ಜಪಾನ್ ಸುಕುರಾಜಿಮಾ ಜ್ವಾಲಾಮುಖಿ ಸ್ಫೋಟ ಸಂಭವಿಸಿದ್ದನ್ನು ಇಲ್ಲಿ ಉಲ್ಲೇಖಿಸಬಹುದು. ವಿಶ್ವದ ಅತ್ಯಂತ ಸಕ್ರಿಯ ಜ್ವಾಲಾಮುಖಿಗಳಲ್ಲಿ ಒಂದಾದ ಕಿಲೌಯಾ, ಒಂದು ವರ್ಷಕ್ಕೂ ಹೆಚ್ಚು ಕಾಲದಿಂದ ಸರಣಿ ಸ್ಫೋಟಗಳಿಗೆ ಸಾಕ್ಷಿಯಾಗುತ್ತಿದೆ. ಪ್ರಸ್ತುತ ಚಟುವಟಿಕೆಯು ರಾಷ್ಟ್ರೀಯ ಉದ್ಯಾನವನದೊಳಗೆ ಹೆಚ್ಚಾಗಿ ಸೀಮಿತವಾಗಿದ್ದರೂ, ಯಾವುದೇ ಭಿನ್ನ ಬದಲಾವಣೆಗಳನ್ನು ವಿಜ್ಞಾನಿಗಳು ಸೂಕ್ಷ್ಮವಾಗಿ ಗಮನಿಸುತ್ತಿದ್ದಾರೆ.


**ಜೀವರಾಶಿಗಳಿಗೆ ಭಾರೀ ಅನಾಹುತ**

**ಮೇಲ್ಪದರದಲ್ಲಿ ಭೂಮಿ ಅದೆಷ್ಟು ಸುಂದರವಾಗಿದೆಯೋ ಅದರ ಒಡಲಾಳ ಅಷ್ಟೇ ಭೀಕರವಾಗಿದೆ. ಶತಕೋಟಿ ವರ್ಷಗಳಿಂದ ಕುದಿಯುತ್ತಿರುವ ಲಾವಾ ಈ ಭೂಮಿಯನ್ನು ಇನ್ನೂ ಜೀವಂತವಾಗಿರಿಸಿದೆ. ಆದರೆ ಈ ಲಾವಾ ಜ್ವಾಲಾಮುಖಿ ರೂಪದಲ್ಲಿ ಭೂಮೇಲ್ಮೈಯಲ್ಲಿ ಸ್ಫೋಟಿಸಿದಾಗ, ಇಲ್ಲಿ ಬದುಕುವ ಸಕಲ ಜೀವರಾಶಿಗಳಿಗೆ ಭಾರೀ ಅನಾಹುತಗಳನ್ನು ಸೃಷ್ಟಿಸುತ್ತದೆ. ಅದರಂತೆ ಹವಾಯಿ ದ್ವೀಪದಲ್ಲಿರುವ ಕಿಲೌಯಾ ಜ್ವಾಲಾಮುಖಿ ಸ್ಫೋಟಗೊಂಡಿದ್ದು, ಇದರ ಬೂದಿ, ಕಣಗಳು ಸುಮಾರು 1,000 ಅಡಿ ಮೇಲಕ್ಕೆ ಚಿಮ್ಮಿವೆ.**

# ಚಂಡಮಾರುತ, ಭಾರಿ ಮಳೆ ಮೃತರ ಸಂಖ್ಯೆ 142ಕ್ಕೆ ಏರಿಕೆ

**ಲಖನೌ:** ಉತ್ತರ ಪ್ರದೇಶದಾದ್ಯಂತ ಸಂಭವಿಸಿದ ಭೀಕರ ಚಂಡಮಾರುತ ಮತ್ತು ಮಳೆ ಸಂಬಂಧಿತ ಅವಘಡಗಳಲ್ಲಿ ಮೃತಪಟ್ಟವರ ಸಂಖ್ಯೆ 142ಕ್ಕೆ ಏರಿಕೆಯಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ. ರಾಜ್ಯದ ಪೂರ್ವ ಮತ್ತು ಮಧ್ಯ ಭಾಗದ ಜಿಲ್ಲೆಗಳಲ್ಲಿ ಚಂಡಮಾರುತ ಅಪ್ಪಳಿಸಿತ್ತು.

ಇದರಿಂದಾಗಿ ಅಪಾರ ಪ್ರಮಾಣದ ಬೆಳೆ ನಷ್ಟವಾಗಿದ್ದು, ಜಾನುವಾರುಗಳ ಸಾವಿಗೂ ಕಾರಣವಾಗಿದೆ. ವಾರಾಣಸಿ, ಪ್ರಯಾಗ್‌ರಾಜ್ ಮತ್ತು ಕಾನ್ಪುರ ಜಿಲ್ಲೆಗಳು ಅತಿ ಹೆಚ್ಚು ಹಾನಿಗೊಳಗಾಗಿದ್ದು, ಹೆಚ್ಚಿನ ಸಾವುನೋವು ವರದಿಯಾಗಿದೆ. ಗೋಡೆ ಕುಸಿತದಂತಹ ಘಟನೆಗಳಿಂದಲೇ ಹೆಚ್ಚಿನ ಜನರು ಪ್ರಾಣ ಕಳೆದುಕೊಂಡಿದ್ದಾರೆ ಎಂದು ತಿಳಿದುಬಂದಿದೆ. ರಾಜ್ಯ ಸರ್ಕಾರವು ಈಗಾಗಲೇ ಸಂಕಷ್ಟ ಪೀಡಿತ ಪ್ರದೇಶಗಳಲ್ಲಿ ಪರಿಹಾರ ಕಾರ್ಯಾಚರಣೆ ಪ್ರಾರಂಭಿಸಿದೆ. ಆಸ್ತಿಪಾಸ್ತಿ ಹಾನಿ, ಜಾನುವಾರುಗಳ ನಷ್ಟವನ್ನು ಅಂದಾಜು ಮಾಡಲು ಅಧಿಕಾರಿಗಳಿಗೆ ಸೂಚಿಸಲಾಗಿದೆ.



**ಪರಿಹಾರ ಘೋಷಣೆ...:** ಮೃತರ ಕುಟುಂಬದವರಿಗೆ ತಲಾ 4 ಲಕ್ಷ ತುರ್ತು ಪರಿಹಾರವನ್ನು ಸರ್ಕಾರ ಘೋಷಿಸಿದೆ. ಅಲ್ಲದೆ, ಸಂಕಷ್ಟಕ್ಕೊಳಗಾದ ರೈತರಿಗೆ ಮತ್ತು ಇತರರಿಗೆ ತಕ್ಷಣ ನೆರವು ನೀಡಲು ಅಧಿಕಾರಿಗಳಿಗೆ ಉತ್ತರಪ್ರದೇಶ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ ನಿರ್ದೇಶನ ನೀಡಿದ್ದಾರೆ.

ಮಳೆಯಿಂದ ಶೇಕಡ 33ಕ್ಕಿಂತ ಹೆಚ್ಚಿನ ಪ್ರಮಾಣದ ಬೆಳೆ ಹಾನಿಗೊಳಗಾದ ರೈತರಿಗೆ ಪರಿಹಾರ ನೀಡಲಾಗುವುದು. ಜಾನುವಾರುಗಳನ್ನು ಕಳೆದುಕೊಂಡವರಿಗೂ ಆರ್ಥಿಕ ನೆರವು ಒದಗಿಸಲಾಗುವುದು ಎಂದೂ ಯೋಗಿ ತಿಳಿಸಿದ್ದಾರೆ.

# ಅದಾನಿ ವಿರುದ್ಧದ ಆರೋಪ ಕೈಬಿಡುವ ಸಾಧ್ಯತೆ

**ರಾಯಿಟರ್ಸ್:** ಭಾರತದ ಕೋಟ್ಯಧೀಶ ಉದ್ಯಮಿ ಗೌತಮ ಅದಾನಿ ಅವರ ವಿರುದ್ಧದ ಭ್ರಷ್ಟಾಚಾರ ಆರೋಪಗಳನ್ನು ಕೈಬಿಡಲು ಅಮೆರಿಕದ ನ್ಯಾಯಾಂಗ ಇಲಾಖೆ ಮುಂದಾಗಿದೆ. ಅದಾನಿ ವಿರುದ್ಧದ ಆರೋಪಗಳನ್ನು ಕೈಬಿಡುವ ಕುರಿತಂತೆ ನ್ಯಾಯಾಂಗ ಇಲಾಖೆಯು ಈ ವಾರ ಘೋಷಣೆ ಮಾಡಬಹುದು' ಎಂದು ಮೂಲಗಳನ್ನು ಉಲ್ಲೇಖಿಸಿ ಬ್ಲೂಮ್‌ಬರ್ಗ್ ವರದಿ ಮಾಡಿದೆ.



ಅದಾನಿ ಅವರು ರಾಬರ್ಟ್ ಜೆ.ಗಿಯುಫ್ರಾ, ಜೂನಿಯರ್ ನೇತೃತ್ವದ ವಕೀಲರ ತಂಡವನ್ನು ಹೊಸದಾಗಿ ನೇಮಕ ಮಾಡಿಕೊಂಡ ಬೆನ್ನಲ್ಲೇ ಈ ಬೆಳವಣಿಗೆ ನಡೆದಿದೆ ಎಂದು ನ್ಯೂಯಾರ್ಕ್ ಟೈಮ್ಸ್ ವರದಿ ಮಾಡಿದೆ. ರಾಬರ್ಟ್ ಅವರು ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ಪರ ವಕೀಲರಲ್ಲಿ ಒಬ್ಬರಾಗಿದ್ದಾರೆ.

ಭಾರತದ ಸರ್ಕಾರಿ ಸ್ವಾಮ್ಯದ ವಿದ್ಯುತ್ ಸರಬರಾಜು ಕಂಪನಿಗಳಿಗೆ ಸೌರ ವಿದ್ಯುತ್ ಪೂರೈಸುವ ಯೋಜನೆಯನ್ನು ಕಾರ್ಯರೂಪಕ್ಕೆ ತರುವುದಕ್ಕಾಗಿ ಅಮೆರಿಕದ ಬ್ಯಾಂಕ್ ಅಂತರ ರಾಷ್ಟ್ರೀಯ ಸಂಸ್ಥೆಗಳಿಂದ ಅದಾನಿ ಸಮೂಹದ ಅದಾನಿ ಗ್ರೀನ್ ಎನರ್ಜಿ ಲಿ. 2021-2024ರ ಮಧ್ಯೆ 300 ಕೋಟಿ ಡಾಲರ್‌ಗೂ ಹೆಚ್ಚು ಬಂಡವಾಳ ಸಂಗ್ರಹಿಸಿದ್ದು, ಇದರಲ್ಲಿ 25 ಕೋಟಿ ಡಾಲರ್‌ಮೊತ್ತವನ್ನು ಭಾರತದ ಸರ್ಕಾರಿ ಅಧಿಕಾರಿಗಳಿಗೆ ಲಂಚ ನೀಡಿದ, ನೀಡುವ ಉದ್ದೇಶಕ್ಕೆ ಬಳಸಿಕೊಳ್ಳಲಾಗಿದೆ ಎಂದು ಆರೋಪಿಸಲಾಗಿದೆ. ನ್ಯೂಯಾರ್ಕ್‌ನ ಪೂರ್ವ ಜಿಲ್ಲೆಯ ಜಿಲ್ಲಾ ನ್ಯಾಯಾಲಯದಲ್ಲಿ ಸಲ್ಲಿಸಲಾದ ಆರೋಪಪಟ್ಟಿಯಲ್ಲಿ ಗೌತಮ್ ಅದಾನಿ, ಇತರರ ಹೆಸರು ಉಲ್ಲೇಖಿಸಲಾಗಿದೆ.

# ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಅಕ್ರಮ ಮತದಾನದ ಶಂಕೆ: 25 ವಿದೇಶಿಯರ ಬಂಧನ

**ಚೆನ್ನೈ:** ತಮಿಳುನಾಡು ವಿಧಾನಸಭಾ ಚುನಾವಣೆಯಲ್ಲಿ ಅಕ್ರಮವಾಗಿ ಮತ ಚಲಾಯಿಸಿದ ಆರೋಪದ ಮೇಲೆ ಶ್ರೀಲಂಕಾ, ಬ್ರಿಟನ್, ಇಂಡೋನೇಷ್ಯಾ ಮತ್ತು ಕೆನಡಾ ಸೇರಿದಂತೆ ವಿವಿಧ ದೇಶಗಳ ಸುಮಾರು 25 ವಿದೇಶಿ ಪ್ರಜೆಗಳನ್ನು ಚೆನ್ನೈ ಮತ್ತು ಮಧುರೈ ವಿಮಾನ ನಿಲ್ದಾಣಗಳಲ್ಲಿ ಬಂಧಿಸಲಾಗಿದೆ.

ವಿದೇಶಿ ಪಾಸ್‌ಪೋರ್ಟ್ ಹೊಂದಿದ್ದ ವ್ಯಕ್ತಿಗಳು ಪ್ರಯಾಣಕ್ಕಾಗಿ ವಿಮಾನ ನಿಲ್ದಾಣಕ್ಕೆ ಬಂದಾಗ, ಅವರ ಎಡಗೈ ತೋರು ಬೆರಳಿನ ಮೇಲಿದ್ದ ಅಳಿಸಲಾಗದ ಶಾಯಿಯನ್ನು ಗಮನಿಸಿದ ವಲಸೆ ಅಧಿಕಾರಿಗಳು ಅವರನ್ನು ತಡೆದು ಪೊಲೀಸರಿಗೆ ಒಪ್ಪಿಸಿದ್ದಾರೆ.

ಬಂಧಿತರ ವಿರುದ್ಧ ಭಾರತೀಯ ನ್ಯಾಯ ಸಂಹಿತೆ 2023, ಜನಪ್ರತಿನಿಧಿ ಕಾಯ್ದೆ 1950 ಮತ್ತು ಇತರ ಸಂಬಂಧಿತ ಕಾನೂನುಗಳ ಅಡಿಯಲ್ಲಿ ಪ್ರಕರಣ ದಾಖಲಿಸಲಾಗಿದೆ. ಪ್ರಾಥಮಿಕ ತನಿಖೆಯ ಪ್ರಕಾರ, ಶಂಕಿತರಲ್ಲಿ ಹೆಚ್ಚಿನವರು ಶ್ರೀಲಂಕಾ ಮೂಲದವರಾಗಿದ್ದಾರೆ ಎಂದು ಪಿಟಿಐ ವರದಿ ಮಾಡಿದೆ. ಇವರು ಭಾರತದ ಪೌರತ್ವ ಹೊಂದಿಲ್ಲದಿದ್ದರೂ, ರಾಜ್ಯದ ವಿವಿಧ ಭಾಗಗಳಲ್ಲಿ ನೆಲೆಸಿ ಅಕ್ರಮವಾಗಿ ಮತದಾನ ಮಾಡಿದ್ದಾರೆ ಎಂದು ಪೊಲೀಸ್ ಪ್ರಕಟಣೆ ತಿಳಿಸಿದೆ.



ಚುನಾವಣಾ ಸಮಯದಲ್ಲಿ ಭಾರತಕ್ಕೆ ಬಂದಿದ್ದ ಇನ್ನೂ ಅನೇಕ ವಿದೇಶಿ ಪ್ರಜೆಗಳು ಅಕ್ರಮವಾಗಿ ಮತದಾನ ಮಾಡಿರಬಹುದು ಎಂದು ಪೊಲೀಸರು ಅನುಮಾನ ವ್ಯಕ್ತಪಡಿಸಿದ್ದಾರೆ. ಮತದಾನದ ನಂತರ ವಿದೇಶಿಯರು ದೇಶ ತೊರೆಯಲು ಯತ್ನಿಸುತ್ತಿರುವ ಬಗ್ಗೆ ಗುಪ್ತಚರ ಮಾಹಿತಿ ಲಭ್ಯವಾದ ಹಿನ್ನೆಲೆಯಲ್ಲಿ ಚೆನ್ನೈ, ಮಧುರೈ ಸೇರಿದಂತೆ ಎಲ್ಲಾ ವಿಮಾನ ನಿಲ್ದಾಣಗಳಲ್ಲಿ ಅಧಿಕಾರಿಗಳಿಗೆ ಎಚ್ಚರಿಕೆ ನೀಡಲಾಗಿತ್ತು. ಈ ಪೈಕಿ ಹೆಚ್ಚಿನವರು ಚೆನ್ನೈನಲ್ಲಿ ಸಿಕ್ಕಿಬಿದ್ದಿದ್ದಾರೆ. ಕೇಂದ್ರಾಡಳಿತ ಪ್ರದೇಶ ಪುದುಚೇರಿಯಲ್ಲಿ ಇಬ್ಬರು ವಿದೇಶಿಯರು ಮತದಾನ ಮಾಡಿರುವುದು ಪತ್ತೆಯಾಗಿದೆ.

## ಜನರ ವಿಭಜಿಸುವ ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಬೇಕು: ಉದಯನಿಧಿ



**ತಮಿಳುನಾಡು ವಿಧಾನಸಭೆಯಲ್ಲಿ ಸನಾತನ ಧರ್ಮ ನಾಶಗೊಳಿಸಬೇಕು ಎಂಬ ವಿವಾದಾತ್ಮಕ ಹೇಳಿಕೆ ಕುರಿತು ಡಿಎಂಕೆ ನಾಯಕ ಉದಯನಿಧಿ ಸ್ಟಾಲಿನ್ ಸ್ಪಷ್ಟನೆ ನೀಡಿದ್ದಾರೆ. ಜನರನ್ನು ಮೇಲ್ಜಾತಿ, ಕೆಳಜಾತಿಗಳೆಂದು ವಿಭಜಿಸುವ ಜಾತಿ ಪದ್ಧತಿಯನ್ನು ನಿರ್ಮೂಲನೆ ಮಾಡಬೇಕು ಎಂಬ ಉದ್ದೇಶವನ್ನಷ್ಟೇ ಹೊಂದಿದ್ದೆ ಎಂದು ಪ್ರತಿಕ್ರಿಯಿಸಿದ್ದಾರೆ. ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡುವುದು ಅಂದರೆ ಯಾರೂ ದೇವಸ್ಥಾನಕ್ಕೆ ಹೋಗಬಾರದು ಎಂದಲ್ಲ. ದೇವಾಲಯದಲ್ಲಿ ಮಾತ್ರವಲ್ಲದೆ ಸಮಾಜದಲ್ಲಿಯೂ ಎಲ್ಲರಿಗೂ ಸಮಾನ ಹಕ್ಕುಗಳಿರಬೇಕು ಎಂದು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ ಪೋಸ್ಟ್ ಮಾಡಿದ್ದಾರೆ. ತಮಿಳುನಾಡು ವಿಧಾನಸಭೆಯಲ್ಲಿ ಭಾಷಣ ವೇಳೆ ಜನರನ್ನು ವಿಭಜಿಸುವ ಜಾತಿ ವ್ಯವಸ್ಥೆಯನ್ನು ನಿರ್ಮೂಲನೆ ಮಾಡಬೇಕು ಎಂದು ಹೇಳಿದ್ದೆ. ಕೆಲವರು ನನ್ನನ್ನು ಟೀಕಿಸಿದ್ದಾರೆ. ಆದರೆ ನಾನು ಭಯಪಡುವ ವ್ಯಕ್ತಿಯಲ್ಲ. ಹೋರಾಟದಿಂದಲೇ ದ್ರಾವಿಡ ಚಳವಳಿ ಹೊರಹೊಮ್ಮಿದೆ. ಹಾಗಾಗಿ ಈ ಕುರಿತು ವಿವರಣೆ ನೀಡಲು ಬಯಸುತ್ತೇನೆ' ಎಂದಿದ್ದಾರೆ.**

## ಮಿನಿ ನ್ಯೂಸ್

### ಮುಂದಿನ ವರ್ಷದಿಂದ ಕಂಪ್ಯೂಟರ್ ಆಧಾರಿತ ನೀಟ್ ಪರೀಕ್ಷೆ

**ನವದೆಹಲಿ:** ಮುಂದಿನ ವರ್ಷದಿಂದ ಕಂಪ್ಯೂಟರ್ ಆಧಾರಿತ ನೀಟ್ ಪರೀಕ್ಷೆ ನಡೆಸಲಾಗುವುದು ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ಘೋಷಿಸಿದ್ದಾರೆ. ನೀಟ್ ಪರೀಕ್ಷೆ ಪೇಪರ್‌ಗಳು ಸೋರಿಕೆಯಾದ ಹಿನ್ನೆಲೆಯಲ್ಲಿ ಮತ್ತೆ ನೀಟ್ ಪರೀಕ್ಷೆ ನಡೆಸುವ ದಿನಾಂಕ ಘೋಷಣೆ ಮಾಡಿದ ನಂತರ ಮಾತನಾಡಿದ ಅವರು, ಪತ್ರಿಕೆ ಸೋರಿಕೆಗೆ ಕಾರಣರಾದವರ ವಿರುದ್ಧ ಬಲವಾದ ಕ್ರಮ ಕೈಗೊಳ್ಳುವುದಾಗಿ ಪ್ರತಿಜ್ಞೆ ಮಾಡಿದರು ಮತ್ತು ಈ ತಿಂಗಳ ಪರೀಕ್ಷೆಯನ್ನು ರದ್ದುಗೊಳಿಸುವ ನಿರ್ಧಾರವನ್ನು ಪ್ರತಿಭಾನ್ವಿತ ವಿದ್ಯಾರ್ಥಿಗಳ ಹಿತದೃಷ್ಟಿಯಿಂದ ತೆಗೆದುಕೊಳ್ಳಲಾಗಿದೆ ಎಂದು ಹೇಳಿದರು.

ಕೆಲವು ಸಮಸ್ಯೆಗಳು ಗಮನಕ್ಕೆ ಬಂದಿವೆ ಮತ್ತು ಸಂಪೂರ್ಣವಾಗಿ ತನಿಖೆ ಮಾಡಲಾಗುತ್ತದೆ ಎಂದು ಅವರು ಹೇಳಿದರು. ಮೇ 3 ರ ಪರೀಕ್ಷೆಯನ್ನು ರದ್ದುಗೊಳಿಸುವುದಾಗಿ ಘೋಷಿಸಿದ ನಂತರ ಕಾನೂನು ಜಾರಿ ಸಂಸ್ಥೆಗಳು ಹಂಚಿಕೊಂಡ ಸಂಶೋಧನೆಗಳೊಂದಿಗೆ ಸ್ವೀಕರಿಸಿದ ಇನ್‌ಪುಟ್‌ಗಳನ್ನು ಗಮನದಲ್ಲಿಟ್ಟುಕೊಂಡು ಈ ನಿರ್ಧಾರ ತೆಗೆದುಕೊಳ್ಳಲಾಗಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

### ಕೇರಳಂ ಸಿಎಂ ಆಯ್ಕೆ ವಿಚಾರ : ರಾಹುಲ್ ಎದುರು ಮೇಲುಗೈ ಸಾಧಿಸಿದರಾ ಪ್ರಿಯಾಂಕಾ

**ನವದೆಹಲಿ:** ಕೇರಳಂ ಮುಖ್ಯಮಂತ್ರಿ ಆಯ್ಕೆಯಲ್ಲಿ ತಮ್ಮನ ವಿರುದ್ಧ ಅಕ್ಕ ಗೆದ್ದಿದ್ದಾರೆಂದು ದೇಶದಾದ್ಯಂತ ಮಾತುಗಳು ಹರಿದಾಡುತ್ತಿವೆ. ಕಳೆದ 10 ದಿನಗಳಿಂದ ಕೇರಳಂ ಮುಖ್ಯಮಂತ್ರಿ ಆಯ್ಕೆ ಕುರಿತು ಸಾಕಷ್ಟು ಹೈಡ್ರಾಮಾಗಳು ನಡೆದ ನಂತರ ಕೇರಳ ಸಿಎಂ ಆಗಿ ವಿ ಡಿ ಸತೀಶನ್ ಅವರನ್ನು ಆಯ್ಕೆ ಮಾಡಿ ಘೋಷಿಸಿರುವುದರ ಹಿಂದೆ ಪ್ರಿಯಾಂಕ ವಾದ್ರಾರವರ ಹಠ ಕಾರಣ ಎಂದು ಹೇಳಲಾಗುತ್ತಿದೆ. ಹೈಕಮಾಂಡ್‌ನ ನಾಯಕರ ಆಪ್ತರಾಗಿದ್ದ ವೇಣುಗೋಪಾಲ್ ಪರ ಹಲವಾರು ಶಾಸಕರು ಇದ್ದರೂ ಕೂಡ ಅದನ್ನು ಲೆಕ್ಕಕ್ಕೆ ಪಡೆಯದೇ ಸಂಸದೆಯೂ ಆಗಿರುವ ಪ್ರಿಯಾಂಕ ವಾದ್ರಾ, ಒಂದೇ ಮಾತಿನಲ್ಲಿ ಸತೀಶನ್ ಪರ ಸಿಎಂ ಆಗಬೇಕೆಂದು ಪಟ್ಟು ಹಿಡಿದಿದ್ದರಂತೆ. ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ ಅವರು ಸಾಕಷ್ಟು ಮಾತುಕತೆ ನಡೆಸಿ ಮನವೊಲಿಕೆ ಪ್ರಯತ್ನ ನಡೆಸಿದ್ದರೂ ಕೂಡ ಕೇರಳದ ವೈನಾಡು ಪ್ರದೇಶವನ್ನು ಪ್ರತಿನಿಧಿಸುತ್ತಿರುವ ತನ್ನ ಮಾತೇ ಅಂತಿಮ ಎಂದು ಹೇಳಿದ್ದಾರೆ. ಮುಂದೊಂದು ದಿನ ಪ್ರಿಯಾಂಕ ಕೇರಳದ ಮುಖ್ಯಮಂತ್ರಿಯಾದರೂ ಕೂಡ ಅಚ್ಚರಿ ಪಡಬೇಕಾಗಿಲ್ಲ. ಆದರೆ ರಾಹುಲ್ ಗಾಂಧಿಗೆ ಇದು ಅಕ್ಕ ನೀಡಿದ ದೊಡ್ಡ ಪೆಟ್ಟು ಎಂದು ಹೇಳಲಾಗುತ್ತಿದೆ. ವೇಣುಗೋಪಾಲ್ ಅವರು ಕೊನೆ ಕ್ಷಣದಲ್ಲಿ ರಾಹುಲ್ ಗಾಂಧಿಯವರನ್ನು ಭೇಟಿ ಮಾಡಲು ನವದೆಹಲಿಯಲ್ಲಿದ್ದಾಗಲೇ ದಿಢೀರನೇ ಸತೀಶನ್ ಅವರ ಹೆಸರನ್ನು ಘೋಷಿಸಿರುವುದು ಇದಕ್ಕೆ ಪುಷ್ಟಿ ನೀಡಿದಂತಿದೆ. ಅಕ್ಕನ ಮುಂದೆ ಈಗ ತಮನ ಆಟ ನಡೆಯಲಿಲ್ಲ, ಸೋತಿದ್ದಾರೆಂದು ಸಾಮಾಜಿಕ ಜಾಲತಾಣದಲ್ಲಿ ವ್ಯಾಪಕ ಚರ್ಚೆಗಳು ನಡೆಯುತ್ತಿವೆ.

### ನಂದಿಗ್ರಾಮ ವಿಧಾನಸಭಾ ಕ್ಷೇತ್ರಕ್ಕೆ ಪ. ಬಂ. ಸಿಎಂ ಸುವೇಂದು ರಾಜೀನಾಮೆ

**ಕೋಲ್ಕತ್ತ:** ಪಶ್ಚಿಮ ಬಂಗಾಳದ ಮುಖ್ಯಮಂತ್ರಿ ಸುವೇಂದು ಅಧಿಕಾರಿ ಅವರು ಶುಕ್ರವಾರ ನಂದಿಗ್ರಾಮ ವಿಧಾನಸಭಾ ಕ್ಷೇತ್ರಕ್ಕೆ ರಾಜೀನಾಮೆ ನೀಡಿದ್ದು, ಭವಾನಿಪುರ ಕ್ಷೇತ್ರವನ್ನು ಉಳಿಸಿಕೊಳ್ಳಲು ನಿರ್ಧರಿಸಿದ್ದಾರೆ. ವಿಧಾನಸಭೆಯ ನಿಯಮಗಳ ಪ್ರಕಾರ ನಿಗದಿಪಡಿಸಲಾದ ಕಡ್ಡಾಯ 14 ದಿನಗಳ ಅವಧಿಯೊಳಗೆ ಅಧಿಕಾರಿ ಅವರು ರಾಜೀನಾಮೆಯನ್ನು ಸಭಾಪತಿ ರತೀಂದ್ರ ಬೋಸ್ ಅವರಿಗೆ ಸಲ್ಲಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ. ಈಚೆಗೆ ನಡೆದ ಪಶ್ಚಿಮ ಬಂಗಾಳ ವಿಧಾನಸಭಾ ಚುನಾವಣೆಯಲ್ಲಿ ಸುವೇಂದು ಅಧಿಕಾರಿ ಅವರು ಪೂರ್ವ ಮೇದಿನಿಪುರ ಜಿಲ್ಲೆಯ ನಂದಿಗ್ರಾಮ ಮತ್ತು ದಕ್ಷಿಣ ಕೋಲ್ಕತ್ತದ ಭವಾನಿಪುರ ಎರಡೂ ಕ್ಷೇತ್ರಗಳಿಂದ ಸ್ಪರ್ಧಿಸಿದ್ದರು.



ನಂದಿಗ್ರಾಮ ಕ್ಷೇತ್ರದಲ್ಲಿ ತೃಣಮೂಲ ಕಾಂಗ್ರೆಸ್ ಪಕ್ಷದ (ಟಿಎಂಸಿ) ಅಭ್ಯರ್ಥಿ ಪವಿತ್ರಕರ್ ವಿರುದ್ಧ 9,665 ಮತಗಳ ಅಂತರದಿಂದ ಅಧಿಕಾರಿ ಗೆಲುವು ಸಾಧಿಸಿದ್ದರು. ಭವಾನಿಪುರ ಕ್ಷೇತ್ರದಲ್ಲಿ ಟಿಎಂಸಿ ಮುಖ್ಯಸ್ಥೆ, ಮಾಜಿ ಸಿಎಂ ಮಮತಾ ಬ್ಯಾನರ್ಜಿ ವಿರುದ್ಧ 15,105 ಮತಗಳ ಅಂತರದಿಂದ ಅಧಿಕಾರಿ ಗೆಲುವಿನ ನಗೆ ಬೀರಿದ್ದರು. ಪಶ್ಚಿಮ ಬಂಗಾಳ ವಿಧಾನಸಭೆಯ ಒಟ್ಟು 294 ಸ್ಥಾನಗಳಲ್ಲಿ ಬಿಜೆಪಿಯು 207 ಸ್ಥಾನಗಳನ್ನು ಗೆದ್ದಿದ್ದು, 15 ವರ್ಷಗಳ ತೃಣಮೂಲ ಕಾಂಗ್ರೆಸ್ (ಟಿಎಂಸಿ) ಆಡಳಿತವನ್ನು ಬದಿಗೆ ಸರಿಸಿ, ಮೊದಲ ಬಾರಿ ಆಡಳಿತದ ಚುಕ್ಕಾಣಿ ಹಿಡಿದಿದೆ.

# ಬ್ರಿಕ್ಸ್ ಸದಸ್ಯ ರಾಷ್ಟ್ರಗಳ ವಿದೇಶಾಂಗ ಸಚಿವರ ಸಭೆ

## ಬ್ರಿಕ್ಸ್ ಸಭೆಯಲ್ಲಿ ಭಾರತದಿಂದ ಹಾರ್ಮುಜ್ ಬಿಕ್ಕಟ್ಟು ಪರಿಹಾರಕ್ಕೆ ಪ್ರಾಯೋಗಿಕ ಮಾರ್ಗದ ಸಲಹೆ; ಇರಾನ್ ಪ್ರತಿಕ್ರಿಯೆ

**ಹೊಸದಿಲ್ಲಿ:** ಮಧ್ಯಪ್ರಾಚ್ಯ ಬಿಕ್ಕಟ್ಟು ಮತ್ತು ಹಾರ್ಮುಜ್ ಜಲಸಂಧಿ ಮತ್ತು ಕೆಂಪು ಸಮುದ್ರದಲ್ಲಿನ ಇಂಧನ ಪೂರೈಕೆ ಮತ್ತು ಕಡಲ ಸ್ಥಿರತೆಯ ಮೇಲೆ ಅದರ ಪರಿಣಾಮದ ಬಗ್ಗೆ ಭಾರತವು ಗಂಭೀರ ಕಳವಳ ವ್ಯಕ್ತಪಡಿಸಿದೆ. ರಾಷ್ಟ್ರ ರಾಜಧಾನಿ ಹೊಸದಿಲ್ಲಿಯಲ್ಲಿ ನಡೆದ ಬ್ರಿಕ್ಸ್ ವಿದೇಶಾಂಗ ಸಚಿವರ ಸಭೆಯಲ್ಲಿ ಭಾರತದ ಡಾ. ಎಸ್. ಜೈಶಂಕರ್ ಅವರು, ಹಾರ್ಮುಜ್ ಜಲಸಂಧಿ ಬಿಕ್ಕಟ್ಟು ಪರಿಹಾರಕ್ಕೆ ಪ್ರಾಯೋಗಿಕ ಮಾರ್ಗಗಳನ್ನು ಅಭಿವೃದ್ಧಿಪಡಿಸುವಂತೆ ಸಲಹೆ ನೀಡಿದ್ದಾರೆ. ಬ್ರಿಕ್ಸ್ ಒಗ್ಗಟ್ಟಿಗೆ ಜೈಶಂಕರ್ ಕರೆ ಸದಸ್ಯ ರಾಷ್ಟ್ರಗಳನ್ನು ಪರಿಣಾಮಕಾರಿಯಾಗಿ ತಲುಪಿದೆ.

ಇರಾನ್ ಮತ್ತು ಸಂಯುಕ್ತ ಅರಬ್ ರಾಷ್ಟ್ರ ಸೇರಿದಂತೆ ಬ್ರಿಕ್ಸ್ ರಾಷ್ಟ್ರಗಳು, ಅಭೂತಪೂರ್ವ ಭೌಗೋಳಿಕ ರಾಜಕೀಯ ಮತ್ತು ಆರ್ಥಿಕ ಅನಿಶ್ಚಿತತೆ ಮತ್ತು ಏಕಪಕ್ಷೀಯ ಬಲವಂತದ ನಿರ್ಬಂಧಗಳನ್ನು ನಿವಾರಿಸಲು, ಪ್ರಾಯೋಗಿಕ ಮಾರ್ಗಗಳನ್ನು ಅಭಿವೃದ್ಧಿಪಡಿಸಬೇಕು. ಹಾರ್ಮುಜ್ ಜಲಸಂಧಿ ಎಷ್ಟು ಬೇಗ ಸಂಚಾರ ಮುಕ್ತವಾಗುತ್ತದೆಯೋ, ಅಷ್ಟು ಬೇಗ ಜಾಗತಿಕ ತೈಲ ಪೂರೈಕೆ ಸರಪಳಿ ಗಟ್ಟಿಗೊಳ್ಳುತ್ತದೆ. ಇದಕ್ಕೆ ಪ್ರಾದೇಶಿಕ ಮತ್ತು ಜಾಗತಿಕ ಪ್ರಯತ್ನಗಳು ಮುಂದುವರೆಯಬೇಕು ಎಂದು ಡಾ.ಎಸ್. ಜೈಶಂಕರ್ ಅಭಿಪ್ರಾಯ ವ್ಯಕ್ತಪಡಿಸಿದರು.

ಇರಾನ್ ವಿದೇಶಾಂಗ ಸಚಿವ ಸೈಯ್ಯದ್ ಅಬ್ಬಾಸ್ ಅರಾಘ್ಚಿ ಮತ್ತು ಯುಎಇ ವಿದೇಶಾಂಗ ರಾಜ್ಯ ಸಚಿವ ವ್ಯವಹಾರಗಳ ರಾಜ್ಯ ಸಚಿವ ಖಲೀಫಾ ಶಾಹೀನ್ ಅಲ್ ಮರಾರ್ ಅವರನ್ನು ಉದ್ದೇಶಿಸಿ ಮಾತನಾಡಿದ ಭಾರತದ ವಿದೇಶಾಂಗ ಸಚಿವರು, ಹಾರ್ಮುಜ್‌ನ ದಿಗ್ಬಂಧನ ಹೀಗೆಯೇ ಮುಂದುವರೆಯಲು ಸಾಧ್ಯವಿಲ್ಲ.ಹಾರ್ಮುಜ್ ಜಲಸಂಧಿ ಮತ್ತು ಕೆಂಪು ಸಮುದ್ರ ಸೇರಿದಂತೆ ಅಂತಾರಾರಾಷ್ಟ್ರೀಯ ಜಲಮಾರ್ಗಗಳ ಮೂಲಕ ಸುರಕ್ಷಿತ ಮತ್ತು ಅಡೆತಡೆಯಿಲ್ಲದ ತೈಲ ಹರಿವು ಜಾಗತಿಕ ಆರ್ಥಿಕ ಯೋಗಕ್ಷೇಮಕ್ಕೆ ಅತ್ಯಗತ್ಯವಾಗಿದೆ ಎಂದು ಹೇಳಿದರು.

**ಭಾರತ ನೀಡಿರುವ ಸಲಹೆ**

**ಶಾಂತಿ ಮಂತ್ರ:** ಯಾವುದೇ ರಾಷ್ಟ್ರವನ್ನು ಪ್ರತ್ಯೇಕಿಸದೆ, ಸಾರ್ವಭೌಮತ್ವ, ಪ್ರಾದೇಶಿಕ ಸಮಗ್ರತೆಗೆ ಗೌರವ ನೀಡುವುದು ಅತ್ಯಗತ್ಯ. ಅಂತಾರಾಷ್ಟ್ರೀಯ ಸಂಬಂಧಗಳನ್ನು ಆಧಾರವಾಗಿಟ್ಟುಕೊಂಡು, ಸಂವಾದ, ರಾಜತಾಂತ್ರಿಕತೆ ಮಾರ್ಗವು ಸಂಘರ್ಷ ಪರಿಹಾರಕ್ಕೆ ಏಕೈಕ ಸುಸ್ಥಿರ ದಾರಿಯನ್ನು ತೆರೆಯುತ್ತದೆ. ಅಂತಾರಾಷ್ಟ್ರೀಯ ಕಾನೂನನ್ನು ಎತ್ತಿಹಿಡಿಯಲು, ನಾಗರಿಕರನ್ನು ರಕ್ಷಿಸಲು, ಸಾರ್ವಜನಿಕ ಮೂಲಸೌಕರ್ಯವನ್ನು ಗುರಿಯಾಗಿಸಿಕೊಳ್ಳುವುದನ್ನು ತಪ್ಪಿಸಲು ಶಾಂತಿ ಅತ್ಯಗತ್ಯ ಎಂದು ಎಸ್. ಜೈಶಂಕರ್ ಹೇಳಿದರು. ಚೀನಾ ಪ್ರವಾಸದಲ್ಲಿರುವ ಅಮೆರಿಕ ಇನ್ನು ಹಾರ್ಮುಜ್ ಬಿಕ್ಕಟ್ಟು ಪರಿಹಾರಕ್ಕೆ ಭಾರತ ನೀಡಿರುವ ಸಲಹೆಗಳ ಕುರಿತು ಪ್ರತಿಕ್ರಿಯಿಸಿದ ಇರಾನ್ ವಿದೇಶಾಂಗ ಸಚಿವ ಸೈಯ್ಯದ್ ಅಬ್ಬಾಸ್ ಅರಾಘ್ಚಿ, ಅಕ್ರಮ ವಿಸ್ತರಣಾವಾದ, ಯುದ್ಧೋನ್ಮಾದಕ್ಕೆ ನಾವು ಬಲಿಯಾಗಿದೇವೆ. ಬ್ರಿಕ್ಸ್ ರಾಷ್ಟ್ರಗಳು ಅಮೆರಿಕ ಮತ್ತು ಇಸ್ರೇಲ್‌ನ ಅಂತಾರಾಷ್ಟ್ರೀಯ ಕಾನೂನಿನ ಉಲ್ಲಂಘನೆಯನ್ನು ಬಲವಾಗಿ ಖಂಡಿಸಬೇಕು. ಪಾಶ್ಚಿಮಾತ್ಯ ಪ್ರಾಬಲ್ಯ, ಅಮೆರಿಕದ ಏಕಪಕ್ಷೀಯ ಅಮಾನವೀಯ ಯುದ್ಧಗಳನ್ನು ವಿರೋಧಿಸಬೇಕು ಎಂದು ಬ್ರಿಕ್ಸ್ ರಾಷ್ಟ್ರಗಳಿಗೆ ಕರೆ ನೀಡಿದರು.



ಇತ್ತೀಚಿಗೆ ದಕ್ಷಿಣ ಕೊರಿಯಾ ಅಧ್ಯಕ್ಷ ಲಿ ಜೇ ಮ್ಯುಂಗ್ ಭಾರತ ಪ್ರವಾಸದಲ್ಲಿ ಸಂದರ್ಭದಲ್ಲಿ ಭಾರತದ ಹಾರ್ಮುಜ್ ಕಾರ್ಯತಂತ್ರಕ್ಕೆ ದ.ಕೊರಿಯಾ ಬೆಂಬಲ ಘೋಷಿಸಿತ್ತು. ಮುಂದುವರೆದು ಇರಾನ್ ವಿರುದ್ಧದ ಅಕ್ರಮ ಆಕ್ರಮಣ ಸೇರಿದಂತೆ ಅಮೆರಿಕ ಮತ್ತು ಇಸ್ರೇಲ್‌ನ ಅಂತಾರಾಷ್ಟ್ರೀಯ ಕಾನೂನಿನ ಉಲ್ಲಂಘನೆಗಳನ್ನು ಸ್ಪಷ್ಟವಾಗಿ ಖಂಡಿಸಲು ಇರಾನ್, ಬ್ರಿಕ್ಸ್ ಸದಸ್ಯ ರಾಷ್ಟ್ರಗಳು ಮತ್ತು ಅಂತಾರಾಷ್ಟ್ರೀಯ ಸಮುದಾಯದ ಎಲ್ಲಾ ಜವಾಬ್ದಾರಿಯುತ ಸದಸ್ಯರಿಗೆ ಕರೆ ನೀಡುತ್ತದೆ. ಮಧ್ಯಪ್ರಾಚ್ಯ ಸಂಘರ್ಷ ತಿಳಿಗೊಳಿಸಲು ಭಾರತ ನಡೆಸಿದ ಪ್ರಯತ್ನಗಳನ್ನು ಇರಾನ್ ಗೌರವಿಸುತ್ತದೆ ಎಂದು ಅಬ್ಬಾಸ್ ಸರಾಘ್ಚಿ ಇದೇ ವೇಳೆ ಹೇಳಿದರು.

**ಇರಾನ್ ಹೇಳಿದ್ದೇನು?**

**ಎರಡು ಗಲ್ಫ್ ನೆರೆಹೊರೆಯವರ ನಡುವಿನ ಆಳವಾದ ಅಪನಂಬಿಕೆಯನ್ನು ಗಮನದಲ್ಲಿಟ್ಟುಕೊಂಡು, ಭಾರತದ ವಿದೇಶಾಂಗ ಸಚಿವ ಡಾ. ಎಸ್. ಜೈಶಂಕರ್ ಇಂಧನ ಅಡಚಣೆಗಳು ಮತ್ತು ಏಕಪಕ್ಷೀಯ ಬಲವಂತದ ಕ್ರಮಗಳು ಮತ್ತು ನಿರ್ಬಂಧಗಳನ್ನು ನಿವಾರಿಸುವ ಮೂಲಕ ಎರಡೂ ಕಡೆಯವರನ್ನು ರಾಜತಾಂತ್ರಿಕವಾಗಿ ಸಮತೋಲನಗೊಳಿಸಲು ಪ್ರಯತ್ನಿಸಿದರು. ಹಾರ್ಮುಜ್ ಜಲಸಂಧಿ ಮತ್ತು ಕೆಂಪು ಸಮುದ್ರದ ಮೂಲಕ ಸುರಕ್ಷಿತ ಮತ್ತು ಅಡೆತಡೆಯಿಲ್ಲದ ತೈಲ ಹರಿವನ್ನು ಖಚಿತಪಡಿಸಿಕೊಳ್ಳುವುದನ್ನು ಅವರು ಬಲವಾಗಿ ಪ್ರತಿಪಾದಿಸಿದರು. ಇದೇ ವೇಳೆ ಜೈಶಂಕರ್ ಗಾಜಾದಲ್ಲಿನ ಸಂಘರ್ಷದ ಗಂಭೀರ ಮಾನವೀಯ ಪರಿಣಾಮಗಳ ಬಗ್ಗೆ ತೀವ್ರ ಕಳವಳ ವ್ಯಕ್ತಪಡಿಸಿದರು.**

**ಬ್ರಿಕ್ಸ್ ಕುರಿತು**

**ಮೂಲತಃ ಬ್ರೆಜಿಲ್, ರಷ್ಯಾ, ಭಾರತ, ಚೀನಾ ಮತ್ತು ದಕ್ಷಿಣ ಆಫ್ರಿಕಾವನ್ನು ಒಳಗೊಂಡಿದ್ದ ಬ್ರಿಕ್ಸ್, 2024ರಲ್ಲಿ ಈಜಿಪ್ಟ್, ಇಥಿಯೋಪಿಯಾ, ಇರಾನ್ ಮತ್ತು ಯುಎಇಗಳನ್ನು ಸೇರಿಸಿಕೊಂಡಿದೆ. 2025ರಲ್ಲಿ ಇಂಡೋನೇಷ್ಯಾ ಕೂಡ ಬ್ರಿಕ್ಸ್‌ನ ಭಾಗವಾಗಿದೆ. ಬ್ರಿಕ್ಸ್ ವಿಶ್ವದ 11 ಪ್ರಮುಖ ಉದಯೋನ್ಮುಖ ಆರ್ಥಿಕತೆಗಳನ್ನು ಒಟ್ಟುಗೂಡಿಸುವ ಮೂಲಕ, ಪ್ರಭಾವಶಾಲಿ ಜಾಗತಿಕ ಗುಂಪಾಗಿ ಹೊರಹೊಮ್ಮಿದೆ. ಇದು ಜಾಗತಿಕ ಜನಸಂಖ್ಯೆಯ ಸುಮಾರು ಶೇ.49.5ರಷ್ಟು, ಜಾಗತಿಕ ಜಿಡಿಪಿಯ ಸುಮಾರು ಶೇ. 40ರಷ್ಟು ಮತ್ತು ಜಾಗತಿಕ ವ್ಯಾಪಾರದ ಸುಮಾರು ಶೇ. 26ರಷ್ಟನ್ನು ಪ್ರತಿನಿಧಿಸುತ್ತದೆ.**

